ಕಲಬುರಗಿ Kalaburagi | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಮಂಗಳೂರು Mangaluru | ದಾವಣಗೆರೆ Davanagere | ಬಾಗಲಕೋಟೆ Bagalakote | ಬೆಳಗಾವಿ Belagavi | ಸಂಪುಟ Volume 28 | ಸಂಚಿಕೆ Issue 17 | ಪುಟ Pages 12 | ಬುಧವಾರ 6 ಮೇ 2026 | RNI REGN NO. KARKAN/1999/2674 | www.epaper.samyukthakarnataka.com | Samyuktha Karnataka | @samyuktakarnat2 | ₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ

ಕನ್ನಡಿಗರ ಸಾಕ್ಷಿಪ್ರಜ್ಞೆ

samyuktha karnataka

ಮುಸ್ಲಿಮರ ಓಟು ಕಸಿದು ಕಾಂಗ್ರೆಸ್‌ಗೆ ಮಗ್ಗುಲಮುಳ್ಳು ಆಗುತ್ತಾ ಎಸ್‌ಡಿಪಿಐ? 7

ಬಂಗಾಳ: ಚುನಾವಣೋತ್ತರ ಹಿಂಸಾಚಾರ, ಇಬ್ಬರು ಟಿಎಂಸಿ ಕಾರ್ಯಕರ್ತರು ಬಲಿ 9

ಐಪಿಎಲ್‌ನಲ್ಲಿ 277 ಪಂದ್ಯ ಆಡಿ ಕೊಹ್ಲಿ ದಾಖಲೆ ಮುರಿದ ರೋಹಿತ್ ಶರ್ಮ 12

ಡೊನಾಲ್ಡ್ ಟ್ರಂಪ್ ರೀತಿ ಬಂಗಾಳದಲ್ಲಿ ದೀದಿ ಹುಚ್ಚಾಟ!

ನಾನ್ ಕುರ್ಚಿ ಬಿಡಲ್ಲ: ಮಮತಾ

ಮೋಸ ಮಾಡಿ ಬಿಜೆಪಿ ಗೆದ್ದಿದೆ, ಹೀಗಾಗಿ ನಾನು ಸೋತಿಲ್ಲ: ಬಂಗಾಳ ಸಿಎಂ ಬಿಗಿ ಪಟ್ಟು

2021ರಲ್ಲಿ ಬೈಡೆನ್‌ಗೆ ಅಧಿಕಾರ ಬಿಡೋದಿಲ್ಲ ಎಂದು ಟ್ರಂಪ್ ಹೀಗೇ ಗಲಾಟೆ ಮಾಡಿದ್ದರು

ಕೋಲ್ಕತಾ: 2020ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತರೂ ವೈಟ್ ಹೌಸ್ ಬಿಟ್ಟು ಬರಲು ಡೊನಾಲ್ಡ್ ಟ್ರಂಪ್ ನಿರಾಕರಿಸಿದಂತೆಯೇ ಈಗ ಪಶ್ಚಿಮ ಬಂಗಾಳ

ಚುನಾವಣೆಯಲ್ಲಿ ಹೀನಾಯವಾಗಿ ಸೋಲುಂಡ ಬಳಿಕವೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಪಟ್ಟು ಹಿಡಿದಿದ್ದಾರೆ.

ಸೋಮವಾರ ಪ್ರಕಟವಾದ ಪಶ್ಚಿಮ ಬಂಗಾಳ ಫಲಿತಾಂಶದಲ್ಲಿ ಬಿಜೆಪಿ 207 ಸ್ಥಾನಗಳೊಂದಿಗೆ ಬಹುಮತ ಪಡೆದಿದ್ದರೆ, ಟಿಎಂಸಿ ಕೇವಲ 80 ಸ್ಥಾನಗಳಿಗೆ ಸೀಮಿತವಾಗಿದೆ. ಸ್ವತಃ ಮಮತಾ ಅವರೇ ಭವಾನಿಪುರದಲ್ಲಿ ಸೋಲುಂಡಿದ್ದಾರೆ.

ಈ ಬೆನ್ನಲ್ಲೇ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿರುವ ಅವರು, ನಾನು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ನಾವು ಚುನಾವಣೆಯಲ್ಲಿ ಸೋತಿಲ್ಲ, ನಮ್ಮನ್ನು ಪಿತೂರಿಯ ಮೂಲಕ ಸೋಲಿಸಲಾಗಿದೆ. ಇದು ಜನರ ತೀರ್ಪಲ್ಲ, ಬದಲಾಗಿ ಚುನಾವಣಾ ಆಯೋಗ ಮತ್ತು ಬಿಜೆಪಿ ಲೂಟಿ ಎಂದು ಆರೋಪಿಸಿದರು. ಈ ಹೇಳಿಕೆಯು 2021ರಲ್ಲಿ ಟ್ರಂಪ್ ಅವರು "ನಮ್ಮಿಂದ ಚುನಾವಣೆಯನ್ನು ಕದಿಯಲಾಗಿದೆ" ಎಂದು ಮಾಡಿದ್ದ ಆರೋಪವನ್ನೇ ಹೋಲುತ್ತಿದೆ. ಪುಟ 7

100 ಕ್ಷೇತ್ರ ಲೂಟಿ

"ಚುನಾವಣೆಯಲ್ಲಿ ನಾನು ಸೋತಿಲ್ಲ. ಪಿತೂರಿ ನಡೆಸಿ, ವ್ಯವಸ್ಥಿತವಾಗಿ ನಮ್ಮನ್ನು ಸೋಲಿಸಲಾಗಿದೆ. ಇದು ಜನರ ತೀರ್ಪಲ್ಲ, ಬದಲಾಗಿ ಬಿಜೆಪಿ ಮತ್ತು ಚುನಾವಣಾ ಆಯೋಗದಿಂದ 100 ಕ್ಷೇತ್ರಗಳ ಲೂಟಿ ಮಾಡಲಾಗಿದೆ. ನಮ್ಮಿಂದ ಚುನಾವಣೆಯಲ್ಲಿ ಕದಿಯಲಾಗಿದೆ. ಹೀಗಾಗಿ ನಾನು ರಾಜೀನಾಮೆ ನೀಡುವ ಪ್ರಶ್ನೆಯೇ ಬರಲ್ಲ.

▪ **ಮಮತಾ ಬ್ಯಾನರ್ಜಿ,** ಟಿಎಂಸಿ ನಾಯಕಿ

ನಿರ್ಗಮಿತ ಸಿಎಂ ಕುರ್ಚಿ ಬಿಡದಿದ್ದರೆ ಮುಂದೇನಾಗುತ್ತೆ?

- ಮುಖ್ಯಮಂತ್ರಿಯೊಬ್ಬರು ವಿಧಾನಸಭೇಲಿ ಬಹುಮತ ಕಳೆದುಕೊಂಡಾಗ ಮತ್ತು ಚುನಾವಣೇಲಿ ಸೋತಾಗ ರಾಜೀನಾಮೆ ನೀಡುವುದು ಅನಿವಾರ್ಯ ಆಗಿರುತ್ತದ
- ಚುನಾವಣೇಲಿ ಬಹುಮತ ಕಳೆದುಕೊಂಡ ಸರ್ಕಾರಕ್ಕೆ ರಾಜ್ಯಪಾಲರು ಬಹುಮತ ಸಾಬೀತುಪಡಿಸಲು ಅಥವಾ ರಾಜೀನಾಮೆ ನೀಡಲು ಸೂಚಿಸುವ ಅಧಿಕಾರ ಇದೆ.
- ಬಹುಮತವಿಲ್ಲದಿದ್ದರೂ ಸಿಎಂ ಪಟ್ಟ ಬಿಡದಿದ್ದರೆ, ಸಂವಿಧಾನದ ಆರ್ಟಿಕಲ್ 164ರ ಅಡಿಯಲ್ಲಿ ರಾಜ್ಯಪಾಲರು ಸರ್ಕಾರವನ್ನು ವಜಾಗೊಳಿಸಬಹುದು.
- ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನನ್ನು ಸರ್ಕಾರ ರಚಿಸಲು ರಾಜ್ಯಪಾಲರು ಆಹ್ವಾನಿಸುತ್ತಾರೆ.
- ಮಮತಾ ತಮ್ಮ ಹಠ ಮುಂದುವರಿಸಿದರೇ ಈ ಬಿಕ್ಕಟ್ಟು ಸುಪ್ರೀಂ ಮೆಟ್ಟಿಲೇರುತ್ತದೆ.

9ಕ್ಕೆ ಬಿಜೆಪಿ ಸಿಎಂ ಸುವೇಂದು ಪ್ರಮಾಣ?

ಪಶ್ಚಿಮ ಬಂಗಾಳದಲ್ಲಿ ದಶಕಗಳ ಟಿಎಂಸಿ ಆಡಳಿತಕ್ಕೆ ಅಂತ್ಯ ಹಾಡಿರುವ ಬಿಜೆಪಿ ಇದೀಗ ಸರ್ಕಾರ ರಚನೆಗೆ ಸಜ್ಜಾಗಿವೆ. ಮೇ 9ರಂದು ರವೀಂದ್ರನಾಥ್ ಠಾಗೂರ್ ಅವರ ಜನ್ಮದಿನದಂದೇ ಸುವೇಂದು ಅಧಿಕಾರಿ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. ಅದಾಗ್ಯೂ ದಿಲೀಪ್ ಘೋಷ್ ಅವರ ಹೆಸರೂ ಸಿಎಂ ರೇಸ್‌ನಲ್ಲಿ ಕೇಳಿಬರುತ್ತಿದೆ. ಈ ನಡುವೆ ಪಶ್ಚಿಮ ಬಂಗಾಳದ ಮುಂದಿನ ರಾಜನೀತಿ ನಿರ್ಧರಿಸಲು ಸಚಿವ ಅಮಿತ್ ಶಾ ಅವರನ್ನು ಕೇಂದ್ರ ವೀಕ್ಷಕರನ್ನಾಗಿ ನೇಮಿಸಲಾಗಿದೆ.

ಬಿಜೆಪಿ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ ಎಸ್‌ಐಆರ್

ಪಶ್ಚಿಮ ಬಂಗಾಳದಲ್ಲಿ 5000ದಿಂದ 15,000 ಮತಗಳ ಡಿಲೀಟ್ ಆಗಿರುವ 62 ಕ್ಷೇತ್ರಗಳಿವೆ. ಈ ಪೈಕಿ 50 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿದೆ. 15ರಿಂದ 25 ಸಾವಿರ ಮತಗಳು ಡಿಲೀಟ್ ಆಗಿರುವ 67 ಕ್ಷೇತ್ರಗಳಿದ್ದು, ಆ ಪೈಕಿ 47 ಕ್ಷೇತ್ರಗಳಲ್ಲಿ ಬಿಜೆಪಿ, 19ರಲ್ಲಿ ಟಿಎಂಸಿ ಮತ್ತು ಒಂದರಲ್ಲಿ ಕಾಂಗ್ರೆಸ್ ಗೆದ್ದಿದೆ. 25 ಸಾವಿರಕ್ಕೂ ಹೆಚ್ಚು ಮತ ಡಿಲೀಟ್ ಆಗಿರುವ 147 ಕ್ಷೇತ್ರಗಳ ಪೈಕಿ 95ರಲ್ಲಿ ಬಿಜೆಪಿ ಗೆದ್ದಿದ್ದರೆ, 51ರಲ್ಲಿ ಟಿಎಂಸಿ ಮತ್ತು 1ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಬಂಗಾಳ ಜಯ: ಮೋದಿಗೆ ಟ್ರಂಪ್ ಅಭಿನಂದನೆ!

ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದ್ದಕ್ಕೆ ಪ್ರಧಾನಿ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದನೆ ಕೋರಿರುವುದಾಗಿ ವೈಟ್‌ಹೌಸ್ ತಿಳಿಸಿದೆ. ಇತ್ತೀಚಿನ ಚುನಾವಣೆಯಲ್ಲಿ ಸಾಧಿಸಿರುವ ಐತಿಹಾಸಿಕ ಜಯಕ್ಕೆ ಟ್ರಂಪ್ ಅಭಿನಂದನೆ ಕೋರಿದ್ದಾರೆ ಎಂದು ವೈಟ್‌ಹೌಸ್ ವಕ್ತಾರರಾದ ಕುಶ್ ದೇಸಾಯಿ ಹೇಳಿದ್ದಾರೆ.

ಸರ್ಕಾರ ರಚನೆಗೆ ವಿಜಯ್ ಕಸರತ್ತು

ಇಂದು ಗೌರ್ನರ್ ಬಳಿ ಹಕ್ಕು ಮಂಡನೆ? ನಾಳೆ ನೆಹರೂ ಸ್ಟೇಡಿಯಂನಲ್ಲಿ ಶಪಥ?

ಚೆನ್ನೈ: ತಮಿಳುನಾಡಿನಲ್ಲಿ 50 ವರ್ಷಗಳ ಕಾಲ ಅಡಳಿತ ನಡೆಸಿದ ದ್ರಾವಿಡ ಪಕ್ಷಗಳ ಭದ್ರಕೋಟೆ ಛಿದ್ರಗೊಳಿಸಿದ ಟಿವಿಕೆ ನಾಯಕ ವಿಜಯ್ ಈಗ ಹೊಸ ಸರ್ಕಾರ

ರಚನೆಗೆ ಕಸರತ್ತು ನಡೆಸಿದ್ದಾರೆ. ಚೆನ್ನೈಯ ಜವಾಹರ್‌ಲಾಲ್ ನೆಹರೂ ಇನ್‌ಡೋರ್ ಸ್ಟೇಡಿಯಂನಲ್ಲಿ ಮೇ 7ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲು ಅವರು ನಿರ್ಧರಿಸುವುದರ ಜೊತೆಗೆ ಸರಳ ಬಹುಮತಕ್ಕೆ ಅಗತ್ಯವಿರುವ 10 ಸ್ಥಾನಗಳ ಕೊರತೆ ನೀಗಿಸುವ ಪ್ರಯತ್ನ ಮುಂದುವರಿಸಿದ್ದಾರೆ. ವಿಜಯ್ ಅವರ ಟಿವಿಕೆ ಒಟ್ಟು 108 ಸ್ಥಾನಗಳಲ್ಲಿ ಗೆದ್ದಿದೆ.

ಇದೇ ವೇಳೆ ವಿಜಯ್ ಅವರು ರಾಜ್ಯಪಾಲರನ್ನು ಬುಧವಾರ ಭೇಟಿಯಾಗಿ ಸರ್ಕಾರ ರಚನೆಗೆ ಅಹವಾಲು ಮಂಡಿಸುವ ಸಾಧ್ಯತೆ ಇದೆ. ವಿಜಯ್ ಅವರೇ ಟಿವಿಕೆ ಪ್ರಮುಖರಾಗಿರುವುದರಿಂದ ವಿಧಾನಸಭೆಯಲ್ಲಿ ಅವರು ಪಕ್ಷದ ನಾಯಕರಾಗಿರುತ್ತಾರೆ. ತನ್ಮೂಲಕ ಮುಖ್ಯಮಂತ್ರಿ ಪದವಿಗೇರಲಿದ್ದಾರೆ. ಈ ಮಧ್ಯೆ ತಿರುಚ್ಚಿ ಹಾಗೂ ಪೆರಂಬೂರು ಕ್ಷೇತ್ರಗಳಲ್ಲಿ ಜಯ ದಾಖಲಿಸಿರುವ ವಿಜಯ್ ಈಗ ತಿರುಚ್ಚಿ ಕ್ಷೇತ್ರಕ್ಕೆ ರಾಜೀನಾಮೆ ನೀಡಿ ಪೆರಂಬೂರು ಕ್ಷೇತ್ರಗಳನ್ನು ಉಳಿಸಿಕೊಳ್ಳಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿಗೆ ಧನ್ಯವಾದ

"ರಾಜಕೀಯವನ್ನೂ ಮೀರಿ, ನಾವು ತಮಿಳುನಾಡಿನ ಪ್ರಗತಿ ಮತ್ತು ಜನರ ಕಲ್ಯಾಣದ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸುತ್ತೇವೆ. ಈ ಪ್ರಯತ್ನದಲ್ಲಿ ಕೇಂದ್ರ ಸರ್ಕಾರದ ಬೆಂಬಲವನ್ನು ಎದುರು ನೋಡುತ್ತಿದ್ದೇವೆ

▪ **ವಿಜಯ್,** ಟಿವಿಕೆ ನಾಯಕ

ಬಹುಮತ ಹೇಗೆ ಗಿಟ್ಟಿಸಬಹುದು?

- ಪಿಎಂಕೆ, ಎಡಪಕ್ಷಗಳು, ವಿಸಿಕೆ ಪಕ್ಷಗಳ ಬೆಂಬಲ ಪಡೆದರೆ ಟಿವಿಕೆ ಬಹುಮತದ ಬಲ 121ಕ್ಕೇರುವ ಸಾಧ್ಯತೆ ಇದೆ.
- ಐದು ಸ್ಥಾನ ಗೆದ್ದಿರುವ ಕಾಂಗ್ರೆಸ್ ಮತ್ತು ಸಣ್ಣಪುಟ್ಟ ಪಕ್ಷಗಳ ಬೆಂಬಲಕ್ಕೆ ಮೊರೆ ಹೋದರೂ ಬಹುಮತ ನಿಶ್ಚಿತ
- ಟಿವಿಕೆ ಭರವಸೆಗಳ ಈಡೇರಿಸಲು ಕೇಂದ್ರದ ಅನುದಾನ ಅಗತ್ಯವಿರುವುದರಿಂದ ಎಐಎಡಿಎಂಕೆ ಬಾಹ್ಯ ಬೆಂಬಲ ಕೋರಬಹುದು

ಪಿಣರಾಯಿ, ಸ್ಟಾಲಿನ್ ರಿಸೈನ್; ಕೇರಳ ಸಿಎಂ ಗಾದಿಗೆ ಪೈಪೋಟಿ

ದಿಲ್ಲಿಗೆ ತೆರಳಿದ ಸಿಎಂ ಆಕಾಂಕ್ಷಿ ವೇಣುಗೋಪಾಲ್

ತಿರುವನಂತಪುರಂ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಕೇರಳಂ

ವಿಧಾನಸಭಾ ಚುನಾವಣೆಯಲ್ಲಿ 2 ದಶಕಗಳ ನಂತರ ಕಾಂಗ್ರೆಸ್ ನೇತೃತ್ವದ ಯು.ಡಿಎಫ್ (ಸಂಯುಕ್ತ ಪ್ರಜಾಸತ್ತಾತ್ಮಕ ರಂಗ) ಸ್ಪಷ್ಟ ಬಹುಮತಗೊಂದಿಗೆ ವಿಜಯ ಸಾಧಿಸಿದ ನಂತರ ಇದೀಗ ಮುಖ್ಯಮಂತ್ರಿ ಗಾದಿಗೆ ಪೈಪೋಟಿ ಆರಂಭವಾಗಿದೆ. ಮುಖ್ಯಮಂತ್ರಿ ರೇಸ್‌ನಲ್ಲಿ ಪ್ರಮುಖವಾಗಿ ಕಾಂಗ್ರೆಸ್‌ನ ಮೂವರು ಕಾಣಿಸಿಕೊಂಡಿದ್ದಾರೆ. ಪುಟ 7

- ವಿಧಾನಸಭೆ ವಿರೋಧಪಕ್ಷದ ನಾಯಕರಾಗಿದ್ದ ವಿ.ಡಿ.ಸತೀಶನ್, ಹಿರಿಯ ನಾಯಕ ರಮೇಶ್ ಚೆನ್ನಿತಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮುಖ್ಯಮಂತ್ರಿ ಹುದ್ದೆಯ ಪ್ರಮುಖ ಆಕಾಂಕ್ಷಿಗಳು
- ಎಐಸಿಸಿ ಪ್ರತಿನಿಧಿಗಳು ಶಾಸಕರೊಂದಿಗೆ ಸಮಾಲೋಚನೆ ನಡೆಸಿ, ಇನ್ನೊಂದು ವಾರದಲ್ಲಿ ನೂತನ ಮುಖ್ಯಮಂತ್ರಿಯ ಆಯ್ಕೆ ಮಾಡಲು ಹೈಕಮಾಂಡ್‌ನಿಂದ ತಯಾರಿ ನಡೆದಿದೆ

ಬಿಜೆಪಿ ಕ್ರಿಮಿನಲ್ ಸಂಚಿನಿಂದ ಜೀವರಾಜ್ ಗೆಲುವು: ಸಿಎಂ ಕಿಡಿ

250 ಮತಗಳನ್ನು ತಿದ್ದಿ ಅಕ್ರಮ ಎಸಗಿರುವ ಬಿಜೆಪಿ

ಸಂ.ಕ.ಸಮಾಚಾರ, ಬೆಂಗಳೂರು

ಶೃಂಗೇರಿಯಲ್ಲಿ ನಡೆದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯವರು ಕ್ರಿಮಿನಲ್ ಪಿತೂರಿ ಮಾಡಿ ವೋಟ್ ಚೋರಿ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ

ಆರೋಪ ಮಾಡಿದರು.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೋರ್ಟ್ ಆದೇಶದ ಮೇರೆಗೆ ಶೃಂಗೇರಿ ಕ್ಷೇತ್ರದಲ್ಲಿ ಅಂಚೆ ಮತಗಳ ಮರು ಎಣಿಕೆ ಆಯಿತು. ರಾಜೇಗೌಡ ಕಳೆದ ವಿಧಾನಸಭೆಯಲ್ಲಿ 201 ಮತಗಳಿಂದ ಗೆದ್ದಿದ್ದರು. ರಾಜೇಗೌಡಗೆ ಇವಿಎಂನಲ್ಲಿ 59,171 ಮತ, 569 ಅಂಚೆಮತಗಳು ಬಂದಿತ್ತು, ಪುಟ 7

ಕಾನೂನು ಹೋರಾಟ ನಡೆಸುತ್ತೇವೆ: ಡಿಕೆಶಿ

"ಶೃಂಗೇರಿ ಕ್ಷೇತ್ರದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದುವ ಮೂಲಕ ಮರುಎಣಿಕೆಯಲ್ಲಿ ಅಸಿಂಧುಗೊಳಿಸಲಾಗಿದೆ. ಇದರ ವಿರುದ್ಧ ಕಾನೂನು ಹೋರಾಟ ಮಾಡ್ತೀವಿ. ಚುನಾವಣೆ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ.

▪ **ಡಿ.ಕೆ.ಶಿವಕುಮಾರ್,** ಡಿಸಿಎಂ

ಸಂಯುಕ್ತ ಕರ್ನಾಟಕ
ಜಾಣರ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

ವಿಜಯ್ CM ಯಾರ್ ಯಾರ ಬೆಂಬಲ?
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

ಜಮೀರ್ ಮನೇಲಿ ಸಂಬಂಧಿಕರಿಂದಲೇ 1 ಕೋ. ಚಿನ್ನ ಕಳವು

ಬೆಂಗಳೂರು: ಕಳೆದ ತಿಂಗಳು ವಸತಿ ಸಚಿವ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಮನೆಯಲ್ಲಿ 1.13 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳನ್ನು ಕದ್ದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ. ಏ.15ರಂದು ಸಚಿವರ ಪುಲಕೇಶಿನಗರದ ನಿವಾಸದಲ್ಲಿ ಕಳ್ಳತನ ನಡೆದಿದ್ದು, ಶಿವಾಜಿನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು. ಸಚಿವರ ಸಂಬಂಧಿಯೇ ಕಳ್ಳತನದ ಮಾಸ್ಟರ್ ಮೈಂಡ್ ಪೊಲೀಸರು ತಿಳಿಸಿದ್ದಾರೆ.

ಪಿಐಎಲ್ ಈಗ ಪೈಸಾ ಇಂಟ್ರೆಸ್ಟ್ ಲಿಟಿಗೇಶನ್ ಆಗಿದೆ: ಸುಪ್ರೀಂ ಕಿಡಿ

ನವದೆಹಲಿ: ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ದುರ್ಬಳಕೆ ಆಗುತ್ತಿದ್ದು ಈಗ ಪೈಸಾ ಮತ್ತು ರಾಜಕೀಯ ಹಿತಾಸಕ್ತಿ

ಅರ್ಜಿಯಾಗಿಯೂ ಮಾರ್ಪಟ್ಟಿದೆ ಎಂದು ಮಂಗಳವಾರ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಸಿಜೆಐ ನೇತೃತ್ವದ ಪೀಠದಲ್ಲಿ ನ್ಯಾ. ಬಿ.ವಿ.ನಾಗರತ್ನ ಅವರು ಮಾತನಾಡಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈಗ ಖಾಸಗಿ ಹಿತಾಸಕ್ತಿ, ಪ್ರಚಾರದ ಹಿತಾಸಕ್ತಿ, ಪೈಸಾ ಹಿತಾಸಕ್ತಿ ಮತ್ತು ರಾಜಕೀಯ ಹಿತಾಸಕ್ತಿಯ ಅರ್ಜಿಗಳಾಗಿ ಮಾರ್ಪಟ್ಟಿವೆ ಎಂದರು.

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೇರಿಸಲು ಕೇಂದ್ರದ ಸಮ್ಮತಿ

ನವದೆಹಲಿ: ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರ ಪ್ರಮಾಣವನ್ನು 34 ರಿಂದ 38ಕ್ಕೆ ಏರಿಸಲು ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ಹಿಂದೆ 2019ರಲ್ಲಿ ನ್ಯಾಯಾಧೀಶರುಗಳ ಸಂಖ್ಯೆಯನ್ನು (ಮು.ನ್ಯಾ. ಹೊರತು) 30 ರಿಂದ 33ಕ್ಕೆ ಏರಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ 'ಸುಪ್ರೀಂ ಕೋರ್ಟ್ ತಿದ್ದುಪಡಿ ಮಸೂದೆ 2026ರಲ್ಲಿ ಸಂಖ್ಯೆಯನ್ನು 4ಕ್ಕೆ ಏರಿಸಲು 1956ರ ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ ಎಂದು ಸಭೆಗೆ ತಿಳಿಸಲಾಗಿದೆ.

ಇರಾನ್ ದಾಳಿಯಲ್ಲಿ 3 ಭಾರತೀಯರಿಗೆ ಗಾಯ: ಖಂಡನೆ

ಅಬುಧಾಬಿ: ಯುಎಇನ ಫುಜೈರಾ ತೈಲ ಕೈಗಾರಿಕಾ ವಲಯದ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದಾರೆ. ಆಯಕಟ್ಟಿನ ಬಂದರು ನಗರಿ ಫುಜೈರಾದ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆದಾಗ ಅಲ್ಲಿ ಕೆಲಸ ಮಾಡುತ್ತಿದ್ದ ಮೂವರು ಭಾರತೀಯ ಕಾರ್ಮಿಕರು ಗಾಯಗೊಂಡಿದ್ದಾರೆ. ಈ ದಾಳಿಯನ್ನು ಪ್ರಧಾನಿ ಮೋದಿ ಖಂಡಿಸಿದ್ದು, ನಾಗರಿಕರು ಹಾಗೂ ಮೂಲಸೌಕರ್ಯಗಳ ಮೇಲಿನ ದಾಳಿ ಸ್ವೀಕಾರಾರ್ಹವಲ್ಲ ಎಂದಿದ್ದಾರೆ.

ಪಂಚಮಸಾಲಿ ಹರಪೀಠದ ಸುತ್ತ ನಿಷೇಧಾಜ್ಞೆ ಜಾರಿ

ದಾವಣಗೆರೆ: ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ನಡೆದಿರುವ ಗೊಂದಲದಿಂದಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮೇ 31ರವರೆಗೆ ಮಠದ ಸುತ್ತ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ವಿವರ: 6

ಗೋಡೆ ಕುಸಿತದ ಪ್ರಕರಣ: ತನಿಖೆಗೆ 'ಲೋಕಾ' ತಂಡ 7

8ನೇ ಕ್ಲಾಸ್‌ವರೆಗೆ ಪ್ರಾಥಮಿಕ, 12ನೇ ಕ್ಲಾಸ್‌ವರೆಗೆ ಹೈಸ್ಕೂಲ್

ರಾಜ್ಯದ ನೂತನ ಶಿಕ್ಷಣ ನೀತಿ | ನಾಳೆ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ಆಗುವ ಸಾಧ್ಯತೆ

ಸಂ.ಕ.ಸಮಾಚಾರ, ಬೆಂಗಳೂರು

ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಎನ್‌ಡಿಎ ಸರಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಸಂಪೂರ್ಣವಾಗಿ ಹಿಂಪಡೆದು ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ರಾಜ್ಯ ಸರಕಾರ ಘೋಷಿಸುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮೇ 7ರಂದು ಗುರುವಾರ ನಡೆಯಲಿರುವ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವು ನೀಡಿರುವ ಅಂತಿಮ ವರದಿಯ ಕುರಿತಂತೆ ಪರಾಮರ್ಶೆ ನಡೆಯುವ ಸಾಧ್ಯತೆಗಳಿದ್ದು, ಇದರ ಬೆನ್ನಲ್ಲೇ ಮುಂದಿನ ಶೈಕ್ಷಣ ವರ್ಷದ (2026–2027) ಆರಂಭಕ್ಕೂ ಮೊದಲೇ ಕರ್ನಾಟಕ ರಾಜ್ಯ ಶಿಕ್ಷಣ ನೀತಿ (ಕೆಎಸ್‌ಇಪಿ) ಘೋಷಿಸುವ ನಿರೀಕ್ಷೆ ಇದೆ.

ಏನಿದು ನೂತನ ರಾಜ್ಯ ಶಿಕ್ಷಣ ನೀತಿ?: ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದ ಬೆನ್ನಲ್ಲೇ 2023ರ ಅಕ್ಟೋಬರ್ 11ರಂದು ಶಿಕ್ಷಣ ತಜ್ಞ ಪ್ರೊ.ಸುಖದೇವ್ ಥೋರಟ್ ನೇತೃತ್ವದಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ರಚಿಸಲಾಗಿತ್ತು. ಈ ಆಯೋಗವು 2024ರ ಮೇನಲ್ಲಿ ಮಧ್ಯಂತರ ವರದಿ ಹಾಗೂ 2025ರ ಆಗಸ್ಟ್ 9ರಂದು ಅಂತಿಮ ವರದಿಯನ್ನು ಸಲ್ಲಿಸಿತ್ತು. ಈ ಎರಡೂ ವರದಿಗಳ ಆಧಾರದ ಮೇಲೆ ಇದೀಗ ನೂತನ ರಾಜ್ಯ ಶಿಕ್ಷಣ ನೀತಿ ಅಂತಿಮಗೊಳಿಸಲು ಸಚಿವ ಸಂಪುಟ ಮುಂದಾಗಿದೆ.

ಥೋರಟ್ ಆಯೋಗದ ಶಿಫಾರಸುಗಳೇನು?

- ಶಾಲಾ ಶಿಕ್ಷಣದಲ್ಲಿ 2 ವರ್ಷ ಪೂರ್ವಪ್ರಾಥಮಿಕ, 8 ವರ್ಷ ಪ್ರಾಥಮಿಕ ಹಾಗೂ ನಾಲ್ಕು ವರ್ಷ ಪ್ರೌಢಶಿಕ್ಷಣ ಅನುಸರಿಸುವುದು. ಅಂದರೆ 2+8+4ರ ಆಧಾರದಲ್ಲಿ 2 ವರ್ಷ ಪ್ರಿಪ್ರೈಮರಿ ನಂತರ 8 ವರ್ಷ ಪ್ರಾಥಮಿಕ ಹಾಗೂ 9ನೇ ತರಗತಿಯಿಂದ 12ನೇ ತರಗತಿವರೆಗೆ ಪ್ರೌಢ ಶಿಕ್ಷಣ ಅನುಸರಿಸುವುದು.
- ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ವಯಸ್ಸು ನಿಗದಿಪಡಿಸಿ, 3 ತಿಂಗಳ ವಿನಾಯ್ತಿ ಕಲ್ಪಿಸುವುದು.
- ರಾಜ್ಯದಲ್ಲಿ ಪ್ರೌಢಶಿಕ್ಷಣವನ್ನು ಅಂದರೆ 9ರಿಂದ 12ನೇ ತರಗತಿ ಕಲಿಕೆ ಎಲ್ಲರಿಗೂ ದೊರೆಯಲು ಅನುಕೂಲವಾಗುವಂತೆ ಸಾರ್ವತ್ರೀಕರಿಸುವುದು.
- ವಲಸೆ ಕಾರ್ಮಿಕರ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ಆರಂಭಿಸುವುದು. ಸರಕಾರಿ ಶಾಲೆಗಳ ಗುಣಮಟ್ಟವನ್ನು ಕೇಂದ್ರೀಯ ವಿದ್ಯಾಲಯ ಮಟ್ಟಕ್ಕೆ ಬೆಳೆಸುವುದು.
- ಅತಿಥಿ ಶಿಕ್ಷಕರ ಪದ್ಧತಿ ತೆಗೆದು ಗುಣಮಟ್ಟದ ಶಿಕ್ಷಣಕ್ಕೆ ಕಾಯಂ ಶಿಕ್ಷಕರ ನೇಮಕಾತಿ ನಡೆಸುವುದು. ಪುಟ 7

ಭಾರತದ ಇಬ್ಬರು ಪತ್ರಕರ್ತರಿಗೆ ಅತ್ಯುನ್ನತ ಪುಲಿಟ್ಜರ್ ಪ್ರಶಸ್ತಿ ಗರಿ

ತನಿಖಾ ವರದಿಗಾಗಿ ಆನಂದ್, ಸುಪರ್ಣಗೆ ಗೌರವ

ನವದೆಹಲಿ: ಭಾರತದಲ್ಲಿ ಸೈಬರ್ ಕ್ರೈಂ (ಡಿಜಿಟಲ್ ಅರೆಸ್ಟ್) ಕುರಿತು ಬ್ಲೂಂಬರ್ಗ್

ಮಾಧ್ಯಮ ಸಂಸ್ಥೆಗೆ ಸಚಿತ್ರ ವರದಿ ಹಾಗೂ ಕಾರ್ಯಕ್ರಮ ತಯಾರಿಸಿಕೊಟ್ಟ ಭಾರತದ ಇಬ್ಬರು ಪತ್ರಕರ್ತರಿಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ ಲಭಿಸಿದೆ. ಭಾರತೀಯ ಪತ್ರಕರ್ತರಾದ ಆನಂದ್ ಆರ್.ಕೆ. ಹಾಗೂ ಸುಪರ್ಣ ಶರ್ಮ ಅವರು ಈ ಪ್ರಶಸ್ತಿಯನ್ನು ಮತ್ತೊಬ್ಬ ಪತ್ರಕರ್ತರಾದ ನಟಾಲಿಯೆ ಒಬಿಕೊ ಎಂಬುವರೊಂದಿಗೆ ಹಂಚಿಕೊಳ್ಳಲಿದ್ದಾರೆ. ಪುಟ 7

ಗಮನ ಸೆಳೆದ ವರದಿ

ವಿಷುಯಲ್ ಆರ್ಟಿಸ್ಟ್ ಆನಂದ್, ತನಿಖಾ ವರದಿಗಾರ್ತಿ ಸುಪರ್ಣ ಮತ್ತು ನಟಾಲಿಮೂವರೂ ಸೇರಿ 'ಪ್ರಾಜೆಕ್ಟ್ ಟ್ರ್ಯಾಪ್ಡ್' ಹೆಸರಿನಲ್ಲಿ ಬ್ಲೂಮ್‌ಬರ್ಗ್‌ಗೆ ಭಾರತದ ನರರೋಗ ತಜ್ಞರೊಬ್ಬರ ಡಿಜಿಟಲ್ ಅರೆಸ್ಟ್ ಕುರಿತ ವರದಿಯೊಂದು ಮಾಡಿದ್ದರು. ಕಾಮಿಕ್ ರೀತಿಯ ದೃಶ್ಯ ಸಹಿತವಾದ ಈ ವರದಿಯಲ್ಲಿ ಡಿಜಿಟಲ್ ಸ್ಕ್ಯಾಮ್‌ಗಳ ಕುರಿತು ಜಾಗತಿಕ ಸವಾಲುಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಲಾಗಿತ್ತು.

₹60000 ಕೋಟಿ ಬಯೋಕಾನ್ ಸಾಮ್ರಾಜ್ಯಕ್ಕೆ ಕ್ಲೇರ್ ಉತ್ತರಾಧಿಕಾರಿ

ಸೋದರಸೊಸೆಗೆ ಚುಕ್ಕಾಣಿ ನೀಡಲು ಕಿರಣ್ ಸಜ್ಜು

ನವದೆಹಲಿ: ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ ಈಗ ತಮ್ಮ ಜೈವಿಕ ತಂತ್ರಜ್ಞಾನ ಕಂಪನಿಗೆ ಸೊಸೆ ಕ್ಲೇರ್ ಮಜುಂದಾರ್ ಅವರೇ ತಮ್ಮ ಉತ್ತರಾಧಿಕಾರಿಯಾಗಲು

ಸೂಕ್ತ ಎಂದು ಹೆಸರಿಸಿದ್ದಾರೆ. ಬಯೋ ಕಾನ್‌ಗೆ ತಾನೊಬ್ಬಳೇ ನಾಯಕಿಯಾಗಿರುವುದರಿಂದ ಅದು ಉತ್ತಮ ಕೈ ಸೇರಬೇಕೆಂಬ ಉದ್ದೇಶ ಎಂದು ಕಿರಣ್ ಮಜುಂದಾರ್ ಷಾ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಕ್ಲೇರ್ ಅನ್ನು ಉತ್ತರಾಧಿಕಾರಿಯಾಗಿ ಇನ್ನೂ ಅಧಿಕೃತವಾಗಿ ಘೋಷಣೆ ಮಾಡದಿದ್ದರೂ, ಇರಾದೆ ವ್ಯಕ್ತಪಡಿಸಿದ್ದಾರೆ. ಪುಟ 7

ನಾನೀಗಲೇ ನಿವೃತ್ತಿಯಾಗಲ್ಲ

"ಹಂತಹಂತವಾಗಿ ಬಯೋಕಾನ್ ಜವಾಬ್ದಾರಿಯನ್ನು ಕ್ಲೇರ್ ಹೊರಬೇಕೆನ್ನುವುದು ನನ್ನ ಉದ್ದೇಶ. ಹೀಗಾಗಿ ನಾನು ಈಗಲೇ ನಿವೃತ್ತಳಾಗಲ್ಲ. ನಿರ್ದೇಶಕ ಸ್ಥಾನದಿಂದ ಉಪಾಧ್ಯಕ್ಷ ಸ್ಥಾನಕ್ಕೆ, ನಂತರ ಅಧ್ಯಕ್ಷ ಸ್ಥಾನವನ್ನು ಕ್ಲೇರ್‌ಗೆ ವಹಿಸ್ತೀನಿ.

▪ **ಕಿರಣ್ ಮಜುಂದಾರ್ ಷಾ,** ಬಯೋಕಾನ್ ಮುಖ್ಯಸ್ಥೆ

ಕುಂಚತಂತ್ರ

ಕಾಂತೇಶ ಮ. ಬಡಿಗೇರ

ಸುದ್ದಿ ಮಿಂಚು



ವಡಗೇರಾ ತಾಲೂಕಿನ ಬಬಲಾದ ಗ್ರಾಮದ ಖಬರಸ್ಥಾನಲ್ಲಿ ಬೋರವೆಲ್ ವ್ಯವಸ್ಥೆ ಕಲ್ಪಿಸಿದ ಹಿನ್ನಲ್ಲೆ ಮುಸ್ಲಿಂ ಸಮಾಜದವರು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರನ್ನು ಸನ್ಮಾನಿಸಿದರು. ಪಕ್ಷದ ಮುಖಂಡ ಜಲಾಲ ಪಟೇಲ್, ಮುಖಂಡರಾದ ಮೈಹಿಬೂಬ್ ಪಟೇಲ್, ಚಾಂದ ಪಟೇಲ್, ಇಸ್ಮಾಯಿಲ್ ಪಟೇಲ್, ಸೈಯದ್ ಪಟೇಲ್, ಜಲಾಲಸಾಬ್ ಇತರರು ಇದ್ದರು.

ಉತ್ತಮ ಆಡಳಿತಕ್ಕೆ ಫಲಿತಾಂಶವೇ ಸಾಕ್ಷಿ

ಯಾದಗಿರಿ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಭೂತಪೂರ್ವ ಗೆಲುವು ಸಾಧಿಸಿದ್ದು, ಎರಡೂ ಕ್ಷೇತ್ರಗಳಲ್ಲಿ ಜನತೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟವನ್ನು ಧಿಕ್ಕರಿಸುವ ಮೂಲಕ ಗ್ಯಾರಂಟಿಯನ್ನು ಬೆಂಬಲಿಸಿದ್ದಾರೆ ಜೊತೆಗೆ ಈ ಗೆಲುವು ಉತ್ತಮ ಆಡಳಿತಕ್ಕೆ ಸಾಕ್ಷಿಯಾಗಿದೆ ಎಂದು ಕೆಪಿಸಿಸಿ ಶಿಕ್ಷಕರ ಘಟಕದ ರಾಜ್ಯ

ಉಪಾಧ್ಯಕ್ಷ ಆಶಪ್ಪ ಗಾಜರಕೊಟ ತಿಳಿಸಿದ್ದಾರೆ. ಉಭಯ ಕ್ಷೇತ್ರಗಳ ಉಪ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೊಡಗಿಸಕೊಂಡಿದ್ದೆ. ಆಗಲೇ ಅಲ್ಲಿಯ ಜನರ ನಾಡಿ ಮಿಡಿತ ಕಾಂಗ್ರೆಸ್ ಪರವಾಗಿದ್ದು ಗೆಲುವು ನಿಶ್ಚಿತವಾಗಿತ್ತು. ಈ ಫಲಿತಾಂಶ ಬರುವ 2028ರ ಚುನಾವಣೆಗೆ ದಿಕ್ಸೂಚಿಯಾಗಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜನಪರ ಆಡಳಿತ ಗೆಲುವಿಗೆ ಶ್ರೀರಕ್ಷೆಯಾಗಿದೆ ಎಂಬುದನ್ನು ಈ ಫಲಿತಾಂಶ ಬಹಿರಂಗಪಡಿಸಿದೆ ಎಂದು ವರ್ಣಿಸಿದ್ದಾರೆ.

ಕಕ್ಕೇರಾದ ಉಪ ಪೊಲೀಸ್ ಠಾಣೆಗೆ ಭೇಟಿ ನೀಡಿದ ಎಸ್‌ಪಿ ಪೃಥ್ವಿಕ್ ಶಂಕರ್ ಅವರನ್ನು ಕೆಪಿಸಿಸಿ ಸದಸ್ಯ ಗುಂಡಪ್ಪ ಸೊಲಾಪೂರ, ಪುರಸಭೆ ಅಧ್ಯಕ್ಷ ಪರಮಣ್ಣ ಕಮತಗಿ ಇನ್ನಿತರರು ಸನ್ಮಾನಿಸಿದರು.

ಠಾಣೆ ಮೇಲ್ದರ್ಜೆಗೆ ಎಸ್‌ಪಿ ಚರ್ಚೆ

ಕಕ್ಕೇರಾ: ಇಲ್ಲಿಯ ಉಪ ಪೊಲೀಸ್ ಠಾಣೆಗೆ ಎಸ್‌ಪಿ ಪೃಥ್ವಿಕ್ ಶಂಕರ್ ಭೇಟಿ ನೀಡಿ ಠಾಣೆಯನ್ನು ಸರಕಾರ ಇತ್ತೀಚೆಗೆ ಮೇಲ್ದರ್ಜೆಗೇರಿಸಿರುವದರಿಂದ ಗ್ರಾಮಾಡಳಿತಾಧಿಕಾರಿ ಬಸವರಾಜ ಶೆಟ್ಟಿ, ಕೆಪಿಸಿಸಿ ಸದಸ್ಯ ಗುಂಡಪ್ಪ ಸೊಲಾಪೂರ, ಪುರಸಭೆ ಅಧ್ಯಕ್ಷ ಪರಮಣ್ಣ ಕಮತಗಿ, ಉಪಾಧ್ಯಕ್ಷ ಜಟ್ಟೆಪ್ಪ ದಳಾರ ಇನ್ನಿತರರ ಜೊತೆ ಠಾಣೆ ನಿರ್ಮಾಣಕ್ಕಾಗಿ ಜಾಗದ ಕುರಿತಾಗಿ ಅವರು ವ್ಯಾಪಕವಾಗಿ ಚರ್ಚಿಸಿದರು. ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿಸಲು ಹೊಸ ಕಟ್ಟಡ ನಿರ್ಮಾಣಕ್ಕಾಗಿ 1 ಎಕರೆ ಮತ್ತು ಪೊಲೀಸ್ ವಸತಿ ಗೃಹಗಳ ನಿರ್ಮಾಣಕ್ಕಾಗಿ ಸ್ಥಳದ ಬಗ್ಗೆ ಕಂದಾಯ, ಪುರಸಭೆ ಆಡಳಿತ ಮಂಡಳಿ ಮತ್ತು ಮುಖಂಡರಿಂದ ಸಮರ್ಪಕ ಮಾಹಿತಿ ಪಡೆದುಕೊಂಡರು. ಸಿಪಿಐ ರವಿಕುಮಾರ ಎಸ್.ಎನ್, ಠಾಣಾಧಿಕಾರಿ ರಾಜಶೇಖರ ರಾಠೋಡ್, ಸಿಬ್ಬಂದಿ ಬೀರಪ್ಪ, ರಾಜು, ವಿನಾಯಕ, ದ್ಯಾವಪ್ಪ ಜಂಪಾ, ಬಸವರಾಜ ಅನೇಕರಿದ್ದರು.

ಶಿಕ್ಷಣದ ಜೊತೆ ಸಂಸ್ಕಾರ ಮುಖ್ಯ

ಸೈದಾಪುರ: ಹಣ, ಆಸ್ತಿ ಸಂಪತ್ತನ್ನು ಖರ್ಚು ಮಾಡಿ ಖಾಲಿ ಮಾಡಬಹುದು. ಇದಲ್ಲದೆ ಅದನ್ನು ಬೇರೆಯವರು ದೋಚಬಹುದು ಆದರೆ ಜ್ಞಾನವನ್ನುಯಾರಿಂದಲೂ ಕದಿಯಲು ಸಾಧ್ಯವಿಲ್ಲ ಎಂದು ಶಿಕ್ಷಕ ಬಸವರಾಜ ಚಂದ್ರಗಿರಿ ಹೇಳಿದರು. ಸಮೀಪದ ಬಾಡಿಯಾಳ ಗ್ರಾಮದ ಗ್ರಾಪಂ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರ ಉದ್ದೇಶಿಸಿ ಮಾತನಾಡಿದ ಅವರು, ಮಕ್ಕಳ ಶೈಕ್ಷಣಿಕ ಬೆಳವಣಿಗೆ ಜತೆಗೆ ಅವರಿಗೆ ಸಂಸ್ಕಾರ ಬಹಳ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಪೋಷಕರು ಗಮನ ಹರಿಸಬೇಕೆಂದರು.

ನಮ್ಮ ಭಾಗದಲ್ಲಿ ಬಿಸಿಲಿನ ಪ್ರಮಾಣ ಅತ್ಯಧಿಕವಾಗಿದೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀಳುವ ಸಾಧ್ಯತೆಯಿದ್ದು ಪೋಷಕರು ಜಾಗೃತಿ ವಹಿಸುವುದು ಅವಶ್ಯವಿದೆ. ಸರಕಾರ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡುವ ಮೂಲಕ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತದೆ. ಹೀಗಾಗಿ ಪ್ರತಿಯೊಬ್ಬರು ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದಕ್ಕೂ ಮುನ್ನ ಗ್ರಂಥಾಲಯದ ಪಿತಾಮಹ ಡಾ. ಎಸ್ ಆರ್ ರಂಗನಾಥರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಶಿಬಿರದ ಕಾರ್ಯಕ್ರಮದಲ್ಲಿ ಮಕ್ಕಳಿಗೆ

ಬಾಡಿಯಾಳ ಗ್ರಾಮದ ಗ್ರಾಪಂ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರವನ್ನು ಉದ್ದೇಶಿಸಿ ಶಿಕ್ಷಕ ಬಸವರಾಜ ಚಂದ್ರಗಿರಿ ಮಾತನಾಡಿದರು.

ತಮ್ಮನ್ನು ತಾವು ಸ್ವಯಂ ಪರಿಚಯಿಸಿಕೊಳ್ಳುವ ಬಾಲ್ ಪಾಸಿಂಗ್ ಗೇಮ್ ಆಡಿಸಲಾಯಿತು. ಲಿಂಗಣ್ಣಗೌಡ ಪೊಲೀಸ್ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಕಾರ್ಯದರ್ಶಿ ಅಬ್ದುಲ್ ಬಾಷಾ, ಕಲಿಕಾ ಪ್ರೇರಕರಾದ ವೇಕಟೇಶ ಕಾವಲಿ, ಗ್ರಾಪಂ ಕರವಸೂಲಿಗಾರ ಮರೆಪ್ಪ ಮಕ್ತಲ್ ಉಪಸ್ಥಿತರಿದ್ದರು. ವೆಂಕಟೇಶ್ ಕಾವಲಿ ನಿರೂಪಿಸಿದರು. ಮರೆಪ್ಪ ಮಕ್ತಾಲ್ ವಂದಿಸಿದರು.

ನೂತನ ಪದಾಧಿಕಾರಿಗಳ ಆಯ್ಕೆ

ಶಹಾಪುರ: ಕರ್ನಾಟಕ ದಲಿತ ಸಂಘ ಸಮಿತಿ ಪ್ರೊ. ಬಿ.ಕೃಷ್ಣಪ್ಪ ಬಣದ ಸಂಘದ ಗ್ರಾಮ ಶಾಖೆ ವತಿಯಿಂದ ಶಖಾಪುರ ಗ್ರಾಮದ ವಿಶ್ವರಾಧ್ಯರ ಮಠದಲ್ಲಿ ಸುಭಾಷ ತಳವಾರ ವಿಭಾಗೀಯ ಸಂಘಟನೆ ಸಂಚಾಲಕ ಕಲ್ಬುರ್ಗಿ ಅಧ್ಯಕ್ಷತೆಯ ಮೇರೆಗೆ ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ಸಭೆ ಜರುಗಿತು.

ನೂತನ ಪದಾಧಿಕಾರಿಗಳು: ಶಖಾಪುರ ಮಂಜುನಾಥ್ ದೊಡ್ಮನಿ –ಸಂಚಾಲಕರು, ಗೌತಮ್ ಹೊಸ್ಮನಿ –ಸಂಘಟನಾ ಸಂಚಾಲಕರು, ಸಾಯಬಣ್ಣ ಹೊಸಮನಿ– ಸಂಘಟನೆ ಸಂಚಾಲಕರು, ಸಾಯಬಣ್ಣ ದೊಡ್ಮನೆ –ಸಂಘಟನೆ ಸಂಚಾಲಕರು, ವಿಶ್ವನಾಥ್ ದೊಡ್ಮನಿ –ಖಜಾಂಚಿಯಾಗಿ ಆಯ್ಕೆ ಮಾಡಲಾಯಿತು. ಭೀಮರಾಯ ಹೊಸಮನಿ ತಳವಾರ, ಜಿಲ್ಲಾ ಸಂಘಟನೆ ಸಂಚಾಲಕ ಲಕ್ಷ್ಮಣ ಗೋಗಿ, ತಾಲೂಕು ಸಂಚಾಲಕ ಮಾಳಪ್ಪ ಭಂಡಾರಿ ಸಲಾದಪೂರ, ನಗರ ಸಂಚಾಲಕ ಅಶೋಕ ತಳವಾರ, ರಾಘವೇಂದ್ರ ಗೌಡ ಪೋ.ಪಾ, ಮುದುಕಪ್ಪಗೌಡ ಪೋ.ಪಾ, ಮುತ್ತುರಾಜ್ ಗೌಡ ಶಖಾಪುರ, ಮಲ್ಲಿಕಾರ್ಜುನ ಯದರಮನಿ ಶಖಾಪುರ, ಸಂದೀಪ ಪೂಜಾರಿ, ಅಯ್ಯಪ್ಪ, ಧರ್ಮಣ್ಣ ಯಾದವ ಶಖಾಪುರ, ಪ್ರಭು ದಿಗ್ಗಿ ಇತರರು ಇದ್ದರು.

ನಿಧನ ವಾರ್ತೆ

ನಂದಪ್ಪ ಡಂಗಿ



ಹುಣಸಗಿ: ಪಟ್ಟಣದ ಜಾನಪದ (ಬಯಲಾಟ) ಕಲಾವಿದ ಹಾಗೂ ಗ್ರಾಪಂ ಮಾಜಿ ಸದಸ್ಯ ನಂದಪ್ಪ ಡಂಗಿ (80) ಸೋಮವಾರ ನಿಧನರಾದರು. ಮೃತರು ಪತ್ನಿ, 3 ಜನ ಪುತ್ರಿಯರು, ಐದು ಜನ ಪುತ್ರರು ಸೇರಿ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಹತ್ತಿಕುಣಿ ಕ್ರಾಸ್, ಗಂಗಾನಗರ ರಸ್ತೆ ಅಭಿವೃದ್ಧಿ

ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿಕೆ | ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿ ಪ್ರಾರಂಭ

ಸಂ.ಕ. ಸಮಾಚಾರ ಯಾದಗಿರಿ: ನಗರದ ಹತ್ತಕುಣಿ ಕ್ರಾಸ್‌ದಿಂದ ಗಂಗಾನಗರದವರೆಗೆ ಶೀಘ್ರದಲ್ಲೇ 5 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗುವುದು ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ತಿಳಿಸಿದರು. ಯಾದಗಿರಿ–ಸೇಡಂ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗೆ ಭೇಟಿ ನೀಡಿ ರಸ್ತೆ ಅವ್ಯವಸ್ಥೆಯನ್ನು ಪರಿಶೀಲಿಸಿದ ಶಾಸಕರು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ತ್ವರಿತವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

5 ಕೋಟಿ ಅನುದಾನದಲ್ಲಿ ಹಳ್ಳದವರೆಗೆ ರಸ್ತೆಯ ಅಗಲೀಕರಣ ಜೊತೆಗೆ ಇಕ್ಕೆಲಗಳಲ್ಲಿ ಚರಂಡಿ ಮತ್ತು ರಸ್ತೆ ನಿರ್ಮಾಣ, ರಸ್ತೆ ವಿಭಜಕ ಹಾಗೂ ರಸ್ತೆಯ ಎರಡೂ ಬದಿಯಲ್ಲಿ ಸ್ಟ್ರೀಟ್ ಲೈಟ್ ಅಳವಡಿಸುವ ಕೆಲಸ ಕೈಗೆತ್ತಿಕೊಳ್ಳಲು ತಿಳಿಸಿದರು.

ಲೋಕೋಪಯೋಗಿ ಇಲಾಖೆ ಹಾಗೂ ನಗರಸಭೆ ಪೌರಾಯುಕ್ತರ ಜೊತೆ ಚರ್ಚಿಸಿದ ಶಾಸಕರು, ಈ ರಸ್ತೆ ಅತ್ಯಂತ ಜನನಿಬಿಡವಾಗಿದೆ. ಜೊತೆಗೆ ಭಾರಿ ವಾಹನಗಳೂ ಓಡಾಡತ್ತವೆ. ಕಾರಣ ಯಾರ ಮುಲಾಜಿ ಇಲ್ಲದೇ ಪೂಟಪಾತ್, ರಸ್ತೆ ಅತಿಕ್ರಮಣ, ನಿಯಮಗಳ ಪ್ರಕಾರ ಸೆಟ್‌ಬ್ಯಾಕ್ ಇಲ್ಲದಿರುವ ಗೂಡಂಗಡಿ, ಕಟ್ಟಡಗಳನ್ನು ತೆರವುಗೊಳಿಸಬೇಕು. ರಸ್ತೆ ಅಗಲೀಕರಣ ಮಾಡಿ ಸುಸಜ್ಜಿತ ರಸ್ತೆ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ಏರಿಯಾದಲ್ಲಿ ಹೆಚ್ಚಾಗಿ ಬಡ ಮತ್ತು ಕೂಲಿ ಕಾರ್ಮಿಕರು ವಾಸಿಸುತ್ತಿದ್ದಾರೆ. ಇಲ್ಲಿ ಪರಿಸರ ಸ್ವಚ್ಛತೆ ಎಂಬುದು

ಯಾದಗಿರಿ ನಗರದ ಹತ್ತಿಕುಣಿ ಕ್ರಾಸ್ ರಸ್ತೆಗೆ ಭೇಟಿ ನೀಡಿದ ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ ಅವರು ವಾಸ್ತವಿಕ ಸ್ಥಿತಿಯನ್ನು ವಿಕ್ಷೀಸಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದರು.

ಮರೀಚಿಕೆಯಾಗಿದೆ.

ನಗರಸಭೆ ಅಧಿಕಾರಿಗಳು ಆಗಾಗ ಭೇಟಿ ನೀಡಿ ಪರಿಸರ ಸ್ವಚ್ಛತೆಗೆ ಗಮನ ನೀಡಬೇಕು. ಯಾದಗಿರಿ ನಗರದ ಹಳ್ಳದ ಸೇತುವೆ ಪಕ್ಕದಲ್ಲಿಯೇ ಜನರು ರಾಶಿ–ರಾಶಿ ತ್ಯಾಜ್ಯ ವಸ್ತುಗಳನ್ನು ಹಾಕುತ್ತಿದ್ದಾರೆ. ಇದರಿಂದ ದುರ್ವಾಸನೆ ಬೀರುತ್ತಿಇದ್ದು ಸುತ್ತಲಿನ ಪ್ರದೇಶನ ನಾಗರಿಕರು ಶಪಿಸುತ್ತಿದ್ದಾರೆ.

> ನಗರದ ಅತ್ಯಂತ ಜನನಿಬಿಡ ಹತ್ತಿಕುಣಿ ಕ್ರಾಸ್‌ದಿಂದ ಗಂಗಾನಗರವರೆಗೆ ಹಲವಾರು ವರ್ಷಗಳಿಂದ ಸುಸಜ್ಜಿತ ರಸ್ತೆಯ ಬೇಡಿಕೆ ಇದೆ. ಆದರೆ, ಯಾರು ಸ್ಪಂದಿಸಿಲ್ಲ. ಪರಿಣಾಮ ತಗ್ಗು–ಗುಂಡೆಗಳು ನಿರ್ಮಾಣವಾಗಿ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ನನಗೆ ಸಾರ್ವಜನಿಕರಿಂದ ಹಲವಾರು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ವಿಶೇಷ ಕಾಳಜಿವಹಿಸಿ ಈ ಕಾಮಗಾರಿ ಕೈಗೊಳ್ಳಲು ಮುಂದಾಗದ್ದೇನೆ. ಸಾರ್ವಜನಿಕರು ಹಾಗೂ ಅಧಿಕಾರಿಗಳು ಮುಕ್ತವಾಗಿ ಸಹಕರಿಸಬೇಕು.
>
> ■ **ಚೆನ್ನಾರೆಡ್ಡಿ ಪಾಟೀಲ್,** ಶಾಸಕರು, ಯಾದಗಿರಿ.

ಕಾರಣ ಅಲ್ಲಿ ಕಸ ಹಾಕುವರನ್ನು ಗಮನಿಸಿ ಅವರಲ್ಲಿ ಪರಿಸರ ಜಾಗೃತಿ ಮೂಡಿಸಬೇಕು. ಒಂದು ವೇಳೆ ಅವರು ಪರಿವರ್ತನೆಯಾಗದಿದ್ದರೆ ದಂಡ ವಿಧಿಸಬೇಕು.

ಈ ಕೂಡಲೇ ಸಂಗ್ರಹವಾಗಿರುವ ತ್ಯಾಜ್ಯವನ್ನು ತಕ್ಷಣ ವಿಲೇವಾರಿ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಪಿಡಬ್ಲುಡಿ ಎಇಇ ಪರಶುರಾಮ, ಎಇ ಹಣಮಂತ, ನಗರಸಭೆ ಪೌರಾಯುಕ್ತ ಉಮೇಶ ಚವ್ಹಾಣ, ಎಇಇ ವಿಶ್ವನಾಥ,ಗುತ್ತಿಗೇದಾರ ಮೋಹನ ರಾಠೋಡ, ಮುಖಂಡರಾದ ಸಾಯಿಬಣ್ಣ ಕೆಂಗೂರಿ, ಚನ್ನಕೇಶವಗೌಡ ಬಾಣತಿಹಾಳ, ನಗರಸಭೆ ಅಧಿಕಾರಿ ಶರಣಮ್ಮ ಹಾಗೂ ಇನ್ನಿತರರಿದ್ದರು.

‘ರೈತರ ಬೆವರ ಹನಿ ವ್ಯರ್ಥವಾಗಲ್ಲ’

ಹುಣಸಗಿ: ತಾಲೂಕಿನ ಬೈಚಬಾಳ ಹಾಗೂ ಕೂಡಲಗಿ ಗ್ರಾಮದಲ್ಲಿ ಕಳೆದ ಡಿಸೆಂಬರ್ ತಿಂಗಳಲ್ಲಿ ಭತ್ತದ ವ್ಯಾಪಾರಿಯೊಬ್ಬ 1.50 ಕೋಟಿ ರೂ. ಗಳ ಭತ್ತ ಖರಿಧಿಸಿ ಪರಾರಿಯಾಗಿದ್ದ. ಈ ಕುರಿತು ಮಾಜಿ ಸಚಿವ ನರಸಿಂಹ ನಾಯಕ ಅವರು ಪೊಲೀಸ ಕಚೇರಿಗೆ ತೆರಳಿ ರೈತರಿಗೆ ಮೋಸ ಮಾಡಿದ ಭತ್ತದ ವ್ಯಾಪಾರಿಯನ್ನು ಬಂಧಿಸಿ ರೈತರಿಗೆ ಹಣ ಪಾವತಿಸುವಂತೆ ಹೋರಾಟ ರೈತರೊಂದಿಗೆ ಮಾಡಿದ್ದರು. ಬೈಚಬಳ ಗ್ರಾಮಕ್ಕೆ ತೆರಳಿದ ನಾಯಕ ವ್ಯಾಪಾರಿಯಿಂದ ಸಂಗ್ರಹವಾದ ಮೊತ್ತನ್ನು ರೈತರಿಗೆ ನೀಡಿದರು. ವ್ಯಾಪಾರಿಯಿಂದ ಬಂದ ಹಣದಲ್ಲಿ ವಂಚನೆಗೊಳಗಾದ ಎಲ್ಲಾ ರೈತರಿಗೆ ಹಣ ವಾಪಸು ನೀಡುವ ಕೆಲಸ ಮಾಡಿದ್ದು, ರೈತರಿಗೆ ಅಪಾರ ಸಂತಸ ತಂದಿದೆ.

ಕೂಡಲಗಿ–ಬೈಚಬಾಳನ 44 ಜನ

ಹುಣಸಗಿಯಲ್ಲಿ ಭತ್ತದ ವ್ಯಾಪರಿಯಿಂದ ವಂಚನೆಗೊಳಗಾದ ರೈತರಿಗೆ ಅದೇ ವ್ಯಾಪಾರಿಯಿಂದ 71 ಲಕ್ಷ ರೂ. ವಶಕ್ಕೆ ಪಡೆದು ರೈತರಿಗೆ ಮಾಜಿ ಸಚಿವ ನರಸಿಂಹ ನಾಯಕ ನೀಡಿದರು.

ರೈತರಿಂದ ಅಪಾರ ಪ್ರಮಾಣದಲ್ಲಿ ಭತ್ತ ಖರಿಧಿಸಿ ಪಂಗನಾಮ ಹಾಕಿದ್ದ ವ್ಯಾಪಾರಿಯೊಬ್ಬನ ಜಾಡು ಹಿಡಿದು, ಆತನಿಂದ 71.26 ಲಕ್ಷ ರೂ. ಗಳನ್ನು ನಗದು ಹಣ ವಶಪಡಿಸಿಕೊಂಡು, ಎಲ್ಲಾ ರೈತರಿಗೆ ಹಣ ಕೊಡಿಸುವ ಕೆಲಸ ಅವರು ಯಶಸ್ವಿಯಾಗಿ ಮಾಡಿದ್ದಾರೆಂದು ಯಲ್ಲಪ್ಪ ಕುರಕುಂದಿ ತಿಳಿಸಿದರು. 50 ಲಕ್ಷ ರೂ. ಗಳನ್ನು ಇಷ್ಟರಲ್ಲೆ ಭತ್ತದ ವ್ಯಾಪಾರಿ ವಾಪಸು ನೀಡಲಿದ್ದಾನೆ. ಈ ಕುರಿತು ಗ್ರಾಮದ ಪ್ರಕಾಶ, ಸಿದ್ದು ಪೂಜಾರಿ, ಈರಣ್ಣ ಅವರಿಗೆ ವ್ಯಾಪಾರಿಯಿಂದ ವಸೂಲಿ ಮಾಡಿದ ಹಣ ನೀಡಿ ನರಸಿಂಹ ನಾಯಕ ಸ್ವಾಂತಾನ ಹೇಳಿದರು. ರೈತರ ಬೆವರಿನ ಹನಿ ಇರುವ ಹಣ ಎಂದಿಗೂ ಮೋಸ ಮಾಡಲು ಯಾರಿಂದಲೂ ಸಾಧ್ಯವಿಲ್ಲವೆಂದರು. ರೈತರು ಕೂಡಾ ಸಾಕಷ್ಟು ಜಾಗರೂಕರಾಗಿರಬೇಕು. ವಿವಿಧ ಬೆಳೆಗಳನ್ನು ಬೆಳೆಯಬೇಕು. ನೀರಿನ ಮಿತವ್ಯಯ ಮಾಡಬೇಕು. ಹಣಕಾಸು ವ್ಯವಹಾರದಲ್ಲಿ ಸಾಕಷ್ಟು ಮುಂಜಾಗುರುಕತೆ ಇರಲಿ ಎಂದು ಹೇಳಿದರು. ಜಿಪಂ ಮಾಜಿ ಅಧ್ಯಕ್ಷ ಯಲ್ಲಪ್ಪ ಕುರಕುಂದಿ, ಕೃಷ್ಣಾರೆಡ್ಡಿ ಮುದನೂರು ಇತರರು ಇದ್ದರು.

ವಿವಿಧ ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಕೆಂಭಾವಿ ಸಮೀಪ ಹದನೂರ ಗ್ರಾಮದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಮುಖಂಡ ವಿಶ್ವನಾಥರೆಡ್ಡಿ ಯಾಳಗಿ, ಆನಂದರೆಡ್ಡಿ ಹಚರೆಡ್ಡಿ, ಶರಣಗೌಡ ಪಾಟೀಲ, ಅಪ್ಪುಗೌಡ ಹಚರೆಡ್ಡಿ, ಗುತ್ತಪ್ಪಗೌಡ ಮಾಲಿಪಾಟೀಲ, ಮುತ್ತುಗೌಡ ಹಚರೆಡ್ಡಿ, ಪ್ರಭುದೇವ ನಾಯಕ, ಕರೆಪ್ಪ ಗುಡಿಮನಿ, ಮಲ್ಲಿನಾಥರೆಡ್ಡಿ ಪಾಟೀಲ, ಪರ್ವತರೆಡ್ಡಿ ಪಾಟೀಲ, ಬೀರಪ್ಪ ಪೂಜಾರಿ, ಅನೀಲ ತಳವಾರ ಅನೇಕರಿದ್ದರು.

ಶಹಾಪುರದ ಕಸಾಪ ಕಚೇರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮ ಜರುಗಿತು.

ಕನ್ನಡದ ಅಸ್ಮಿತೆ ಉಳಿಸಿ, ಬೆಳೆಸಿ

ಶಹಾಪುರ: ಕನ್ನಡಿಗರ ಮನೆಮನಗಳಲ್ಲಿ ಕನ್ನಡದ ಕಂಪು ತುಂಬಿಸುವುದೇ ಪರಿಷತ್ತಿನ ಗುರಿಯಾಗಿದೆ. ಇಂದಿನ ಇಂಗ್ಲೀಷ್ ವ್ಯಾಮೋಹದ ಮಧ್ಯೆ ನಾವು ಕನ್ನಡ ಭಾಷೆಯನ್ನು ಜೀವಂತವಾಗಿ ಉಳಿಸಿಕೊಂಡು ಹೋಗೋದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದೆ ಎಂದು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ರವೀಂದ್ರನಾಥ ಹೊಸಮನಿ ಹೇಳಿದರು. ನಗರದ ಕಸಾಪ ಕಚೇರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನ ದಿನಾಚರಣೆ ಉದ್ದೇಶಿಸಿ ಮಾತನಾಡಿದರು.

ಹಿರಿಯ ಕವಿ ಸಿದ್ದರಾಮ ಹೊನಕಲ್ ಮಾತನಾಡಿ, ಇಂದಿನ ಯುವ ಜನಾಂಗ ಕನ್ನಡದ ಅಸ್ಮಿತೆಯನ್ನು ಉಳಿಸಿಕೊಂಡು ಹೋಗಲು, ಕನ್ನಡ ನಾಡು ನುಡಿ ಬಿಂಬಿಸುವ ಕನ್ನಡ ಭಾಷಾ ಗ್ರಂಥಗಳನ್ನು ಅಧ್ಯಯನ ಮಾಡಿ, ಉತ್ತಮ ಬರಹಗಾರರಾಗಿ ಹೊರಹೊಮ್ಮವುದು ಅವಶ್ಯಕತೆ ಎಂದು ನುಡಿದರು. ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಸಿದ್ದಲಿಂಗಣ್ಣ ಆನೆಗುಂದಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಇತಿಹಾಸ ಹಾಗೂ ಪ್ರಸ್ತುತ ದಿನಗಳಲ್ಲಿ ಕನ್ನಡದ ಅಧ್ಯಯನದ ಮಹತ್ವ ಬಗ್ಗೆ ಮಾತನಾಡಿದರು. ಸಾಹಿತಿಗಳಾದ ಶಿವಣ್ಣ ಇಚೇರಿ, ಪದಾಧಿಕಾರಿಗಳಾದ ದೇವೇಂದ್ರಪ್ಪ ವಿಶ್ವಕರ್ಮ, ಶಂಕರ್ ಹುಲ್ಕಲ್, ಸಣ್ಣ ನಿಂಗಣ್ಣ ನಾಯ್ಕೋಡಿ, ರಂಗನಾಥ್ ದೊರೆ, ನಿಂಗಣ್ಣ ತಿಪ್ಪನಹಳ್ಳಿ ಇತರರು ಉಪಸ್ಥಿತಿರಿದ್ದರು.

ಹೊಲಸಿನಿಂದ ಕೂಡಿದ ಹುಣಸಗಿ ಬಸ್ ನಿಲ್ದಾಣ

ಹುಣಸಗಿ: ಇಲ್ಲಿಯ ಬಸ್ ನಿಲ್ದಾಣದಲ್ಲಿ ಮೂಲ ಸೌಕರ್ಯಗಳ ಕೊರತೆಯಿಂದ ನರಳುತ್ತಿದೆ. ಮುಖ್ಯವಾಗಿ ಕುಡಿಯುವ ನೀರು, ಸ್ವಚ್ಛತೆ, ಶೌಚಾಲಯ ಎನ್ನುವದು ಗಮನಾರ್ಹ. ಕಳೆದ ಹತ್ತು ದಿನಗಳಿಂದ ಶೌಚಾಲಯಕ್ಕೆ ಬೀಗ ಹಾಕಲಾಗಿದೆ. ಶೌಚಾಲಯದ ನಿರ್ವಹಣೆ ಕೊರತೆಯಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಸ್ಥಳೀಯ ನಾಗರೀಕರು ಹಾಗೂ ಜನಪ್ರತಿನಿಧಿಗಳ ಮೃದು ಧೋರಣೆ ಅಧಿಕಾರಿಗಳಿಗೆ ಏನೂ ಮಾಡಿದರೂ ನಡೆಯುತ್ತದೆ ಎಂಬ ಅಸಡ್ಡೆಗೆ ಕಾರಣವಾಗಿದೆ. ಈಶಾನ್ಯ ಸಾರಿಗೆ ನಿಗಮದ ಅಧಿಕಾರಿಗಳಿಗೆ ಮೂಟೆಗಟ್ಟಲೇ ಮನವಿ ಧೂಳು ತಿನ್ನುತ್ತಾ ಬಿದ್ದಿವೆ. ಸ್ಪಂದನೆ ಮಾತ್ರ ಶೂನ್ಯವೆಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಸುರಪುರ, ನಾರಾಯಣಪುರ, ತಾಳಿಕೋಟೆ ದೂರದ ಊರಿಗೆ ಹುಣಸಗಿ ಮುಖಾಂತರ ಪ್ರಯಾಣಿಸುವ ಮಹಿಳಾ ಪ್ರಯಣಿಕರಿಗಾಗಿ ಮಾನವೀಯತೆ ಇರುವ ಕೆಲ ಕಂಡಕ್ಟರ್‌ಗಳು ಹುಣಸಗಿ ಬಸ್ ನಿಲ್ದಾಣದಲ್ಲಿ ಶೌಚಾಲಯ ಹಾಗೂ ಮೂತ್ರಾಲಯ ಬಂದಾಗಿದೆ ಎಂದು ಅನೌನ್ಸ್ ಮಾಡುತ್ತಿದ್ದಾರೆ. ಇದು ಪಟ್ಟಣದ ನಾಗರಿಕರಿಗೆ, ಗಣ್ಯರಿಗೆ ತೀರಾ ನಾಚಿಕೆಯ ಸಂಗತಿಯಾಗಿದೆ.

ಹುಣಸಗಿಗೇಕೆ ಅಸಡ್ಡೆ:

ತಿಂಥಿಣಿ–ಬ್ರಿಜ್–ಕಕ್ಕೇರಾ–ಹುಣಸಗಿ–ಕೆಂಭಾವಿ–ಗೋಲಗೇರಾ–ಯಂಕಂಚಿ–ಸಿಂದಗಿ ಬಸ್ ಮಾರ್ಗ ಆರಂಭಿಸಿ ಎಂದು ನೂರಾರು ಬಾರಿ ಸುರಪುರ ಘಟಕಕ್ಕೆ ಮನವಿ ಮಾಡಲಾಗಿದೆ ಏನೂ ಪ್ರಯೋಜ ವಾಗಿಲ್ಲ. ಅವರಿಗೇನಿದ್ದರೂ ದೂರದ ರಾಯಚೂರು, ಹೊಸಪೇಟೆ, ಬೆಂಗಳೂರು, ಕಲಬುರಗಿ–ರಾಯ ಚೂರು ಬೇರೆ ವಿಭಾಗದಲ್ಲಿ ಬಸ್ ಓಡಿಸುವದರಲ್ಲಿ ಖುಷಿ ಕಾಣುತ್ತಾರೆ. ಆದರೆ ಸಿಂದಗಿಗೆ ಬಸ್ ಬೇಕೆಂಬ ಬೇಡಿಕೆ ಇದುವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಹೀಗಾಗಿ ಹುಣಸಗಿಗೆ ಮಾತ್ರ ಅಸಡ್ಡೆ ತೋರುತ್ತಿದ್ದಾರೆಂಬ ದೂರು ಸಾರ್ವತ್ರಿಕವಾಗಿದೆ. ಯಾದಗಿರ ಈಶಾನ್ಯ ಸಾರಿಗೆ ವಿಭಾಗ ಅಧಿಕಾರಿಗಳಿಗೆ ಮನವಿ ಮಾಡಿದರೆ ಖಂಡಿತಾ ಸ್ಪಂದಿಸುವದಿಲ್ಲ. ಪ್ರತಿಯೊಂದಕ್ಕೂ ಶಾಸಕರ ಗಮನಕ್ಕೆ ತರಬೇಕಾಗಿದೆ. ಶಂಖದಿಂದ ಬಂದರೆ ಮಾತ್ರ ತೀರ್ಥ ಎನ್ನುವಂತಾಗಿದೆ ಎಂಬುದು ಅಂಬೋಣವಾಗಿದೆ.

ಹುಣಸಗಿ ಬಸ್ ನಿಲ್ದಾಣ. ಶೌಚಾಲಯಕ್ಕೆ ಬೀಗ ಹಾಕಿರುವದು

ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ನೀಡಿ

ಗುರುಮಠಕಲ್: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸರಣಿ ಅಸಹಜ ಸಾವುಗಳು, ಕರ್ತವ್ಯದ ವೇಳೆ ನಡೆಯುತ್ತಿರುವ ದೈಹಿಕ ಹಲ್ಲೆಗಳು ಹಾಗೂ ಅಧಿಕಾರಿಗಳ ಮೇಲಿನ ವಿಪರೀತ ಮಾನಸಿಕ ಒತ್ತಡವನ್ನು ತಡೆಗಟ್ಟಿ ಅವರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ರಾಜ್ಯ ಪಂಚಾಯಿತ್ ಅಭಿವೃದ್ಧಿ ಅಧಿಕಾರಿಗಳ (ಬಿ–ಗ್ರೇಡ್) ಹುದ್ದೆ ಉನ್ನತೀಕರಣ ಸಂಘದ ಪದಾಧಿಕಾರಿಗಳು ತಾಪಂ ಇಓ ಅಂಬರೀಶ್ ಪಾಟೀಲ ಮೂಲಕ ರಾಜ್ಯಪಾಲರಾದ ಥಾವರ್ ಚಂದ್ ಗೆಹೋಟ್ ಅವರಿಗೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದರು. ನಂತರ ಸಂಘದ ಮುಖಂಡ ಜಗದೀಶ್ ಮಾತನಾಡಿ, ಇತ್ತೀಚಿನ ದುರಂತ ಘಟನೆ ವ್ಯವಸ್ಥೆಯ ವೈಫಲ್ಯಕ್ಕೆ ಬಲಿಯಾದ ಮತ್ತೊಂದು ಜೀವ ರೋಣ ತಾಲೂಕಿನ ಅಸೂಟಿ. ಕೊತಬಾಳ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಕ್ಕುಂಹುಸೇನ ಕರಡಿಗುಡ್ಡ ಇತ್ತೀಚೆಗೆ ಗದಗನ ರೋಣದಲ್ಲಿ ತಾನಿದ್ದ ಬಾಡಿಗೆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ಇಡೀ ಅಧಿಕಾರಿ ವರ್ಗವನ್ನು ಶೋಕಸಾಗರದಲ್ಲಿ ಮುಳುಗಿಸಿದೆ ಹಾಗೂ ಆತಂಕಗೊಂಡಿದ್ದಾರೆ. ಇದು ಕೇವಲ ಒಂದು ಪ್ರತ್ಯೇಕ ಪ್ರಕರಣವಲ್ಲ, ಬದಲಾಗಿ 2026ರವರೆಗೆ ರಾಜ್ಯದಲ್ಲಿ ದಾಖಲಾಗಿರುವ 180ನೇ ಅಸಹಜ ಸಾವಿನ ಪ್ರಕರಣವಾಗಿದೆ. ಇಂತಹ ಘಟನೆಗಳು ಅಧಿಕಾರಿಗಳ ಕುಟುಂಬಗಳನ್ನು ಅನಾಥವಾಗಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಂಘದ ತಾಲ್ಲೂಕು ಅಧ್ಯಕ್ಷರು, ಪದಾಧಿಕಾರಿಗಳು ಇನ್ನಿತರರು ಉಪಸ್ಥಿತರಿದ್ದರು.

ಭರವಸೆ: ಅಧಿಕಾರಿಗಳ ಸುರಕ್ಷತೆ ಮತ್ತು ನೆಮ್ಮದಿಯ ಕರ್ತವ್ಯ ನಿರ್ವಹಣೆಗೆ ಪೂರಕವಾದವಾತಾವರಣನಿರ್ಮಿಸುವುದು ಅತ್ಯಗತ್ಯವಾಗಿದೆ. ಈ ಮನವಿಯನ್ನು ತಕ್ಷಣವೇ ರಾಜ್ಯಪಾಲರ ಕಾರ್ಯಾಲಯಕ್ಕೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ರವಾನಿಸಿ ಸೂಕ್ತ ಕ್ರಮಕ್ಕಾಗಿ ಶಿಫಾರಸು ಮಾಡುವುದಾಗಿ ತಾಪಂ ಇಓ ಅಂಬರೀಶ್ ಪಾಟೀಲ ಭರವಸೆ ನೀಡಿದರು.



ಗುರುಮಠಕಲ್‌ನಲ್ಲಿ ರಾಜ್ಯ ಪಂಚಾಯಿತ್ ಅಭಿವೃದ್ಧಿ ಅಧಿಕಾರಿಗಳ ಸಂಘದ ಪದಾಧಿಕಾರಿಗಳು ತಾಪಂ ಇಓ ಅಂಬರೀಶ್ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

ಹುಣಸಗಿ: ಬಿಜೆಪಿಯ ವಿಜಯೋತ್ಸವ ಆಚರಣೆ

ಹುಣಸಗಿ: ಪಶ್ಚಿಮ ಬಂಗಾಳದಲ್ಲಿಯ ದಿದೀಯ ದುರಾಡಳಿತ ಕೊನೆಗೊಂಡಿದೆ ಎಂದು ಬಿಜೆಪಿ ಮುಖಂಡ ವಿರೇಶ ಚೊಂಚೋಳಿ ಹೇಳಿದರು. ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವಿನ ವಿಜಯೋತ್ಸವ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಆಚರಿಸಿದ ಅವರು, ಇಲ್ಲಿವರೆಗೆ ಬಂಗಾಳದಲ್ಲಿ ಹಿಂದುಗಳು, ಅಕ್ರಮ ವಲಸಿಗರಿಂದ ಅನುಭವಿಸಿದ ಯಾತನೆ ಹೇಳತೀರದು ಎಂದರು. ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಸಂಗಣ್ಣ ಸಾಹು ವೈಲಿ ಮಾತನಾಡಿ, ಸರ್ವರಲ್ಲಿ ಅಭಿವೃದ್ಧಿ ಕಾಣಲು ಬಿಜೆಪಿಯಿಂದ ಮಾತ್ರ ಸಾಧ್ಯವೆಂದು ತಿಳಿಸಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೇಲಪ್ಪ ಗುಳಗಿ ಮಾತನಾಡಿ, ಪ್ರಧಾನಿ ಮೋದಿ ನಾಯಕತ್ವದಲ್ಲಿ ದೇಶ ವಿಶ್ವದ ವೇದಿಕೆಯಲ್ಲಿ ಭಾರತದ ಹಿರಿಮೆ ಗರಿಮೆ ಎತ್ತರ ಎತ್ತರಕ್ಕೆ ಏರುತ್ತಿದೆ ಎಂದರು. ಅಮರಣ್ಣ ದೇಸಾಯಿ, ಗುರುಲಿಂಗಣ್ಣ ಸಜ್ಜನ, ಕಿಡಗೆಣ್ಣಯ್ಯ ದೇಸಾಯಿಗುರು, ಮಲ್ಲು ಹೆಬ್ಬಾಳ, ನಾಗಯ್ಯಸ್ವಾಮಿ ದೇಸಾಯಿಗುರು, ಆನಂದಸ್ವಾಮಿ ಹೀರೇಮಠ, ಚಂದ್ರಶೇಖರ್ ಪಟ್ಟಣಶೆಟ್ಟಿ, ಹಳ್ಳೆಪ್ಪ ಗುತ್ತೇದಾರ, ಅನೀಲ್ ಬಳಿ, ಶಿವರುದ್ರ ದೇಸಾಯಿ, ಆನಂದ ಬಾರಿಗಿಡ, ಗೋಪಾಲ ಹುಲಿಮನಿ, ಸಿದ್ದು ಮೇಲಿನಮನಿ, ಬಾಬು ರಾಠೋಡ, ಅಶೋಕ ನಗನೂರ, ಮಲ್ಲು ದೇಸಾಯಿ ಇನ್ನಿತರರು ಇದ್ದರು.

ಬಿಜೆಪಿ ಜಿಲ್ಲಾಧ್ಯಕ್ಷ ವಿಭೂತಿಹಳ್ಳಿ ಹೇಳಿಕೆ | 9ರಂದು ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವ

ಯಾದಗಿರಿ ಜಿಲ್ಲೆಯಿಂದ ಐದು ಸಾವಿರಕ್ಕೂ ಹೆಚ್ಚು ಜನ ಭಾಗಿ

ಸಂ.ಕ. ಸಮಾಚಾರ ಯಾದಗಿರಿ: ಬರುವ ದಿ. 9ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರು ಜನಸೇವೆಯಲ್ಲಿ 50 ಸಾರ್ಥಕ ವರ್ಷಗಳನ್ನು ಪೂರೈಸಿದ ನಿಮಿತ್ಯ ಹಮ್ಮಿಕೊಂಡಿರುವ ಐತಿಹಾಸಿಕ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಯಾದಗಿರಿ ಜಿಲ್ಲೆಯಿಂದ 5 ಸಾವಿರಕ್ಕೂ ಹೆಚ್ಚು ಜನರು ತೆರಳಿಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ ಹೇಳಿದರು. ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿಗೆ ಬಿಎಸ್‌ವೈ ನೀಡಿರುವ ಕೊಡುಗೆ ಅಪಾರ. ಎಲ್ಲಾ ವರ್ಗದ ಜನರ ಕಲ್ಯಾಣಕ್ಕಾಗಿ ಜನಪರ ಯೋಜನೆಗಳನ್ನು ತಮ್ಮ ಅಧಿಕಾರವಧಿಯಲ್ಲಿ ಜಾರಿಗೆ ತರುವ ಮೂಲಕ ಜನಮಾನಸದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ಈ ಕಾರ್ಯಕ್ರಮಕ್ಕೆ ರಾಜ್ಯ ಮೂಲೆ–ಮೂಲೆಯಿಂದ ಅವರ ಅಭಿಮಾನಿಗಳು ಆಗಮಿಸಲು ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು. ಯಾದಗಿರಿ ಜಿಲ್ಲಾ ಕೇಂದ್ರವಾಗಿ ಅಸ್ತಿತ್ವಕ್ಕೆ ಬರಲು ಬಿಎಸ್‌ವೈ ಗಟ್ಟಿ ನಿರ್ಧಾರವೇ ಕಾರಣ. ಜಿಲ್ಲಾ ರಚನೆ ಮಾಡುವ

ಯಾದಗಿರಿ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ ಮಾತನಾಡಿದರು.

ಜೊತೆಗೆ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿ ಹೊಸ ಕಾಯಕಲ್ಪ ನೀಡಿದ್ದಾರೆ. ಅದರಂತೆ ಸರ್ಕಾರಿ ಮೆಡಿಕಲ್ ಕಾಲೇಜ್ ಅವರ ಇಚ್ಛಾಶಕ್ತಿಯಿಂದ ನಿರ್ಮಾಣವಾಗಿದ್ದು ದೇಶದ ವಿವಿಧೆಡೆಯಿಂದ ಸಾವಿರಾರು ವಿಧ್ಯಾರ್ಥಿಗಳು ಮೆಡಿಕಲ್ ಅಭ್ಯಾಸಕ್ಕೆ ಬರುತ್ತಿದ್ದಾರೆ.ಅಲ್ಲದೇ ಸಹಸ್ರಾರು ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೌಲಭ್ಯವೂ ಸಿಗುತ್ತಿದೆ ಎಂದು ಜಿಲ್ಲೆಗೆ ಬಿಎಸ್‌ವೈ ಕೊಡುಗೆಗಳನ್ನು ಪ್ರಸ್ತಾಪಿಸಿದರು.

ಚಿತ್ರದುರ್ಗದಲ್ಲಿ ನಡೆಯುವ ಐತಿಹಾಸಿಕ ಸಮಾರಂಭದಲ್ಲಿ ನಾಡಿನ ವಿವಿಧ ಮಠಾಧೀಶರು ಹಾಗೂ ಪಕ್ಷಾತೀತ ನಾಯಕರು ಭಾಗವಹಿಸಲಿದ್ದಾರೆ. ನಾವು ಈಗಾಗಲೇ ಜಿಲ್ಲೆಯಲ್ಲಿ ಕಾರ್ಯಕರ್ತರಿಗೆ ಸಮಾರಂಭಕ್ಕೆ ತೆರಳಲು ಮಾಹಿತಿ ನೀಡಿದ್ದೇವೆ ಎಂದರು. ಜಿಲ್ಲೆಯಲ್ಲಿ ನಮ್ಮ ಪಕ್ಷ ಬಲಿಷ್ಠವಾಗಿದೆ ಎಲ್ಲರೂ ಸಂಘಟಿತರಾಗಿ ವಿಪಕ್ಷದಲ್ಲಿದ್ದ ಕೆಲಸ ಮಾಡುತ್ತದ್ದೇವೆ. ನಮ್ಮಲ್ಲಿ ಯಾವುದೇ ಬಣ ರಾಜಕೀಯ, ವ್ಯಕ್ತಿ ನಿಷ್ಠೆಗೆ ಅವಕಾಶವಿಲ್ಲ ಎಲ್ಲರೂ ಪಕ್ಷಕ್ಕಾಗಿ ದುಡಿಯುತ್ತಿದ್ದೇವೆ.ಪ್ರತಿಯೊಂದು ಹಂತದಲ್ಲಿ ಸರ್ಕಾರದ ವೈಫಲ್ಯಗಳ ವಿರುದ್ಧ ಹೋರಾಟ ಮಾಡಿ, ಬೂತ್‌ಗಳ ಮಟ್ಟದಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು. ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಮಹೇಶರಡ್ಡಿಗೌಡ ಮುದ್ನಾಳ, ಮುಖಂಡರಾದ ನಾಗರತ್ನ ಕುಪ್ಪಿ, ರಾಚನಗೌಡ ಮುದ್ನಾಳ, ದೇವಿಂದ್ರನಾಥ ನಾದ, ಪರಶುರಾಮ ಕುರಕುಂದಿ, ವೆಂಕಟರಡ್ಡಿ ಅಬ್ಬೆತುಮಕೂರ, ಹಣಮಂತ ಇಟಗಿ, ವಿರುಪಾಕ್ಷಯ್ಯಸ್ವಾಮಿ ಹೆಡಗಿಮದ್ರಾ ಇನ್ನಿತರರಿದ್ದರು.

ಸುದ್ದಿ ಮಿಂಚು

ಕಾಣೆಯಾದ ಮಹಿಳೆ ಪತ್ತೆಗೆ ಮನವಿ

ರಾಯಚೂರು: ನೇತಾಜಿ ಪೊಲೀಸ್ ಠಾಣೆಯ ವ್ಯಾಪ್ತಿಯ ದೇವಿನಗರದ ನಿವಾಸಿಯಾದ ಲಕ್ಷ್ಮೀ ಗಂಡ ತಿಮ್ಮಪ್ಪ (43) ಎಂಬ ಮಹಿಳೆಯು ಮಾರ್ಚ 27ರಂದು ಬೆಳಿಗ್ಗೆ 11.30 ಗಂಟೆಯ ಕೆಲಸ ಮಾಡಿದ ಸಂಬಳವನ್ನು ತೆಗೆದುಕೊಂಡು ಬರುತ್ತೇನೆ ಅಂತಾ ಹೇಳಿ ಹೋದವಳು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ನೇತಾಜಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಕೊಳ್ಳಲಾಗಿದೆ.

ಕಾಣೆಯಾದ ಮಹಿಳೆಗೆ ಪೂರ್ಣಿಮಾ, ತಾನು, ಶ್ರೀಧರ್, ಚರಣ ಕುಮಾರ್, ವಿನಯ ಕುಮಾರ್ ಎಂಬ ಮಕ್ಕಳಿದ್ದು, ಕಾಣೆಯಾದ ಮಹಿಳೆಯ ಗಂಡ ತಿಮ್ಮಪ್ಪ ಅವರು ಒಂದು ವರ್ಷದ ಹಿಂದೆ ಲಿವರ್ ವೈಫಲ್ಯವಾಗಿ ಮೃತಪಟ್ಟಿದ್ದಾರೆ.

ಕಾಣೆಯಾದ ಮಹಿಳೆಯ ಚಹರೆ ಪಟ್ಟಿ: ವಯಸ್ಸು 43 ವರ್ಷ, ಜಾತಿ ಎಸ್.ಸಿ (ಮಾದಿಗ), ಉದ್ಯೋಗ ಸಿಲ್ವರ್ ಸ್ಪೂನ್ ಹೋಟೆಲ್‌ನಲ್ಲಿ ಕೆಲಸ ಮಾಡಲಾಗುತ್ತಿದ್ದು, ಕೋಲು ಮುಖ, ಕಪ್ಪು ಮೈಬಣ್ಣ, ಕಪ್ಪು ಕೂದಲು, ಬಲಗೈ ಮುಂಗೈ ಮೇಲೆ ಟಿಎಲ್ ಅಂತಾ ಅಚ್ಚೆ ಇರುತ್ತದೆ. ಬಂಗಾರದ ಬಣ್ಣದ ಸೀರೆ, ಕೆಂಪು ಬಣ್ಣದ ಕುಬುಸ ಉಡುಪು ಧರಿಸಲಾಗಿದೆ. ಕನ್ನಡ, ತೆಲುಗು ಹಾಗೂ ಹಿಂದಿ ಭಾಷೆ ಮಾತನಾಡುತ್ತಾಳೆ. ಕಾಣೆಯಾದ ಮಹಿಳೆಯ ಸುಳಿವು ಸಿಕ್ಕಲ್ಲಿ ದೂರವಾಣಿ ಸಂಖ್ಯೆ: 08532–240222 ಅಥವಾ ರಾಯಚೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08532–235635, 08532–235100, 9480803800 ಅಥವಾ ಪಿ.ಎಸ್.ಐ ಮೊಬೈಲ್: 9480803846, ನೇತಾಜಿ ನಗರ ಠಾಣೆ ಹಾಗೂ ಸಿ.ಪಿ.ಐ ಪಶ್ಚಿಮ ವೃತ್ತ ರಾಯಚೂರು ಮೊಬೈಲ್ ಸಂಖ್ಯೆ: 9480803831ಗೆ ಸಂಪರ್ಕ ಮಾಡಬಹುದಾಗಿದೆ ಎಂದು ನೇತಾಜಿ ನಗರ ಪೊಲೀಸ್ ಠಾಣೆಯು ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯ

ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಗಿಲ್ಲೇಸೂಗೂರು ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ.12ರ ಬೆಳಿಗ್ಗೆ 8ರಿಂದ ಸಂಜೆ 05ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಮಸ್ಕಿ ಕಾಳಿಕಾದೇವಿ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ಆರ್.ಬಸನಗೌಡ ತುರ್ವಿಹಾಳ ಭೂಮಿ ಪೂಜೆ ನೆರವೇರಿಸಿದರು.

ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಶಾಸಕರಿಂದ ಚಾಲನೆ

ಮಸ್ಕಿ: ಪಟ್ಟಣದಲ್ಲಿ ಡಾ.ಅಂಬೇಡ್ಕರ್ ಭವನ, ಕನಕ ಭವನ ಹಾಗೂ ಕಾಳಿಕಾದೇವಿ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಆರ್.ಬಸನಗೌಡ ತುರ್ವಿಹಾಳ ಸೋಮವಾರ ಭೂಮಿ ಪೂಜೆ ನೆರವೇರಿಸಿದರು.

ಮೂರು ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ಶಾಸಕರು ಮಾತನಾಡಿ, ಪಟ್ಟಣದಲ್ಲಿ ಅಂಬೇಡ್ಕರ್ ಭವನ, ಕನಕ ಭವನ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಒಟ್ಟು 2.40 ಕೋಟಿ ರೂ.ಅನುದಾನ ನೀಡಲಾಗಿದೆ ಎಂದರು. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಅಂಬೇಡ್ಕರ್ ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ 1.10 ಕೋಟಿ, ಕಾಳಿಕಾದೇವಿ ದೇವಸ್ಥಾನದ ಹತ್ತಿರ 20 ಲಕ್ಷ ರೂ. ಸಮುದಾಯ ಭವನ ಹಾಗೂ ಕವಿತಾಳ ರಸ್ತೆ ಹತ್ತಿರ ಕನಕ ಭವನದ ಮುಂದುವರಿದ ಕಾಮಗಾರಿಗೆ 1.10 ಕೋಟಿ ರೂ. ಅನುದಾನ ನೀಡಲಾಗಿದ್ದು, ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಪಟ್ಟಣದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಮುಖ್ಯಾಧಿಕಾರಿ ನರಸರೆಡ್ಡಿ, ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರು, ಕೃಷಿ ಸಹಕಾರ ಸಂಘದ ಅಧ್ಯಕ್ಷ ನಾಗಭೂಷಣ ಬಾರಿಕೇರ್, ಮುಖಂಡರಾದ ವೆಂಕಟರೆಡ್ಡಿ ಹಾಲಾಪೂರ, ಮಲ್ಲಯ್ಯ ಬಳ್ಳಾ, ದೊಡ್ಡ ಕರಿಯಪ್ಪ, ವೀರೇಶ ಪಾಟೀಲ, ಶರಣಪ್ಪ ಎಲಿಗಾರ, ಮಲ್ಲಯ್ಯ ಮುರಾರಿ, ರಾಜೇಶ್ವರಿ ನಾಯಕ, ನಾಗರತ್ನ, ಕೃಷ್ಣ ಚಿಗರಿ ಸೇರಿದಂತೆ ಇತರರಿದ್ದರು.

ಭಾಷೆಯ ಉಳಿವಿಗಾಗಿ ಸಾಹಿತಿಗಳ ಕೊಡುಗೆ ಅಪಾರ

ಡಾ.ರವಿ ರಾಜೇಶ್ವರ ಅಭಿಮತ । ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ

ರಾಯಚೂರು: ಕನ್ನಡ ನಾಡಿನ ನೆಲ, ಜಲ ಹಾಗೂ ಭಾಷೆ ಉಳಿವಿಗಾಗಿ ಅನೇಕ ಸಾಹಿತಿಗಳ ಕೊಡುಗೆ ಅಪಾರವಾಗಿದೆ ಎಂದು ಖ್ಯಾತ ವೈದ್ಯರಾದ ಡಾ.ರವಿರಾಜೇಶ್ವರ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕನ್ನಡ ಭವನದಲ್ಲಿ ಮಂಗಳವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ರಾಯಚೂರ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರಕವಿ ಕುವೆಂಪುರವರು ಕನ್ನಡದ ಬಗ್ಗೆ ಬರೆದಷ್ಟು ಹೇಳಿದವರು. ಎಲ್ಲಾದರು ಇರು, ಎಂತಾದರೂ ನೀ ಕನ್ನಡವಾಗಿರು, ಕನ್ನಡಕ್ಕೆ ಕೈ ಎತ್ತಿದರೆ ನಿನ್ನ ಕೈ ಕಲ್ಪವೃಕ್ಷವಾಗುವುದು ಎನ್ನುವ ಕವಿವಾಣಿ ಹೇಳಿ ಕನ್ನಡ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು ಕನ್ನಡ ಉಳಿಸುವುದು ಬಳಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಅವರು ಹೇಳಿದರು.

ವಿಶೇಷ ಉಪನ್ಯಾಸವನ್ನು ನೀಡಿದ ಕನ್ನಡ ಶಿಕ್ಷಕರಾದ ವೈಶಾಲಿ ಪಾಟೀಲ್ ಅವರು, ಪ್ರತಿಯೊಂದು ಸಮುದಾಯದ ಸಂಸ್ಕೃತಿ, ಆಚಾರ, ವಿಚಾರ, ಅಸ್ಮಿತೆಯು ಅದರ ಭಾಷೆಯಲ್ಲಿ ಅಡಗಿರುತ್ತದೆ. ಅಂತಹ ಭಾಷೆಯನ್ನ ಕಷ್ಟಪಟ್ಟು ಬೆಳಸಿದ ಪರಿಷತ್ತಿಗೆ 112ರ ಸಂಭ್ರಮ. ಕನ್ನಡಿಗರಿಗೆ ಇಂದು ಪವಿತ್ರ ದಿನವಾಗಿದೆ. ಏಕೆಂದರೆ 1915 ಮೇ 5 ರಂದು ಪರಿಷತ್ತು ಅಸ್ತಿತ್ವಕ್ಕೆ ಬಂದ ದಿನವಾಗಿದೆ ಎಂದು ವಿವರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ತ್ರಿಮೂರ್ತಿಗಳೆಂದರೆ ಸರ್ ಎಂ. ವಿಶ್ವೇಶ್ವರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ರವರು ಅವರ ಕೊಡುಗೆ ಅಪಾರವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಏಕೀಕರಣ ಆತ್ಮ ಮತ್ತು ದೇಹ ಇದ್ದಂತೆ . ಕರ್ನಾಟಕ ಏಕೀಕರಣಕ್ಕೆ ಬೌದ್ಧಿಕ ಬೆಂಬಲವಾಗಿ ನಿಂತಿದ್ದು ಸಾಹಿತ್ಯ ಪರಿಷತ್ತು. ಶತಮಾನ ಕಂಡ ಪರಿಷತ್ತಿನ ಮುಂದೆ ವಿಭಿನ್ನವಾದ ಸವಾಲು ಜವಾಬ್ದಾರಿಗಳಿವೆ. ಡಿಜಿಟಲೀಕರಣ, ಶೈಕ್ಷಣಿಕ ಬಿಕ್ಕಟ್ಟು, ಗಡಿನಾಡು ಕನ್ನಡಿಗರ ಸಮಸ್ಯೆ, ಪಾರದರ್ಶಕ ಆಡಳಿತ ಇವೆಲ್ಲವುಗಳಿಗೆ ಉತ್ತರ ಕಂಡುಕೊಳ್ಳುವ ಜವಾಬ್ದಾರಿ ನಮ್ಮೆಲರದು ಎಂದು ತಿಳಿಸಿದರು.

ರಾಯಚೂರಿನ ಕನ್ನಡ ಭವನದಲ್ಲಿ ಮಂಗಳವಾರ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಖ್ಯಾತ ವೈದ್ಯ ಡಾ. ರವಿರಾಜೇಶ್ವರ ಅವರ ಉದ್ಘಾಟಿಸಿದರು.

ಅಧ್ಯಕ್ಷತೆವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಮಾತನಾಡಿ, ಇದುವರೆಗೆ ಆಗಿಹೋದ ಪರಿಷತ್ತಿನ ಅಧ್ಯಕ್ಷರುಗಳ ಬಗ್ಗೆ ಸಮ್ಮೇಳನಗಳನ್ನು ಮೆಲುಕಿಹಾಕಿದ ಅವರು ಕನ್ನಡ ಭಾಷೆಗೆ ಇರುವ ಶ್ರೀಮಂತಿಕೆ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಗಡಿನಾಡು ಕನ್ನಡ ಹೋರಾಟಗಾರ ಮಲ್ಲನಗೌಡ ಹಿಂದೂಪೂರ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ವತಿಯಿಂದ ನೀಡಲಾದ ಪ್ರಶಸ್ತಿ ಪುರಸ್ಕೃತರು, ಹೇಮರೆಡ್ಡಿ ಎಂ.ಚಿತ್ರ ಕಲಾವಿದರು ವರ್ಣ ಪ್ರಶಸ್ತಿ ಪುರಸ್ಕೃತರು, ಹಿರಿಯ ಸಾಹಿತಿಗಳಾದ ಲಕ್ಷ್ಮೀದೇವಿ ಶಾಸ್ತ್ರಿ ಅವರಿಗೆ ಪರಿಷತ್ತಿನ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷ ಬಾಪಸಲಿ, ಪ್ರಗತಿಪರ ಹೋರಾಟಗಾರ ಮಲ್ಲಪ್ಪ ಪಾಟೀಲ್, ಕಸಾಪ ತಾಲ್ಲೂಕು ಅಧ್ಯಕ್ಷ ಡಾ. ಬಿ. ವಿಜಯರಾಜೇಂದ್ರ ಹಾಗೂ ಮತ್ತಿತರರಿದ್ದರು. ಕನ್ನಡ ಹಾಡುಗಳನ್ನು ಪ್ರತಿಭಾ ಗೋನಾಳ್ ಹಾಗೂ ತಂಡದವರಿಂದ ಪ್ರಸ್ತುತಪಡಿಸಿದರು. ದಂಡಪ್ಪ ಬಿರಾದಾರ ಸ್ವಾಗತಿಸಿದರು. ರಾಮಣ್ಣ ಬೋಯರ್ ನಿರೂಪಿಸಿದರು. ರಾವುತ್‌ರಾವ್ ಬರೂರ ವಂದಿಸಿದರು.

ಬಿಎಸ್‌ವೈ ಅಭಿಮಾನೋತ್ಸವ ಸಮಾರಂಭ 9 ರಂದು

ಮಸ್ಕಿ: ಮಾಸ್ ಲೀಡರ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು 50 ವರ್ಷದ ನಿರಂತರ ರಾಜಕೀಯ ಜೀವನವನ್ನು ನಡೆಸಿರುವ ಹಿನ್ನೆಲೆಯಲ್ಲಿ ಮೇ.9ರಂದು ಚಿತ್ರದುರ್ಗದಲ್ಲಿ ಅಭಿಮಾನೋತ್ಸವ ಸಮಾರಂಭವನ್ನು ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರಿಂದ ಆಯೋಜಿಸಲಾಗಿದ್ದು, ಕ್ಷೇತ್ರದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರು, ಮಹಿಳೆಯರು, ಕಾರ್ಮಿಕರು ಸೇರಿದಂತೆ ರಾಜ್ಯ ಸಮಸ್ಯೆಗಳಿಗೆ ಧ್ವನಿಯಾಗಿ ಹೋರಾಟ ನಡೆಸಿರುವ ಬಿಎಸ್‌ವೈ ಅವರ ರಾಜಕೀಯ ಜೀವನ 50 ವರ್ಷ ಕಂಡಿದೆ. ಜನ ಸೇವೆಯಲ್ಲಿ 50 ವರ್ಷ ಪೂರೈಸಿದ ಬಿಎಸ್‌ವೈ ಅವರು ರಾಜ್ಯಕ್ಕೆ ಅನೇಕ ಕೊಡುಗೆ ನೀಡಿದ್ದಾರೆ. ಬಿ.ಎಸ್.ಯಡಿಯೂರಪ್ಪನವರನ್ನು ಅಭಿನಂದಿಸಲು ಅಭಿಮಾನಿಗಳಿಂದ ಆಯೋಜಿಸಿರುವ ಅಭಿಮಾನೋತ್ಸವ ಸಮಾರಂಭಕ್ಕೆ ಕೇಂದ್ರ ಹಾಗೂ ರಾಜ್ಯದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಮಾಸ್ ಲೀಡರ್, ಅವಿಶ್ರಾಂತ ಚೇತನ ಬಿಎಸ್‌ವೈ ಅವರ ಅಭಿನಂದನಾ ಸಮಾರಂಭಕ್ಕೆ ರಾಜ್ಯದ ಮೂಲೆ ಮೂಲೆಗಳಿಂದಲೂ ಲಕ್ಷಾಂತರ ಜನರು ಭಾಗವಹಿಸಲಿದ್ದಾರೆ. ಈ ಸಮಾರಂಭಕ್ಕೆ ಮಸ್ಕಿ ಕ್ಷೇತ್ರದಿಂದ ಎರಡು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಬಿಎಸ್‌ವೈ ಅವರ 50 ವರ್ಷದ ರಾಜಕಾರಣದ ಸಾರ್ಥಕ ಸೇವೆಯ ಅಂಗವಾಗಿ ಅಭಿಮಾನಿಗಳು ಮೇ.9ರಂದು ಚಿತ್ರದುರ್ಗದಲ್ಲಿ ಆಯೋಜಿಸಿರುವ ಅಭಿಮಾನೋತ್ಸವ ಸಮಾರಂಭಕ್ಕೆ ಕ್ಷೇತ್ರದ ಮತದಾರರು, ಬಿಎಸ್‌ವೈ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಮುಖಂಡರಾದ ಬಸವಂತರಾಯ ಕುರಿ, ಚಂದ್ರಕಾಂತ ಗುಗ್ಗೇಬಾಳ, ರಮೇಶ ಉದ್ಬಾಳ, ವೀರೇಶ ಬಳಿಗಾರ ಸೇರಿದಂತೆ ಇತರರಿದ್ದರು.



ಮಸ್ಕಿ ಪಟ್ಟಣದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಎಸ್‌ವೈ ಅಭಿಮಾನೋತ್ಸವ ಸಮಾರಂಭದ ಪೋಸ್ಟರ್‌ನ್ನು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಬಿಡುಗಡೆಗೊಳಿಸಿದರು. ಪುರಸಭೆ ಅಧ್ಯಕ್ಷ ಸುರೇಶ ಹರಸೂರು ಹಾಗೂ ಮುಖಂಡರು ಇದ್ದರು.

ಗೆಲುವು: ಕಾಂಗ್ರೆಸ್ ಮುಖಂಡರಿಂದ ಸಂಭ್ರಮಾಚರಣೆ

ಮಸ್ಕಿ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿದ್ದಂತೆ ಶಾಸಕ ಆರ್.ಬಸನಗೌಡ ತುರ್ವಿಹಾಳ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟಣದ ಹಳೇ ಬಸ್‌ನಿಲ್ದಾಣ ಹತ್ತಿರ ಸೋಮವಾರ ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಶಾಸಕ ಆರ್.ಬಸನಗೌಡ ತುರ್ವಿಹಾಳ, ಮುಖಂಡರಾದ ಬಸವನಗೌಡ ಪೋ.ಪಾಟೀಲ, ವೆಂಕಟರೆಡ್ಡಿ ಹಾಲಾಪೂರ, ವೀರೇಶ ಪಾಟೀಲ, ಶರಣಪ್ಪ ಎಲಿಗಾರ, ನಾಗಭೂಷಣ ಬಾರಿಕೇರ್, ಶಿವು ಬ್ಯಾಳಿ, ಕೃಷ್ಣ ಚಿಗರಿ, ನಿಸಾರ ಅಹ್ಮದ್, ಕಿರಣ ಮುರಾರಿ ಸೇರಿದಂತೆ ಇತರರಿದ್ದರು.

ಮಸ್ಕಿ ಪಟ್ಟಣದಲ್ಲಿ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದಕ್ಕೆ ಶಾಸಕ ಆರ್.ಬಸನಗೌಡ ತುರ್ವಿಹಾಳ, ಮುಖಂಡರು, ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಅಂತರಾಷ್ಟ್ರೀಯ ಕಾರ್ಮಿಕ ದಿನ : ಕಾನೂನು ಅರಿವು ನೆರವು

ಮಾನ್ವಿ: ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಕಾನೂನು ಸೇವಾ ಸಮಿತಿ ಮಾನ್ವಿ ಹಾಗೂ ತಾಲೂಕು ನ್ಯಾಯವಾದಿಗಳ ಸಂಘ ಮತ್ತು ಕಾರ್ಮಿಕ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಸಿವಿಲ್ ನ್ಯಾಯಧೀಶರಾದ ಆನಂದ ಹೆಚ್.ಕೊಣ್ಣೂರು ಉದ್ಘಾಟಿಸಿದರು.

ನಂತರ ಮಾತನಾಡಿ, ಶೋಷಿತ ವರ್ಗವಾಗಿರುವ ಕಾರ್ಮಿಕರು ದೇಶದ ಬೆನ್ನೆಲುಬಾಗಿರುವ ಕಾರ್ಮಿಕರಿಗೆ ಸಂವಿಧಾನದಲ್ಲಿ ಅನೇಕ ಹಕ್ಕುಗಳನ್ನು, ಗೌರವವನ್ನು ಕಾರ್ಮಿಕ ಕಾಯ್ದೆಯಡಿಯಲ್ಲಿ ನೀಡಲಾಗಿದೆ. ಸಮಾನ ಕೆಲಸಕ್ಕೆ ಸಮಾನವಾದ ವೇತನ, ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸುರಕ್ಷತೆ, ಕೆಲಸದ ನಿಗದಿತ ಸಮಯದ ಮಿತಿ ಸೇರಿದಂತೆ ಕಾರ್ಮಿಕರಿಗೆ ಅನೇಕ ಕಾಯ್ದೆಗಳನ್ನು ನೀಡಲಾಗಿದೆ. ಕಟ್ಟಡ ಕಾರ್ಮಿಕರಕಲ್ಯಾಣಕ್ಕಾಗಿ ಕಟ್ಟಡ ಕಾರ್ಮಿಕರ ಕಾಯ್ದೆಗಳಿದ್ದು, ಕಾರ್ಮಿಕರಿಗೆ ಬಹುಳಷ್ಟು ಅನುಕೂಲವಾಗುತ್ತಿದೆ. ಕಟ್ಟಡಕಾರ್ಮಿಕರ ಮಕ್ಕಳ ಮದುವೆ, ವಿದ್ಯಾಭ್ಯಾಸಕ್ಕೆ, ಹೆರಿಗೆ ಸೇರಿದಂತೆ ಕೆಲಸದ ಸ್ಥಳದಲ್ಲಿ ಅಪಘಾತ ಸಂದರ್ಭದಲ್ಲಿ ಸೌಲಭ್ಯ ಮತ್ತು ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ನೀಡಲಾಗಿದೆ. ಕಾರ್ಮಿಕರು ತಮಗೆ ಅನುಕೂಲವಾಗಿರುವ ಕಾನೂನುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಾಗ ಮಾತ್ರ ಅವುಗಳಿಂದ ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆರ್ಥಿಕವಾಗಿ ಹಿಂದುಳಿದಿರುವ ಕಾರ್ಮಿಕರುಉಚಿತ ಕಾನೂನು ನೆರವನ್ನುತಾಲೂಕು ಕಾನೂನು ಸೇವಾ ಸಮಿತಿಯ ಮೂಲಕ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ತಿಳಿಸಿದರು. ತಾಲೂಕು ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ ದೊರೆ ಮಾತನಾಡಿ, ದೈಹಿಕ, ಮಾನಸಿಕ, ಬೌದ್ಧಿಕವಾಗಿ ಶ್ರಮವಹಿಸಿ ದುಡಿಯುವ ಕಾರ್ಮಿಕರು ಶೇ 30 ರಷ್ಟು ಇದ್ದರೆ ಕಟ್ಟಡ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಅವುಗಳ ಸದುಪಯೋಗವನ್ನು ಕಾರ್ಮಿಕರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸಹಾಯಕ ಸರಕಾರಿ ಅಭಿಯೋಜಕರಾದ ಅರ್ಚನಾಯಾದವ್ ಮಾತನಾಡಿ, ಸ್ಥಳೀಯವಾಗಿರುವ ವಿವಿಧ ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಂಸ್ಥೆಯವರು ಕಡ್ಡಾಯವಾಗಿ ಆದೇಶ ಪತ್ರವನ್ನು ನೀಡಬೇಕು. ವಾರಕ್ಕೆ ಒಮ್ಮೆ ರಜೆ ನೀಡಬೇಕು. ಕನಿಷ್ಠ 15 ಸಾವಿರ ವೇತನ ನೀಡಬೇಕು. ಹಾಜರಾತಿ ಇಡಬೇಕು, 8 ತಾಸಿಗಿಂತ ಹೆಚ್ಚಿನ ಸಮಯ ಕೆಲಸವನ್ನು ಮಾಡಿದ್ದಲ್ಲಿ ಹೆಚ್ಚುವರಿ ವೇತನ ನೀಡಬೇಕು, ಮಹಿಳೆಯರಿಗೆ ಹೆರಿಗೆ ವೇತನ ಸಹಿತರಜೆ ನೀಡಬೇಕು, ಸುಧಾರಿತ ಸುರಕ್ಷಾ ಸಲಕರಣೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಾರ್ಮಿಕರಿಗೆ ನೀಡಬೇಕು. ಕಾರ್ಮಿಕ ಕಾಯ್ದೆಗಳನ್ನು ಉಲ್ಲಂಘಿಸುವ ಮಾಲಿಕರ ಮೇಲೆ ಕಾರ್ಮಿಕಕಾಯ್ದೆ ಅಡಿಯಲ್ಲಿ ಕಾರ್ಮಿಕ ಇಲಾಖೆಯ ನಿರೀಕ್ಷಕರು ಅಗತ್ಯ ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು. ತಾಲೂಕು ಪಂಚಾಯಿತಿ ಇ.ಓ. ಖಾಲಿದ್‌ಅಹ್ಮದ್, ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ, ತಾಲೂಕು ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷರಾದ ವಿಶ್ವನಾಥರಾಯಪ್ಪ, ಪ್ರ.ಕಾರ್ಯದರ್ಶಿ ಯಲ್ಲಪ್ಪ ಹಿರೆಬಾದರದಿನ್ನಿ, ಹಿರಿಯ ವಕೀಲರಾದ ಶ್ರೀದೇವಿ ಬಳಿಗಾರ, ಅಮೃತ ವಕೀಲರು ಹಾಗೂ ಕಾರ್ಮಿಕ ಮುಖಂಡರಾದ ಪರಶುರಾಮ ಬಾಗಲವಾಡ, ಎಂ.ಡಿ.ಜಾಫರ್, ತಾಯಪ್ಪ, ಆಂಜನೇಯ್ಯಕೋಟೆ, ವೆಂಕಣ್ಣ ಸೇರಿದಂತೆ ನೂರಾರು ಕಾರ್ಮಿಕರು ಭಾಗವಹಿಸಿದ್ದರು.

ನೀರು ಕೊರತೆ ಗ್ರಾಮಗಳಿಗೆ ಭೇಟಿ ನೀಡಿ

ರಾಯಚೂರು: ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಪರಿಸ್ಥಿತಿಯನ್ನು ಅವಲೋಕಿಸಲು ಜಿಲ್ಲೆಯ ಪ್ರತಿ ತಾಲೂಕಿಗೆ ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳ ಹಾಗೂ ಮುಂಬರುವ ದಿನಗಳಲ್ಲಿ ಸಮಸ್ಯೆ ಎದುರಿಸಬಹುದಾದ ಗ್ರಾಮಗಳ ವಿವರಗಳನ್ನು ಸಂಬಂಧಪಟ್ಟ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು, ಸದರಿ ತಮ್ಮ ತಮ್ಮ ತಾಲೂಕುಗಳ ಎಲ್ಲ ಸಮಸ್ಯಾತ್ಮಕ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕು ಎಂದು ಜಿಲ್ಲಾಧಿಕಾರಿ ನಿತೀಶ್ ಕೆ.ಅವರು ಸೂಚಿಸಿದ್ದಾರೆ. ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಿ,ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೂ ನೋಡಲ್ ಅಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಜಿ.ಪಿ.ಎಸ್ ಭಾವಚಿತ್ರದೊಂದಿಗೆ ತೆಗೆದುಕೊಂಡ ಫೋಟೋಗಳೊಂದಿಗೆ ತಾವು ತೆಗೆದುಕೊಂಡ ಕ್ರಮಗಳ ಕುರಿತು ವರದಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಹೆಂಡ ಮಾರಾಟ ಆರೋಪ: ಗಡಿಪಾರಿಗೆ ಆದೇಶ

ರಾಯಚೂರು: ಉಪ ವಿಭಾಗದ ವ್ಯಾಪ್ತಿಯಲ್ಲಿ ಸಿ.ಹೆಚ್. ಕಲಬೆರಿಕೆ ಹೆಂಡ ಮಾರಾಟದಲ್ಲಿ ಭಾಗಿಯಾಗ ರೂಢಿಗತ ಆರೋಪಿಗಳಾದ ವಾಹೀದ್ ತಂದೆ ಬರ್ಷಿದ್ (56) ಹಾಗೂ ಹುಸೇನಿ ತಂದೆ ಮಾರೆಪ್ಪ (32)ಅವರನ್ನು ಕರ್ನಾಟಕ ಪೊಲೀಸ್ ಕಾಯ್ದೆ ಅಡಿಯಲ್ಲಿ ರಾಯಚೂರು ಉಪ ವಿಭಾಗೀಯ ದಂಡಾಧಿಕಾರಿ ಡಾ.ಹಂಪಣ್ಣ ಸಜ್ಜನ್ ಅವರು ಸೋಮವಾರ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ. ಆರೋಪಿಗಳು ಬೀದರ್ ಜಿಲ್ಲೆಯ ಔರಾದ (ಬಿ) ತಾಲೂಕಿನ ಸಂತಪೂರು ಪೊಲೀಸ್ ಠಾಣೆಯ ವ್ಯಾಪ್ತಿಗೆ ಹಾಗೂ ಬೀದರ್ ಜಿಲ್ಲೆಯ ಔರಾದ (ಬಿ) ತಾಲೂಕಿನ ಚಿಂತಕಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಮೂರು ತಿಂಗಳು ಬೀದರ್ ಜಿಲ್ಲೆಗೆ ಗಡಿಪಾರು ಮಾಡಿಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನ ದಿನಾಚರಣೆ

ಸರಕಾರಿ ಶಾಲೆಗಳು ಕನ್ನಡ ಮಾತೃಭಾಷೆ ಉಳಿಸಿವೆ

ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದವತಿಯಿಂದ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನ ದಿನಾಚರಣೆಯನ್ನುಡಾ. ಅಂಬಿಕಾ ಮಧುಸೂಧನ್ ಕನ್ನಡಾಂಬೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿ, ರಾಜ್ಯದಲ್ಲಿಕನ್ನಡ ಸಾಹಿತ್ಯ ಪರೀಷತ್ ಕನ್ನಡ ಭಾಷೆ, ಪರಂಪರೆ, ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಬಹುದೊಡ್ಡ ಕೊಡುಗೆಯನ್ನು ನೀಡುತ್ತಿದೆ. ನಾಡಿನ ಅನೇಕ ಲೇಖಕರಿಗೆ, ಸಾಹಿತಿಗಳಿಗೆ ಉತ್ತಮ ಅವಕಾಶವನ್ನು ನೀಡುವ ಮೂಲಕ ನಮ್ಮ ನಾಡಿನ ಸಾಹಿತ್ಯ ಪರಂಪರೆಯನ್ನು ಬೆಳೆಸುತ್ತಿದೆ. ಗ್ರಾಮೀಣ ಭಾಗದತಾಯಂದಿರಲ್ಲಿ ಮೌಖಿ–ಕ ವಾಗಿ ಉಳಿದಿರುವ ಜನಪದ ಸಾಹಿತ್ಯವನ್ನು ನಮ್ಮ ಮಕ್ಕಳಲ್ಲಿ ಆದರ್ಶ ಗುಣಉತ್ತಮ ಮೌಲ್ಯಗಳನ್ನು ಬೆಳೆಸುತ್ತಿವೆ. ನಮ್ಮ ಮಕ್ಕಳು ಅಮ್ಮ ಎಂದು ಕರೆದಾಗ ಸಿಗುವ ಸಂತೋಷ ಮಮ್ಮಿ ಎಂದು ಕರೆದಾಗ ದೊರೆಯುವುದಿಲ್ಲ. ಸರಕಾರಿ ಶಾಲೆಗಳು ಕನ್ನಡ ಮಾತೃಭಾಷೆಯನ್ನು ಉಳಿಸುವ ಬಹುದೊಡ್ಡ ಕಾರ್ಯವನ್ನು ಮಾಡುತ್ತಿದ್ದು, ಸರಕಾರಿ ಶಾಲೆಗಳಲ್ಲಿ ಕಸಾಪ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ನಮ್ಮ ಸಾಹಿತ್ಯ ಹಾಗೂ ಸಾಹಿತಿಗಳ ಪರಿಚಯವನ್ನು ಶಾಲಾ ಮಕ್ಕಳಿಗೆ ಮಾಡಿಸಬೇಕಾಗಿದೆ ಇಂದಿನ ಅಧುನಿಕಯುಗದಲ್ಲಿ ಕನ್ನಡ ಭಾಷೆಯ ಡಿಜಟಲೀಕರಣ ಮಾಡುವುದರಿಂದ ಮಕ್ಕಳಿಗೆ ಶಿಶು ಸಾಹಿತ್ಯ ಬೇಗನೆ ತಲುಪುವುದಕ್ಕೆ ಸಾಧ್ಯವಾಗುತ್ತದೆ– ಎಂದು ತಿಳಿಸಿದರು. ಹಿರಿಯ ವರದಿಗಾರರಾದ ಬಸವರಾಜ ಭೋಗವತಿ ಉಪನ್ಯಾಸ ನೀಡಿ, ಸಮಾಜದಲ್ಲಿ ಸಾಹಿತಿಗಳಿಗೆ ಬರಹಗಾರ–ರಿಗೆ, ಲೇಖಕರಿಗೆ ಮಹತ್ವದ ಸ್ಥಾನವನ್ನು, ಸಮಾಜಿಕ ಬದ್ಧತೆಯನ್ನು, ಜವಾಬ್ದಾರಿಯನ್ನು ನೀಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್‌ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಕನ್ನಡಜಾತ್ರೆಯನ್ನು ಮಾಡುತ್ತಿದೆ. ನಲ್ವಾಡಿಕೃಷ್ಣರಾಜಒಡೆಯರ್‌ಅವರುಕನ್ನಡ ಸಾಹಿತ್ಯ ಪರೀಷತ್ ಸ್ಥಾಪನೆಗೆ ಬಹುದೊಡ್ಡಕೊಡುಗೆಯನ್ನು ನೀಡಿದ್ದಾರೆ. ದಾಸ 'ಸಾಹಿತ್ಯದತವರೂರಾದರಾಯಚೂರುಜಿಲ್ಲೆಯಲ್ಲಿ 70 ರದಶಕದಲ್ಲಿಕನ್ನಡ ಸಾಹಿತ್ಯದ ಬೆಳವಣಿಗೆಗೆ ಶಾಂತರಸರು, ಚನ್ನಬಸಪ್ಪ ಬೆಟ್ಟದೂರು, ಭದ್ರವಾದ ಬುನಾದಿಯನ್ನು ಹಾಕಿದ್ದಾರೆ. ನಂತರದಲ್ಲಿರಾಜಶೇಖರ ನೀರಮಾನ್ವಿ, ಅಮರೇಶ ನುಗಡೋಣಿ, ಚಿದಾನಂದ ಸಾಲಿ, ಶಿವರಾಜ ಬೆಟ್ಟದೂರು, ಆರೀಫ್‌ರಾಜ, ಹನುಮಂತಸಂಗೋಳ್ಳಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಗಡಿಭಾಗದಕನ್ನಡ ಶಾಲೆಗಳ ಸುಧಾರಣೆ, ತಾಲೂಕಿನಲ್ಲಿಕಥೆಕಾವ್ಯ ಕಮ್ಮಟಗಳ ಆಯೋಜನೆ, ದತ್ತಿ ಉಪನ್ಯಾಸಗಳ ಜೊತೆಯಾಗಿಆಯೋಜಿಸಬೇಕಾಗಿದೆ. ಕಸಾಪ ಕನ್ನಡ ಸಾಹಿತ್ಯ ಪರಿಷತ್‌ಕನ್ನಡಪರ ಚಟುವಟಿ–ಕೆಗಳ ಜೊತೆಯಾಗಿಜನಪರ ಹೋರಾಟಗಳಲ್ಲಿ ಕೂಡ ಭಾಗಿಯಾಗಬೇಕಾಗಿದೆ. ಪಟ್ಟಣದ ವಿವಿಧರಸ್ತೆ, ವೃತ್ತಗಳಿಗೆ, ಗ್ರಂಥಾಲಯಗಳಿಗೆ, ಕನ್ನಡ ಸಾಹಿತಿಗಳ ಹೆಸರುಗಳನ್ನು ಇಡಬೇಕು ಹಾಗೂ ಯುವ ಸಾಹಿತಿಗಳ ಪುಸ್ತಕಗಳನ್ನು ಗ್ರಂಥಾಲಯಗಳು ಖರೀದಿ ಮಾಡುವುದಕ್ಕೆ ಸಾಹಯಧನ ನೀಡಬೇಕುಎಂದು ತಿಳಿಸಿದರು.

ಈಲ್ಲಾ ಕಸಾಪ ಗೌ.ಕಾರ್ಯದರ್ಶಿ ತಾಯಪ್ಪ ಬಿ ಹೊಸೂರು ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ನಾಡಿನಲ್ಲಿ ಕಳೆದ 112 ವರ್ಷಗಳಿಂದ ಕನ್ನಡ, ನಾಡು, ನುಡಿ, ಭಾಷೆಗಾಗಿ, ನೆಲ, ಜಲಗಳಿಗೆ ಧಕ್ಕೆಯಾದಾಗ ಹೋರಾಟ ಮಾಡುತ್ತ ಬಂದಿದೆ. ಕಸಾಪ ಕೇವಲ ಸಾಹಿತಿಗಳಿಗೆ ಮಾತ್ರ ಸಿಮೀತವಾಗದೆ ನವಸಾಹಿತಿಗಳಿಗೂ ಕೂಡ ಪ್ರೋತ್ಸಾಹವನ್ನು ನೀಡುವಕಾರ್ಯವನ್ನು ಮಾಡುತ್ತಬಂದಿದೆಎಂದು ತಿಳಿಸಿದರು.

ತಾ.ಕನ್ನಡ ಸಾಹಿತ್ಯ ಪರೀಷತ್‌ಅಧ್ಯಕ್ಷರಾದ ಶರಣಬಸವ ನೀರಮಾನ್ವಿತಾಲೂಕುಕನ್ನಡ ಸಾಹಿತ್ಯ ಪರೀಷತ್ ಚಟುವಟಿಕೆಗಳ ಬಗ್ಗೆ ಮಾತನಾಡಿದರು. ಹತ್ತನೆ ತರಗತಿಯಲ್ಲಿ ಕನ್ನಡ ವಿಷಯದಲ್ಲಿ 125 ಅಂಕಗಳನ್ನು ಪಡೆದತಾಲೂಕಿನ 32 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಸಾಪ ಹೋಬಳಿ ಘಟಕದಅಧ್ಯಕ್ಷರಾದ ಹನುಮಂತಪ್ಪಕೋಟ್ನೆಕಲ್, ಬಿ.ವಿ.ರೆಡ್ಡಿ, ಡಾ.ಸೈಯಾದ್ ಮುಜೀಬ್‌ಅಹ್ಮದ್, ನಾಗರತ್ನ ಪಾಟೀಲ್ , ಕಕಾನಿಪ ಸಂಘದತಾ.ಅಧ್ಯಕ್ಷ ಅಶೋಕ ತಡಕಲ್, ಗೋವಿಂದರಾಜ್ ವಕೀಲರು, ಮಂಜುನಾಥಕಮತರ್, ಚನ್ನಬಸವರಾಜ ಮಾಡಗಿರಿ, ರಾಮುಹೋಳೆಯಪ್ಪ, ಲಕ್ಷ್ಮಣಜಾನೇಕಲ್, ಬಾಲಜಿ ಸಿಂಗ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

केनरा बैंक Canara Bank
भारत सरकार का उपक्रम
A Government of India Undertaking
सिंडिकेट सिंडिकेट Syndicate

ಕೆನರಾ ಬ್ಯಾಂಕ್
ವಿಶೇಷ ಆಸ್ತಿ ಮರುಪಡೆಯುವಿಕೆ ನಿರ್ವಹಣೆ (ಎ.ಆರ್.ಎಂ) ಶಾಖೆ –ವಿಜಯಪುರ
ಸಂಪರ್ಕ ಸಂಖ್ಯೆ:916366975034

ಇ–ಹರಾಜು
ದಿ.25.05.2026

ಸರ್ಫೆಸಿ ಕಾಯ್ದೆಯ 2002ರ ಅಡಿಯಲ್ಲಿ ಅಡಮಾನ ಮಾಡಿರುವ ಆಸ್ತಿಯ ಮಾರಾಟ ಕೆಳಸಹಿದಾರರು, ಕೆನರಾ ಬ್ಯಾಂಕ್ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಪ್ರಕರಣ 8 (6)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಗೆ ಸೂಚಿಸಿರುವ ಅನುಸೂಚಿತ ಆಸ್ತಿಯನ್ನು ಕೆನರಾ ಬ್ಯಾಂಕ್ ವಿಶೇಷ ಆಸ್ತಿ ಮರುಪಡೆಯುವಿಕೆ ನಿರ್ವಹಣೆ ಶಾಖೆ–ವಿಜಯಪುರ ಸ್ವಾಧೀನಕ್ಕೆ ತೆಗೆದುಕೊಂಡು, ಕೆಳಗೆ ಉಲ್ಲೇಖಿಸಲಾದ ಸಾಲಗಾರರು, ಇವರಿಂದ ಮುಂದಿನ ಬಡ್ಡಿ, ಖರ್ಚು, ವೆಚ್ಚ ಇನ್ನಿತರೆ ವಸೂಲಿ ಮಾಡಲು "ಎಲ್ಲಿ ಇದೆಯೋ ಅಲ್ಲಿ", "ಎಲ್ಲಿ ಹೇಗಿದೆಯೊ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಆಧಾರದ ಮೇಲೆ ಅಡಮಾನವಿಟ್ಟ ಆಸ್ತಿಯನ್ನು ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಕ್ರ ಸಂ.	ಸಾಲಗಾರರು/ ಜಾಮೀನುದಾರರ: ಹೆಸರು	ಸ್ಥಿರಾಸ್ತಿಯ ವಿವರಣೆ	ಬರಬೇಕಾದ ಬಾಕಿ ಒಟ್ಟು ಮೊತ್ತ/ +ಮುಂದಿನ ಬಡ್ಡಿ, ಖರ್ಚು, ವೆಚ್ಚ ಕಾಯ್ದಿರಿಸಿದ ಮೊತ್ತ/ಇ.ಎಂ.ಡಿ ಮೊತ್ತ
	ಗಂಗಾವತಿ ಶಾಖೆ (0547)		
1	1.ಶ್ರೀ ಎನ್ ಶ್ರೀನಿವಾಸ್ ತಂದೆ ಶ್ರೀ ಎನ್ ವೀರರಾಜು (ಸಾಲಗಾರರು), ವಾರ್ಡ ನಂ.2, ಶ್ರೀರಾಮನಗರ, ತಾ॥ಗಂಗಾವತಿ, ಜಿ॥ಕೊಪ್ಪಳ–583227 2.ಶ್ರೀಮತಿ ನೆಕ್ಕಂಟಿ ಜಯಲಕ್ಷ್ಮಿ ಕೋಂ. ಶ್ರೀ ಎನ್ ಶ್ರೀನಿವಾಸ (ಸಹ–ಸಾಲಗಾರರು) ವಾರ್ಡ ನಂ.2, ಶ್ರೀರಾಮನಗರ, ತಾ॥ಗಂಗಾವತಿ, ಜಿ॥ಕೊಪ್ಪಳ–583227	ಕರ್ನಾಟಕ–583227, ಜಿ॥ಕೊಪ್ಪಳ, ತಾ॥ಗಂಗಾವತಿ, ಗಂಗಾವತಿ ಪಟ್ಟಣ, ಸಿದ್ದಿಕೇರಿ ರಸ್ತೆ, ವಾರ್ಡ ನಂ.3, ವಸತಿ ಆಸ್ತಿ ಭೂಮಿ ಮತ್ತು ಕಟ್ಟಡ, ಪ್ಲಾಟ್ ನಂ.12, ಪುರಸಭೆ ನಂ.1–5–169/ಎ/12 ಕೃಷಿಯೇತರ ಭೂಮಿ ಸರ್ವೆ ನಂ.279/ಬಿ, ವಿಸ್ತೀರ್ಣ ಪೂರ್ವ–ಪಶ್ಚಿಮ:40 ಅಡಿ, ಉತ್ತರ– ದಕ್ಷಿಣ:30ಅಡಿ=1200 ಚ ಅಡಿ, ಆಸ್ತಿ ಮಾಲೀಕರು:ಶ್ರೀ ಎನ್ ಶ್ರೀನಿವಾಸ್ ತಂದೆ ಶ್ರೀ ಎನ್ ವೀರರಾಜು (ಆಸ್ತಿಯನ್ನು ಪ್ರಧಾನ ಭದ್ರತೆಯಾಗಿ ವಸತಿ ಸಾಲಕ್ಕೆ ನೀಡಲಾಗಿದೆ) ಚಕಬಂದಿ: ಪೂರ್ವ:9 ಮೀ ರಸ್ತೆ, ಪಶ್ಚಿಮ:ಬೆಟ್ಟಪ್ಪ ಅವರ ಪ್ಲಾಟ್, ಉತ್ತರ: ಪ್ಲಾಟ್ ನಂ.13, ದಕ್ಷಿಣ:ಪ್ಲಾಟ್ ನಂ.11.	ಒಟ್ಟು ಬಾಕಿ ಮೊತ್ತ: ರೂ. 12,61,503.92 ದಿನಾಂಕ: 04.05.2026 ರಂತೆ ಕಾಯ್ದಿರಿಸಿದ ಮೊತ್ತ: ರೂ. 28,00,000/- ಇ.ಎಂ.ಡಿ. ಮೊತ್ತ: :ರೂ. 2,80,000/- CERSAI ID-400010295753

ಇ–ಹರಾಜು ದಿನಾಂಕ ಮತ್ತು ಸಮಯ:25/05/2026, 11.30 a.m. ರಿಂದ 1.30 p.m. (ಮಾರಾಟ ಮುಕ್ತಾಯದವರೆಗೆ 5 ನಿಮಿಷಗಳ ಅವಧಿಯ ಅನಿಯಮಿತ ವಿಸ್ತರಣೆಯೊಂದಿಗೆ)

a. ಆಸ್ತಿಯನ್ನು "ಇರುವಂತೆಯೇ" ಸ್ಥಿತಿಯಲ್ಲಿ ಮಾರಾಟ ಮಾಡಲಾಗುತ್ತದೆ, ಯಾವುದಾದರೂ ಋಣಭಾರಗಳಿದ್ದರೆ ಸೇರಿದಂತೆ. (ಬ್ಯಾಂಕಿಗೆ ತಿಳಿದಿರುವಂತೆ ಯಾವುದೇ ಋಣಭಾರಗಳಿಲ್ಲ. ಋಣಭಾರದ ವಿವರಗಳಿಗಾಗಿ, ಕೆಳಗಿನ 9(e) ರಲ್ಲಿ ಉಲ್ಲೇಖಿಸಲಾದ ಅರ್ನೆಸ್ಟ್ ಮನಿ ಠೇವಣಿ (EMD) ಠೇವಣಿ ಮಾಡುವ ಮೊದಲು ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಿ).

b. ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ.

c. 11.05.2026ರಿಂದ 22.05.2026ರ ನಡುವಿನ 10.00 A.Mರಿಂದ 04.00 P.M ಸಮಯದೊಳಗೆ ಬ್ಯಾಂಕಿನ ಕೆಲಸದ ದಿನಗಳಲ್ಲಿ ಆಸ್ತಿಯನ್ನು ಪರಿಶೀಲಿಸಬಹುದು.

d. ಉದ್ದೇಶಿತ ಬಿಡ್ದಾರರು https://baanknet.com/ ವೆಬ್‌ಸೈಟ್‌ಗೆ ಭೇಟಿ ನೀಡಿ ಇ–ಹರಾಜು ವೇದಿಕೆಯಲ್ಲಿ ನೋಂದಾಯಿಸಿಕೊಳ್ಳುವಂತೆ ಮತ್ತು ಪ್ಯಾನ್ ಕಾರ್ಡ್ ಮತ್ತು ಆಧಾರ್‌ನಂತಹ ಮಾನ್ಯ ಕೆವೈಸಿ ದಾಖಲೆಗಳನ್ನು ಇತ್ತೀಚಿನ ಮೊಬೈಲ್ ಸಂಖ್ಯೆಯೊಂದಿಗೆ ಲಿಂಕ್ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವಂತೆ ಮತ್ತು ಡಿಜಿ ಲಾಕರ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಸೂಚಿಸಲಾಗಿದೆ. ಮೇಲಿನ ಇ–ಹರಾಜಿನಲ್ಲಿ Baanknet.com ಪೋರ್ಟಲ್ (ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈ. ಲಿಮಿಟೆಡ್) ನಿಂದ ಬಿಡ್ಡಿಂಗ್‌ಗಾಗಿ, ನೀವು ಬ್ಯಾಂಕ್‌ನೆಟ್‌ನ ಸಹಾಯವಾಣಿಯನ್ನು ಸಂಪರ್ಕಿಸಬಹುದು (ಸಂಪರ್ಕ ಸಂ.8291220220), ಇಮೇಲ್: support.BAANKNET@psballiance.com.

e. ಉದ್ದೇಶಿತ ಬಿಡ್ದಾರರು 22.05.2026 ರಂದು ಅಥವಾ ಅದಕ್ಕೂ ಮೊದಲು 5.00 PM ಕ್ಕೆ DD/RTGS/NEFT ಮೂಲಕ ಕೆನರಾ ಬ್ಯಾಂಕ್‌ನ ಅಧಿಕೃತ ಅಧಿಕಾರಿ ಶಾಖೆಗಳ ಮೂಲಕ ಮೀಸಲು ಬೆಲೆಯ 10% ರೂಪಾಯಿಗಳ ಅರ್ನೆಸ್ಟ್ ಮನಿ ಠೇವಣಿ (EMD)ಠೇವಣಿ ಇಡಬೇಕು. ಯಶಸ್ವಿ ಬಿಡ್ಡರ್ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಆದರೆ ಸುರಕ್ಷಿತ ಸಾಲದಾತರು ದೃಢೀಕರಿಸಿದರೆ ಮಾತ್ರ.

f. ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು "ಇನ್‌ಕ್ರಿಮೆಂಟ್ ಕಾಂಬೊ" (ಕನಿಷ್ಠ 1 ಆಯ್ಕೆಮಾಡಿ) ಕಾಲಂ ಅಡಿಯಲ್ಲಿ ಉಲ್ಲೇಖಿಸಲಾದ ಕ್ರ ರೂ.25,000/- (ಹೆಚ್ಚಳ ಮೊತ್ತ/ಬೆಲೆ) ದ ಗುಣಕಗಳಲ್ಲಿ ಸುಧಾರಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ಸಮಯದಲ್ಲಿ (ಮೀಸಲು ಬೆಲೆಗಿಂತ ಹೆಚ್ಚಿನ) ಅತ್ಯಧಿಕ ಬಿಡ್ ಸಲ್ಲಿಸಿದ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ನಿರ್ದಿಷ್ಟ ಆಸ್ತಿಯ ಮೇಲೆ ಇಎಂಡಿ ಸಲ್ಲಿಸಿದ ಒಬ್ಬ ಬಿಡ್ಡರ್ ಮಾತ್ರ ಇದ್ದರೂ ಸಹ, ಯಶಸ್ವಿ ಎಚ್–1 ಬಿಡ್ಡರ್ ಆಗಲು ಹೇಳಲಾದ ಬಿಡ್ಡರ್ ಮೀಸಲು ಬೆಲೆಗಿಂತ ಕನಿಷ್ಠ ಒಂದು ಇಂಕ್ರಿಮೆಂಟ್ ಅನ್ನು ಬಿಡ್ ಮಾಡಬೇಕು. ಇ–ಹರಾಜು ಪ್ರಕ್ರಿಯೆಯ ಮುಕ್ತಾಯದ ಸಮಯದಲ್ಲಿ ಅತ್ಯಧಿಕ ಬಿಡ್ ಸಲ್ಲಿಸಿದ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ ಮತ್ತು ಆ ಕುರಿತು ಸಂವಹನವನ್ನು ನೀಡಲಾಗುತ್ತದೆ, ಅದು ಅಧಿಕೃತ ಅಧಿಕಾರಿ/ಸೆಕ್ಯೂರ್ಡ್ ಕ್ರೆಡಿಟ್‌ದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.

g. ಪ್ರತಿ ವಿಸ್ತರಣೆಯ ಸಮಯದಲ್ಲಿ ಹೆಚ್ಚುತ್ತಿರುವ ಮೊತ್ತ/ಬೆಲೆ ರೂ.25,000/- (ಹೆಚ್ಚುತ್ತಿರುವ ಬೆಲೆ) ಆಗಿರುತ್ತದೆ ಮತ್ತು ಕೊನೆಯ ನಿಮಿಷಗಳಲ್ಲಿ ಮಾನ್ಯ ಬಿಡ್ ಸ್ವೀಕರಿಸಿದಾಗ ಸಮಯವನ್ನು 5 (ನಿಮಿಷಗಳಿಗೆ) ವಿಸ್ತರಿಸಲಾಗುತ್ತದೆ.

h. ಯಶಸ್ವಿ ಬಿಡ್ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಆದರೆ ಸುರಕ್ಷಿತ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

i. ಯಶಸ್ವಿ ಬಿಡ್ದಾರರು ಮಾರಾಟ ಬೆಲೆಯ 25% (ಈಗಾಗಲೇ ಪಾವತಿಸಿದ ಇಎಂಡಿ ಸೇರಿದಂತೆ) ವನ್ನು ಅದೇ ದಿನ ತಕ್ಷಣವೇ ಮತ್ತು ಮುಂದಿನ ಕೆಲಸದ ದಿನದ ನಂತರ ಠೇವಣಿ ಇಡಬೇಕು ಮತ್ತು ಉಳಿದ 75% ಮೊತ್ತವನ್ನು ಸುರಕ್ಷಿತ ಸಾಲಗಾರರು ಮಾರಾಟವನ್ನು ದೃಢೀಕರಿಸಿದ ದಿನಾಂಕದಿಂದ 15 ದಿನಗಳ ಒಳಗೆ ಠೇವಣಿ ಇಡಬೇಕು. ಯಶಸ್ವಿ ಬಿಡ್ದಾರರು ಮೇಲೆ ತಿಳಿಸಿದ ಅವಧಿಯೊಳಗೆ ಮಾರಾಟ ಬೆಲೆಯನ್ನು ಪಾವತಿಸಲು ವಿಫಲವಾದರೆ, ಅವರು ಮಾಡಿದ ಠೇವಣಿಯನ್ನು ಅಧಿಕೃತ ಅಧಿಕಾರಿ ಯಾವುದೇ ಸೂಚನೆ ಇಲ್ಲದೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಮತ್ತು ಆಸ್ತಿಯನ್ನು ತಕ್ಷಣವೇ ಮತ್ತೆ ಮಾರಾಟಕ್ಕೆ ಇಡಲಾಗುತ್ತದೆ.

j. ಮೇಲೆ ತಿಳಿಸಿದ ಬಾಕಿ ಮಾರಾಟ ಬೆಲೆಯನ್ನು (ಇಎಂಡಿ ಮೊತ್ತವನ್ನು ಹೊರತುಪಡಿಸಿ) ಯಶಸ್ವಿ ಬಿಡ್ದಾರರು ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಕೆನರಾ ಬ್ಯಾಂಕ್, ವಿಶೇಷ ARM ಶಾಖೆ ವಿಜಯಪುರ (7910), ಐಎಫ್‌ಎಸ್‌ಸಿ ಕೋಡ್ CNRB0007910 ನ ಖಾತೆ ಸಂಖ್ಯೆ 209272434 ಗೆ ಪಾವತಿಸಬೇಕು.

k. ಅನ್ವಯವಾಗುವ ಸಾಗಣೆ ಶುಲ್ಕ, ಮುದ್ರಾಂಕ ಶುಲ್ಕ ಮತ್ತು ನೋಂದಣಿ, ಜಿಎಸ್‌ಟಿ ಇತ್ಯಾದಿಗಳನ್ನು ಯಶಸ್ವಿ ಬಿಡ್ದಾರರು ಮಾತ್ರ ಭರಿಸುತ್ತಾರೆ.

l. ರೂ. 50.00 ಲಕ್ಷ (ಐವತ್ತು ಲಕ್ಷ ರೂಪಾಯಿ) ಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕೆ, ಮಾರಾಟ ಮೊತ್ತದ 1% ದರದಲ್ಲಿ ಟಿಡಿಎಸ್ ಪಾವತಿಸಬೇಕಾಗುತ್ತದೆ, ಇದನ್ನು ಯಶಸ್ವಿ ಖರೀದಿದಾರರು ಪ್ರತ್ಯೇಕವಾಗಿ ಪಾವತಿಸಬೇಕು. ಜಿಎಸ್‌ಟಿ ಅನ್ವಯವಾಗುವಲ್ಲೆಲ್ಲಾ, ಸರ್ಕಾರಿ ಮಾರ್ಗಸೂಚಿಗಳ ಪ್ರಕಾರ ಯಶಸ್ವಿ ಖರೀದಿದಾರರು ಅದನ್ನು ಪಾವತಿಸಬೇಕು.

m. ಅಧಿಕೃತ ಅಧಿಕಾರಿಯ ಅತ್ಯುತ್ತಮ ಜ್ಞಾನ ಮತ್ತು ಮಾಹಿತಿಯ ಪ್ರಕಾರ, ಭದ್ರತಾ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಆಸ್ತಿಯ ಮೇಲೆ ಯಾವುದೇ ಹೊರೆ ಇರುವುದಿಲ್ಲ. ಆದಾಗ್ಯೂ, ಉದ್ದೇಶಿತ ಬಿಡ್ಡರ್‌ಗಳು ತಮ್ಮ ಬಿಡ್ ಅನ್ನು ಸಲ್ಲಿಸುವ ಮೊದಲು, ಹರಾಜಿನಲ್ಲಿ ಇಡಲಾದ ಆಸ್ತಿಯ ಶೀರ್ಷಿಕೆ ಮತ್ತು ಆಸ್ತಿಯ ಮೇಲೆ ಪರಿಣಾಮ ಬೀರುವ ಹಕ್ಕುಗಳು / ಹಕ್ಕುಗಳು / ಬಾಕಿಗಳ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆಗಳನ್ನು / ಶ್ರದ್ಧೆಯನ್ನು ಮಾಡಿಕೊಳ್ಳಬೇಕು. ಇ–ಹರಾಜು ಜಾಹೀರಾತು ಬ್ಯಾಂಕಿನ ಯಾವುದೇ ಬದ್ಧತೆ ಅಥವಾ ಪ್ರಾತಿನಿಧ್ಯವನ್ನು ರೂಪಿಸುವುದಿಲ್ಲ ಮತ್ತು ರೂಪಿಸುತ್ತದೆ ಎಂದು ಪರಿಗಣಿಸಲಾಗುವುದಿಲ್ಲ. ಬ್ಯಾಂಕಿಗೆ ತಿಳಿದಿರುವ ಅಥವಾ ತಿಳಿದಿಲ್ಲದ ಎಲ್ಲಾ ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಹೊರೆಗಳೊಂದಿಗೆ ಆಸ್ತಿಯನ್ನು ಮಾರಾಟ ಮಾಡಲಾಗುತ್ತಿದೆ. ಯಾವುದೇ ಮೂರನೇ ವ್ಯಕ್ತಿಯ ಹಕ್ಕುಗಳು / ಹಕ್ಕುಗಳು / ಬಾಕಿಗಳಿಗೆ ಅಧಿಕೃತ ಅಧಿಕಾರಿ / ಸುರಕ್ಷಿತ ಸಾಲಗಾರರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

n. ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಸೂಕ್ತ ಶ್ರದ್ಧೆ ಮತ್ತು ಭೌತಿಕ ಪರಿಶೀಲನೆ ಮತ್ತು ಆಸ್ತಿ/ಅವುಗಳ ನಿರ್ದಿಷ್ಟತೆಯ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳುವುದು ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

o. ಯಾವುದೇ ಕಾರಣ ನೀಡದೆ ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದುಗೊಳಿಸುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿದ್ದಾರೆ.

p. ಹೆಚ್ಚಿನ ವಿವರಗಳಿಗಾಗಿ ಶ್ರೀ ಕೆ ವಿ ಎನ್ ಶ್ರೀ ರಾಮಚಂದ್ರ ಮೂರ್ತಿ ಕೆನರಾ ಬ್ಯಾಂಕ್, ವಿಶೇಷ ARM ಶಾಖೆ ವಿಜಯಪುರ (7910)ಮೊಬೈಲ್ ಸಂ.916366975034, email: cb7910@canarabank.com ಅವರನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸೇವಾ ಪೂರೈಕೆದಾರ ಬ್ಯಾಂಕ್ನೆಟ್ (ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈ. ಲಿಮಿಟೆಡ್), (ಸಂಪರ್ಕ ಸಂಖ್ಯೆ 8291220220, ಇಮೇಲ್: support.BAANKNET@psballiance.com./ support.BAANKNET@procure247.com).

ದಿನಾಂಕ04.05.2026
ಸ್ಥಳ:ವಿಜಯಪುರ

ಸಹಿ/– ಅಧಿಕೃತ ಅಧಿಕಾರಿಗಳು,
ಕೆನರಾ ಬ್ಯಾಂಕ್

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ-ಬೆಂಗಳೂರು-ಕಲಬುರಗಿ

ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ

: ನೂತನ ವಿಳಾಸ :

ನಂ. 1-94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ – 585 102

ಮೊ: 9449985695-9481000249

ಕೋಟಿಗಟ್ಟಲೆ ಖರ್ಚಾದರೂ ಹೊಲಗಳು ಬರಡು

ಭೀಮಾ ಮಿಷನ್ ಅಧ್ಯಯನ ತಂಡದ 2 ತಿಂಗಳ ಪಾದಯಾತ್ರೆಯ ಆಘಾತಕಾರಿ ವರದಿ | ಶೀಘ್ರವೇ ಸರ್ಕಾರಕ್ಕೆ ಮಂಡನೆ

ಸಂ.ಕ. ಸಮಾಚಾರ ಆಳಂದ: ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೋಟ್ಯಂತರ ರೂ. ವ್ಯಯಿಸಿ ನಿರ್ಮಿಸಲಾದ ಮಧ್ಯಮ ನೀರಾವರಿ ಯೋಜನೆಯ ಅಣೆಕಟ್ಟೆ ಮತ್ತು ಮುಖ್ಯ ಕಾಲುವೆಗಳು ಹಲವು ದಶಕಗಳ ಬಳಿಕವೂ ರೈತರ ಜಮೀನುಗಳಿಗೆ ಸರಿಯಾಗಿ ನೀರು ಒದಗಿಸದೇ ಇರುವ ವಾಸ್ತವ ಬಯಲಾಗಿದೆ.

ಕಲಬುರಗಿ, ಬೀದರ್ ಮತ್ತು ಯಾದಗಿರಿ ಶಾಶ್ವತ ನೀರಾವರಿ ಹೋರಾಟ ಸಮಿತಿಯ ಭೀಮಾ ಮಿಷನ್ ಅಡಿಯಲ್ಲಿ ನಡೆಸಲಾದ ಎರಡು ತಿಂಗಳ ಪಾದಯಾತ್ರೆ ಅಧ್ಯಯನ ಯಾತ್ರೆಯ ವರದಿ ಸಿದ್ಧಗೊಂಡಿದ್ದು, ಮೂರೂ ಜಿಲ್ಲೆಗಳ ನೀರಾವರಿ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಲೋಪ, ನಿರ್ಲಕ್ಷ್ಯ ಮತ್ತು ಇಚ್ಛಾಶಕ್ತಿಯ ಕೊರತೆ ನಗ್ನ ಸತ್ಯವನ್ನು ವರದಿ ಹೊರಹಾಕಿದೆ.

ಹಿರಿಯ ಹೋರಾಟಗಾರ ಮತ್ತು ಭೀಮಾ ಮಿಷನ್‌ನ ರೂವಾರಿ ಭೀಮಶೆಟ್ಟಿ ಮುಕ್ಕಾ ನೇತೃತ್ವದಲ್ಲಿ, ಹಿರಿಯ ಆರ್ಥಿಕ ತಜ್ಞ ಡಾ. ಬಸವರಾಜ ಕುಮನೂರ, ಸಂಗಾತಿಗಳಾದ ಶಿವಶರಣಪ್ಪ ಟೆಂಗಳಿ, ರಾಜು ಜೈನ್, ಶಿವರಾಜ ಬಿರಾದಾರ, ಅಭಿ, ಮಹೇಶ ಪಾಟೀಲ, ಪ್ರಿಯಾ ಹೊಸಗೌಡ ತಂಡವು ಯಾವುದೇ ಸರ್ಕಾರಿ ನೆರವಿಲ್ಲದೆ ಸ್ವಯಂಪ್ರೇರಣೆಯಿಂದ ಮೂರೂ ಜಿಲ್ಲೆಗಳ ಅಣೆಕಟ್ಟೆ, ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಗಳನ್ನು ಪ್ರತ್ಯಕ್ಷ ತಪಾಸಣೆ ನಡೆಸಿ ಸ್ಥಳೀಯ ರೈತರ ಸಮಸ್ಯೆ ಆಲಿಸಿ, ಅಂಕಿ ಅಂಶಗಳ ಸಂಗ್ರಹಿಸಿ ಸಮಗ್ರ ವರದಿ ಸಿದ್ಧಪಡಿಸಿದ್ದಾರೆ.

ನೀರಾವರಿ ಯೋಜನೆಗಳ ವಾಸ್ತವ?

ಕಲ್ಯಾಣ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಒಟ್ಟು 11 ಮಧ್ಯಮ ನೀರಾವರಿ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಭೀಮಾ ಏತ ನೀರಾವರಿ, ಆಳಂದದ ಅಮರ್ಜಾ, ಕಮಲಾಪೂರ ಮುಲ್ಲಾಮರಿ ಕೆಳದಂಡೆ, ಗಂಡೋರಿ ನಾಲಾ, ಬೆಣ್ಣೆತೋರಾ, ಚಿಂಚೋಳಿ ತಾಲೂಕಿನ ಚಂದ್ರಂಪಳ್ಳಿ, ಬೀದರ್ ಜಿಲ್ಲೆಯ ಚುಳಕಿ ನಾಲಾ, ಕಾರಂಜಾ, ಮುಲ್ಲಾಮರಿ ಮೇಲ್ದಂಡೆ, ಯಾದಗಿರಿ ಜಿಲ್ಲೆಯ ಸೌದಾಗರ್, ಹತ್ತಿಗುಣಿ ಅಣೆಕಟ್ಟೆಗಳು, ಈ ಎಲ್ಲ ಯೋಜನೆಗಳೂ ತಮ್ಮ ನಿಗದಿತ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು ಅಧ್ಯಯನ ತಂಡದ ಅಭಿಪ್ರಾಯ.

ಭೀಮಶೆಟ್ಟಿ ಮುಕ್ಕಾ ಮತ್ತು ಆರ್ಥಿಕ ತಜ್ಞ ಡಾ. ಬಸವರಾಜ ಕಮನೂರ ನೇತೃತ್ವದಲ್ಲಿ ಕಾಲುವೆಗಳ ಅಧ್ಯಯನ ನಡೆಸಿದ ತಂಡ.

49,000 ಎಕರೆ ಗುರಿ, ಶೇ.20 ಮಾತ್ರ ಫಲ

ಭೀಮಾ ಏತ ನೀರಾವರಿ ಯೋಜನೆಯಡಿ ಸುಮಾರು 49,000 ಎಕರೆ ಜಮೀನಿಗೆ ನೀರಾವರಿ ಕಲ್ಪಿಸಬೇಕಿತ್ತು. ವಾಸ್ತವದಲ್ಲಿ ಕೇವಲ ಶೇ. 20 ಮಾತ್ರ ನೀರು ಬಳಕೆಯಾಗುತ್ತಿದೆ. ಚಂದ್ರಂಪಳ್ಳಿ ಅಣೆಕಟ್ಟೆಯಲ್ಲೂ ಇದೇ ಪರಿಸ್ಥಿತಿ ಇದ್ದು, ಶೇ.20 ಬಳಕೆ ಮಾತ್ರ ನಡೆಯುತ್ತಿದೆ ಎಂದು ತಂಡ ಬಹಿರಂಗಪಡಿಸಿದೆ. ಶೀಘ್ರದಲ್ಲಿಯೇ ತಂಡದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಂಡ ತಿಳಿಸಿದೆ.

ಪರಿಶೀಲನೆ ವೇಳೆ ಕಂಡುಬಂದ ಸಮಸ್ಯೆಗಳು

ಕಾಲುವೆಗಳು ಮಣ್ಣು, ಗಿಡಗಂಟಿ ಮತ್ತು ಹುಲ್ಲಿನಿಂದ ತುಂಬಿ ಹೋಗಿ ನೀರು ಹರಿಯಲು ಅಸಾಧ್ಯವಾಗಿದೆ. ವಿತರಣಾ ಕಾಲುವೆಗಳು ಬಹುತೇಕ ಕಾರ್ಯಹೀನವಾಗಿದ್ದು ನೀರೇ ಹರಿಯುತ್ತಿಲ್ಲ. ಅಣೆಕಟ್ಟೆ ಪ್ರಾಂಗಣಗಳಲ್ಲಿ ಪೊದೆ ಮತ್ತು ಕಂಟಿಗಳು ಬೆಳೆದು ನಿರ್ವಹಣೆ ಶೂನ್ಯ, ಪ್ರವಾಸಿಗರು ಬಿಸಾಡಿದ ತ್ಯಾಜ್ಯ ಅಣೆಕಟ್ಟೆ ಪ್ರದೇಶದಲ್ಲಿ ಸಂಗ್ರಹವಾಗಿ ಪರಿಸರ ಮಾಲಿನ್ಯ ಉಂಟಾಗಿದೆ. ಚುಳಕಿ ನಾಲಾ ಅಣೆಕಟ್ಟೆ ಕಳಪೆ ಗುಣಮಟ್ಟದ ನಿರ್ಮಾಣ ಹೊಂದಿದೆ. ಕಾಲುವೆಗಳ ಅಕ್ಕಪಕ್ಕದ ರಸ್ತೆಗಳು ಅವೈಜ್ಞಾನಿಕ ಮತ್ತು ಅಸಮರ್ಪಕವಾಗಿ ನಿರ್ಮಾಣಗೊಂಡಿವೆ. ಕಾಲುವೆಗಳ ನಿರ್ಮಾಣವೇ ಅವೈಜ್ಞಾನಿಕ ಎಂದು ತಂಡ ಕಟುವಾಗಿ ವಿಮರ್ಶಿಸಿದೆ.

ಸರ್ಕಾರಕ್ಕೆ ವರದಿ ಮಂಡನೆ

ತಂಡ ಸಿದ್ಧಪಡಿಸಿದ ವರದಿಯನ್ನು ಹಂತ ಹಂತವಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಮೊದಲು ಆಯಾ ಜಿಲ್ಲಾಧಿಕಾರಿಗೆ ಸ್ಥಿತಿಗತಿ ವಿವರಿಸಿ ಭೇಟಿ ನೀಡಲಾಗುವುದು. ನಂತರ ಸ್ಥಳೀಯ ಶಾಸಕರಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲಾಗುವುದು, ಅಂತಿಮವಾಗಿ ರಾಜ್ಯದ ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗೆ ನಿಯೋಗದ ಮೂಲಕ ಅಧಿಕೃತ ವರದಿ ಮಂಡಿಸಲಾಗುವುದು.

ಯೋಜನೆ ದುಬಾರಿ ಆದರೆ ನಿರರ್ಥಕ?

ಭೀಮಾ ನದಿಯಿಂದ ಅಮರ್ಜಾ ಅಣೆಕಟ್ಟೆಗೆ ನೀರು ತರುವ ಯೋಜನೆ ಜಾರಿಯಲ್ಲಿದ್ದರೂ ಅದರ ಉಪಯುಕ್ತತೆ ಬಗ್ಗೆ ತಂಡ ಪ್ರಶ್ನೆ ಎತ್ತಿದೆ. "ಮಳೆಗಾಲದಲ್ಲಿ ಭೀಮಾ ನೀರು ಹರಿಯುವಾಗ ಅಮರ್ಜಾ ಅಣೆಕಟ್ಟೆಗೂ ಸ್ಥಳೀಯ ಮಳೆ ನೀರು ಬರುತ್ತದೆ. ಹಾಗಿರುವಾಗ ಈ ಯೋಜನೆ ಫಲಪ್ರದವಲ್ಲ" ಎಂದು ತಂಡ ವಾದಿಸಿದೆ. ಇಂತಹ ದೊಡ್ಡ ಯೋಜನೆಗಳ ಬದಲಿಗೆ ಸ್ಥಳೀಯ ಅಗತ್ಯಕ್ಕೆ ತಕ್ಕ ಪರ್ಯಾಯ ಮಾರ್ಗಗಳನ್ನು ಅನುಸರಿಸಬೇಕು ಎಂದು ಸಲಹೆ ನೀಡಿದೆ.

ಭೀಮಾ ಮಿಷನ್‌ನ ಪ್ರಮುಖ ಶಿಫಾರಸ್ಸುಗಳು

ಅಣೆಕಟ್ಟೆ ತುಂಬಿಸುವ ಯೋಜನೆಗಳ ಬದಲಿಗೆ ಅಗತ್ಯ ಸ್ಥಳಗಳಲ್ಲಿ ಚೆಕ್‌ಡ್ಯಾಂ, ಬ್ರಿಡ್ಜ್ ಕಂ-ಬ್ಯಾರೇಜ್ ನಿರ್ಮಿಸಬೇಕು. ಹಳ್ಳಿಗಳಲ್ಲಿ ಬರಡಾಗಿ ಉಳಿದಿರುವ ಸಣ್ಣ ಕೆರೆಗಳನ್ನು ಪುನರ್ಜೀವನ ಮಾಡಬೇಕು. ಕಾಲುವೆಗಳ ಸಮರ್ಪಕ ಸ್ವಚ್ಛತೆ ಮತ್ತು ನಿರ್ವಹಣೆ ಕ್ರಮ ಕೈಗೊಳ್ಳಬೇಕು, ನೀರು ಬಳಕೆದಾರರ ಸಂಘಗಳ ಮೂಲಕ ರೈತರಿಗೆ ನೀರು ಬಳಕೆ ತರಬೇತಿ ಮತ್ತು ಜಾಗೃತಿ ಮೂಡಿಸಬೇಕು. ರೈತರು ನೀರನ್ನು ಅನಾವಶ್ಯಕ ಹರಿಬಿಡದೆ ಶಿಸ್ತುಬದ್ಧ ನೀರಾವರಿ ಅನುಸರಿಸುವಂತೆ ಪ್ರೇರೇಪಿಸಬೇಕು. ಕಾಲುವೆ ನಿರ್ಮಾಣ ಮತ್ತು ದುರಸ್ತಿಯಲ್ಲಿ ವೈಜ್ಞಾನಿಕ ವಿಧಾನ ಅಳವಡಿಸಬೇಕು.



ಅಣೆಕಟ್ಟೆಗಳಲ್ಲಿ ನೀರಿದ್ದರು ಕಾಲುವೆಗಳಿಗೆ ನೀರು ಹರಿಯದೆ ಒಣಗಿ ನಿಂತಿವೆ.

ಅಧಿಕಾರಿಗಳ ನಿರ್ಲಕ್ಷ್ಯ, ರಾಜಕೀಯ ಇಚ್ಛಾಶಕ್ತಿ ಕೊರತೆ

ಕಲ್ಯಾಣ ಕರ್ನಾಟಕದ ನೀರಾವರಿ ಯೋಜನೆಗಳು ವಿಫಲಗೊಳ್ಳಲು ಮುಖ್ಯ ಕಾರಣಗಳೆಂದರೆ, ಉನ್ನತ ಅಧಿಕಾರಿಗಳ ನಿರ್ಲಕ್ಷ್ಯ, ನಿರ್ವಹಣೆ ಮತ್ತು ಮೇಲ್ವಿಚಾರಣೆ ಸಂಪೂರ್ಣ ಕೊರತೆ ಇದ್ದು, ಕ್ಷೇತ್ರ ಅಧಿಕಾರಿಗಳು ಜವಾಬ್ದಾರಿ ಮರೆತಿದ್ದಾರೆ. ಶಾಸಕರು ಮತ್ತು ಜನಪ್ರತಿನಿಧಿಗಳು ರೈತರ ನಿಜವಾದ ಸಮಸ್ಯೆಗಳ ಕಡೆ ತಮ್ಮ ಗಮನಹರಿಸದ ಪರಿಸ್ಥಿತಿ ಇದೆ. ನಿರಾಸೆಯಿಂದ ರೈತ ಸಮುದಾಯ ಹೋರಾಡುವ ಉತ್ಸಾಹ ಕಳೆದುಕೊಂಡಿದೆ. ಎಲ್ಲ ಅಣೆಕಟ್ಟೆಗಳಿಗೆ ನೀರು ಬಳಕೆದಾರರ ಸಂಘಗಳು ಅಸ್ತಿತ್ವದಲ್ಲಿ ಇದ್ದರೂ ರೈತರ ಜಾಗೃತಿ ಮತ್ತು ಸಂಘಟನೆ ಆಗಿಲ್ಲ.

ತಳಮಟ್ಟದ ಧ್ವನಿ

"ಕೋಟ್ಯಂತರ ರೂ. ಖರ್ಚು ಮಾಡಿ ಕಟ್ಟಿದ ಅಣೆಕಟ್ಟೆ ರೈತರ ಜಮೀನಿಗೆ ನೀರು ಕೊಡದಿದ್ದರೆ ಅವು ಕಟ್ಟಿದ ಉದ್ದೇಶ ಈಡೇರಿದಂತೆ ಆಗುತ್ತದೆಯೆ? ಅಣೆಕಟ್ಟೆ ಕಟ್ಟಿದ್ದೇ ರೈತರ ಹೊಲಗಳಿಗೆ ನೀರು ಒದಗಿಸಲಿಕ್ಕೆ. ಅದೇ ಆಗದಿದ್ದರೆ ಅಣೆಕಟ್ಟೆ ಯಾಕೆ ಬೇಕು?" ಎಂದು ಭೀಮಾ ಮಿಷನ್ ಸರ್ಕಾರಕ್ಕೆ ಕೇಳುತ್ತಿದೆ. ಈ ಅಧ್ಯಯನ ವರದಿ ಕೇವಲ ಲೋಪಗಳ ಪಟ್ಟಿಯಲ್ಲ. ರಾಜ್ಯ ಸರ್ಕಾರ ಎಚ್ಚೆತ್ತು ಕಲ್ಯಾಣ ಕರ್ನಾಟಕದ ಬರಡು ಭೂಮಿಯ ರೈತರ ಬದುಕಿಗೆ ನೀರು ಉಣಿಸಬೇಕೆಂಬ ಮನಸಾಕ್ಷಿಯ ಕರೆ.

ಸುದ್ದಿ ಮಿಂಚು

ಕಾಂಗ್ರೆಸ್ ಗೆಲುವಿಗೆ ಹರ್ಷ

ಯಾದಗಿರಿ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಭರ್ಜರಿ ಜಯ ದಾಖಲಿಸಿರುವ ಕಾಂಗ್ರೆಸ್‌ನ ಉಮೇಶ್ ಮೇಟಿ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಸಮರ್ಥ-ರ್ ಶಾಮನೂರು ಅವರಿಗೆ ಅಭಿನಂದಿಸಿರುವ ಯಾದಗಿರಿ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಡಾ. ಎಸ್.ಬಿ.ಕಾಮರಡ್ಡಿ, ಸರ್ಕಾರದ ಪಂಚ ಗ್ಯಾರಂಟಿಗೆ ಜನರ ಅಭೂತಪೂರ್ವ ಬೆಂಬಲ ದೊರಕಿದೆ ಎಂಬುದನ್ನು ಈ ಫಲಿತಾಂಶ ಸಾಬೀತು ಮಾಡಿವೆ ಎಂದಿದ್ದಾರೆ. ಅಭಿವೃದ್ಧಿ ಮತ್ತು ಜನರ ಹಿತಕ್ಕಾಗಿ ನೀವು ತೋರಿದ ಶ್ರಮಕ್ಕೆ ಮತದಾರ ಪ್ರಭುಗಳು ಬೆಂಬಲ ನೀಡಿದ್ದಾರೆ. ಗೆದ್ದವರ ನಾಯಕತ್ವದಲ್ಲಿ ಬಾಗಲಕೋಟೆ ಹಾಗೂ ದಾವಣಗೆರೆ ಕ್ಷೇತ್ರಗಳು ಮಾದರಿಯಾಗಿ ಬೆಳೆಯಲಿ. ಕಾಂಗ್ರೆಸ್ ಪಕ್ಷದ ಸಿದ್ಧಾಂತ ಹಾಗೂ ಜನಪರ ಯೋಜನೆಗಳಿಗೆ ಈ ಗೆಲುವು ಸಾಕ್ಷಿಯಾಗಿದೆ ಎಂದು ಡಾ. ಕಾಮರಡ್ಡಿ ಹೇಳಿದ್ದಾರೆ.

ಕಲಬುರಗಿ-ದಾಂಡೇಲಿ ಬಸ್ ಶುರು

ಹುಬ್ಬಳ್ಳಿ: ಕಲಬುರಗಿಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಕಲಬುರಗಿ ಘಟಕ-1 ರಿಂದ 'ಕಲಬುರಗಿಯಿಂದ ದಾಂಡೇಲಿ'ಗೆ ಪ್ರೇಕ್ಷಣಿಯ ಸ್ಥಳಗಳ ವೀಕ್ಷಣೆಗಾಗಿ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಮೇ 1 ರಿಂದ ಕಲಬುರಗಿ- ದಾಂಡೇಲಿಗೆ ನಾನ್ ಎಸಿ ಸ್ಲೀಪರ್ ಬಸ್ ಪ್ರಾರಂಭಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸಾರಿಗೆಯು ಜೇವರ್ಗಿ, ಶಹಾಪುರ, ಲಿಂಗಸುಗೂರು, ಕುಷ್ಟಗಿ, ಗದಗ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಸಂಚರಿಸುತ್ತದೆ. ಕಲಬುರಗಿ ಬಸ್ ನಿಲ್ದಾಣದಿಂದ ರಾತ್ರಿ 10 ಗಂಟೆಗೆ ಹೊರಟು ಬೆಳಿಗ್ಗೆ 8.30 ಕ್ಕೆ ದಾಂಡೇಲಿ ತಲುಪಲಿದೆ. ದಾಂಡೇಲಿ ಬಸ್ ನಿಲ್ದಾಣದಿಂದ ಸಂಜೆ 6.30 ಕ್ಕೆ ಹೊರಟು ಬೆಳಿಗ್ಗೆ 5 ಗಂಟೆಗೆ ಕಲಬುರಗಿ ತಲುಪುವುದು. ಸಾರ್ವಜನಿಕ ಪ್ರಯಾಣಿಕರು ಸಾರಿಗೆಯ ಸದುಪಯೋಗ ಪಡೆದುಕೊಳ್ಳುವಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗ 1 ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಪಿಯು ಪಾಸಾದ ಅಂಧ ಗಾಯಕ

ಅಫಜಲಪುರ: ಕರ್ನಾಟಕದ ಗಡಿಯ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ತೋಳನೂರ ಗ್ರಾಮದ ಸಿದ್ದರಾಮೇಶ್ವರ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಸರಿಗಮಪ ರಿಯಾಲಿಟಿ ಶೋನ ದಿವ್ಯಾಂಗ ಗಾಯಕ ರೇವಣಸಿದ್ದ ಫೂಲಾರಿ ಮಹಾರಾಷ್ಟ್ರ ರಾಜ್ಯ ಪರೀಕ್ಷಾ ಬೋರ್ಡ್ ನಡೆಸುವ ದ್ವಿತಿಯ ಪಿಯು ಪರೀಕ್ಷೆಯಲ್ಲಿ ಶೇ. 56.33 ಫಲಿತಾಂಶದೊಂದಿಗೆ ತೇರ್ಗಡೆ ಹೊಂದಿದ್ದಾರೆ.

ಒಟ್ಟು 30 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು ಈ ಪೈಕಿ 6 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ವಿದ್ಯಾರ್ಥಿ ಸಾಧನೆ ಕುರಿತು ಆಲಮೇಲ ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಲಕ್ಷ್ಮೀಪುತ್ರ ಕಿರನಳ್ಳಿ ಮಾತನಾಡಿ, ನಮ್ಮೂರಿನ ಪುತ್ರ ಗಡಿನಾಡಿನ ಕನ್ನಡಿಗ ರೇವಣಸಿದ್ಧ ಎಸ್‌ಎಸ್‌ಎಲ್‌ಸಿಯಲ್ಲೂ ಶೇ. 80 ಅಂಕದೊಂದಿಗೆ ತೇರ್ಗಡೆಯಾಗಿದ್ದರು. ಆಮೇಲೆ ಹೆಚ್ಚಿನ ಸಮಯ ಸಂಗೀತ ಅಭ್ಯಾಸದಲ್ಲಿ ತೊಡಗಿ ಸಾಧನೆಯ ಹಾದಿಯಲ್ಲಿರುವ ಅವರು ಹೆಚ್ಚಿನ ಶಿಕ್ಷಣ ಕಲಿತು ದೊಡ್ಡ ಅಧಿಕಾರಿಯಾಗುವ ಕನಸು ಕಂಡಿದ್ದಾರೆ. ಅದಕ್ಕೆ ಮೆಟ್ಟಿಲು ಎನ್ನುವಂತೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿ ಸಾಧನೆ ಮಾಡಿ ನಮ್ಮೂರಿಗೆ ಗೌರವ ತಂದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಫಲಿತಾಂಶದ ಕುರಿತು ರೇವಣಸಿದ್ದ ಮಾತನಾಡಿ, ದೇವರು ನನಗೆ ದೃಷ್ಟಿ ನೀಡಲಿಲ್ಲ, ಆದರೆ ಸಾಧಿಸುವ ಛಲ ನೀಡಿದ್ದಾನೆ. ತಂದೆ, ತಾಯಿ ಹಾಗೂ ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ಜನರ ಹಾರೈಕೆಯಿಂದ ನಾನು ಸಂಗೀತ ಮತ್ತು ಶಿಕ್ಷಣದಲ್ಲಿ ಉನ್ನತ ಸಾಧನೆ ಮಾಡಬೇಕೆಂದುಕೊಂಡಿದ್ದೇನೆ. ದೊಡ್ಡ ಅಧಿಕಾರಿಯಾಗಬೇಕೆಂಬ ಆಸೆ ಇದೆ. ಹೀಗಾಗಿ ಬರುವ ದಿನಗಳಲ್ಲಿ ಇನ್ನಷ್ಟು ಕಠಿಣ ಅಭ್ಯಾಸ ಮಾಡುತ್ತೇನೆ ಎಂದರು.

ಫುಲಾರಿ ಸಾಧನೆಗೆ ಶಾಲೆಯ ಪ್ರಾಚಾರ್ಯ ಸುಶೀಲಕುಮಾರ್ ಗಾಯಕವಾಡ್, ಶಿಕ್ಷಕರಾದ ವೈಭವ್ ಪೋತದಾರ, ರೇಣುಕಾಚಾರ್ಯ ಹಿರೇಮಠ, ರೇವಣಸಿದ್ಧ ಮಣೂರೇ, ಶಿವಾನಂದ ಕರಜಗಿ, ಪ್ರಕಾಶ ಅತನೂರೆ, ಹಮೀದ ನದಾಫ್, ಕಾಶಿನಾಥ್ ಚಲಗೇರಿ, ಮಾನಕೋಜಿ ಮ್ಯಾಡಮ್, ಹುಲಮನಿ, ಯಶವಂತ ಹರಳಯ್ಯ ಹರ್ಷ ವ್ಯಕ್ತಪಡಿಸಿದರು.

ತ್ವರಿತಗತಿಯಲ್ಲಿ ವಿಮಾನಸೇವೆ ಆರಂಭಿಸಲು ಮನವಿ

ಕಲಬುರಗಿ: ವಿಮಾನಯಾನ ನಿರ್ವಾಹಕರಿಗೆ 28.47 ಕೋಟಿ ರೂ.ಗಳನ್ನು ಕೆಕೆಆರ್‌ಡಿಬಿ ಬಜೆಟ್ ಅಡಿಯಲ್ಲಿ ಕಾರ್ಯತಂತ್ರದ ಅಂತರ ನಿಧಿ (ವಿಜಿಎಫ್) ಗಾಗಿ ಹಂಚಿಕೆ ಮಾಡುವ ಕರ್ನಾಟಕ ಸಚಿವ ಸಂಪುಟದ ನಿರ್ಧಾರವನ್ನು ಸ್ವಾಗತಿಸಿರುವ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷ ಅಮರನಾಥ ಪಾಟೀಲರು ತ್ವರಿತವಾಗಿ ಕಲಬುರಗಿಯಿಂದ ವಿಮಾನಸೇವೆ ಆರಂಭಿಸುವಂತೆ ಮನವಿ ಮಾಡಿದ್ದಾರೆ.

ಪ್ರಮುಖ ವಿಮಾನಯಾನ ನಿರ್ವಾಹಕರೊಂದಿಗೆ ತೊಡಗಿಸಿಕೊಳ್ಳುವ ಮೂಲಕ ವಿಸ್ತೃತ ದೇಶೀಯ ಮತ್ತು ಅಂತರರಾಷ್ಟ್ರೀಯ ಜಾಲಗಳಿಗೆ ಹೆಸರುವಾಸಿಯಾದ ಇಂಡಿಗೋ, ಏರ್ ಇಂಡಿಯಾ, ಏರ್ ಏಷ್ಯಾ ಇಂಡಿಯಾ ಮತ್ತು ವಿಸ್ತಾರದಂತಹ ಪ್ರಮುಖ ವಿಮಾನಯಾನ ಸಂಸ್ಥೆಗಳು ವಿಜಿಎಫ್ ಯೋಜನೆಯಡಿಯಲ್ಲಿ ಕಲಬುರಗಿಯಿಂದ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಬೇಕು, ನೆಟ್‌ವರ್ಕ್ ಸಂಪರ್ಕವನ್ನು ಬಳಸಿಕೊಳ್ಳಬೇಕು, ಈ ನಿರ್ವಾಹಕರು ಬೆಂಗಳೂರು ಮೂಲಕ ದುಬೈ, ಸಿಂಗಾಪುರ, ಬ್ಯಾಂಕಾಕ್, ರಿಯಾದ್ ಮತ್ತು ಯುರೋಪ್‌ನಂತಹ ಜಾಗತಿಕ ತಾಣಗಳಿಗೆ ತಡೆರಹಿತ ಏಕ-ನಿಲುಗಡೆ ಸಂಪರ್ಕವನ್ನು ಒದಗಿಸಬಹುದು ಎಂದು ಸಲಹೆ ನೀಡಿದ್ದಾರೆ. ಕಲಬುರಗಿ ಬೆಂಗಳೂರು ಮತ್ತು ತಿರುಪತಿಯಂತಹ ವಲಯಗಳಲ್ಲಿ 80% ಕ್ಕಿಂತ ಹೆಚ್ಚು ಆಕ್ಯುಪೆನ್ಸಿಯನ್ನು ಸ್ಥಿರವಾಗಿ ದಾಖಲಿಸಿದೆ, ಇದು ಬಲವಾದ ಮತ್ತು ಸುಸ್ಥಿರ ಬೇಡಿಕೆಯನ್ನು ಸೂಚಿಸುತ್ತದೆ ಮತ್ತು ವಿಜಿಎಫ್ ನಂತರದ ಸುಸ್ಥಿರತೆಯು 80% ಗಿಂತ ಹೆಚ್ಚು ಆಕ್ಯುಪೆನ್ಸಿ ಮತ್ತು ಬಲವಾದ ಮಾರುಕಟ್ಟೆ ಸಾಮರ್ಥ್ಯವನ್ನು ಗಮನಿಸಿದರೆ, ವಿಜಿಎಫ್ ಬೆಂಬಲವಿಲ್ಲದೆಯೂ ನಂತರವೂ ಪ್ರಮುಖ ವಾಹಕಗಳು ಸೇವೆಗಳನ್ನು ಮುಂದುವರಿಸುವ ಬಲವಾದ ಸಾಧ್ಯತೆ ಇದೆ. ಹೀಗಾಗಿ ಪ್ರಮುಖ ವಿಮಾನಯಾನ ಸಂಸ್ಥೆಗಳೊಂದಿಗಿನ ಕಾರ್ಯತಂತ್ರದ ಸಹಯೋಗವು ಕಲಬುರಗಿಯನ್ನು ಪ್ರಮುಖ ಪ್ರಾದೇಶಿಕ ವಾಯುಯಾನ ಕೇಂದ್ರವನ್ನಾಗಿ ಪರಿವರ್ತಿಸುತ್ತದೆ ಮತ್ತು ಕಲ್ಯಾಣ ಕರ್ನಾಟಕವನ್ನು ಜಾಗತಿಕ ಪ್ರಯಾಣ ಮತ್ತು ಆರ್ಥಿಕ ಜಾಲಗಳೊಂದಿಗೆ ಸಂಯೋಜಿಸುವುದರಿಂದ ಆದಷ್ಟು ಬೇಗ ವಿಮಾನಯಾನ ಸಂಸ್ಥೆಗಳೊಂದಿಗೆ ಚರ್ಚೆಗಳನ್ನು ಪ್ರಾರಂಭಿಸಿ, ತ್ವರಿತ ಸೇವೆ ಒದಗಿಸಲು ಕ್ರಮಕೈಗೊಳ್ಳಬೇಕು ಎಂದು ವಿನಂತಿಸಿದ್ದಾರೆ.

ಆಂದೋಲಾ: ಕುಡಿಯುವ ನೀರಿನ ಸಮಸ್ಯೆ ಬಗೆಹರಿಸದಿದ್ದರೆ ಹೋರಾಟ

ಸಂ.ಕ. ಸಮಾಚಾರ ಕಲಬುರಗಿ: ಜೇವರ್ಗಿ ತಾಲೂಕಿನ ಆಂದೋಲ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ಸ್ಥಳೀಯ ಶಾಸಕ ಡಾ. ಅಜಯಸಿಂಗ್ ಸ್ಪಂದಿಸುತ್ತಿಲ್ಲ. ಹೀಗಾಗಿ ಜಿಲ್ಲಾಡಳಿತ 5 ದಿನಗಳಲ್ಲಿ ಪರಿಹಾರ ಒದಗಿಸದಿದ್ದರೆ ಬೀದರ್-ಬೆಂಗಳೂರು ಹೆದ್ದಾರಿ ತಡೆದು ಹೋರಾಟ ನಡೆಸಲು ತೀರ್ಮಾನಿಸಲಾಗಿದೆ ಎಂದು ಶಿವಸೇನಾ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಎಚ್ಚರಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಂದೋಲದಲ್ಲಿ ಸುಮಾರು 10 ಸಾವಿರ ಜನಸಂಖ್ಯೆ ಇದೆ. ಗ್ರಾಮದಲ್ಲಿ ಹಲವು ವರ್ಷಗಳಿಂದ ನೀರಿನ ಸಮಸ್ಯೆ ಇದೆ. 25 ದಿನಕ್ಕೊಮ್ಮೆ ನಲ್ಲಿಯಲ್ಲಿ ನೀರು ಬರುತ್ತದೆ. ಪಿಡಿಒ 15 ದಿನಕ್ಕೊಮ್ಮೆ ಪಂಚಾಯಿತಿಗೆ ಬರುತ್ತಾರೆ. ಹಿಂದಿನ ಪಿಡಿಒ ರಾಜಶೇಖರ ನೆಲೋಗಿ 12 ಲಕ್ಷ ಲೂಟಿ ಮಾಡಿದ್ದು, ವಸೂಲಿಗಾಗಿ ಆದೇಶ ಮಾಡಿ ವರ್ಷ ಕಳೆದರೂ ಹಣ ಪಾವತಿಸಿಲ್ಲ. ಪಂಚಾಯತ್ ರಾಜ್ ಸಚಿವರು ಇತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಪಶ್ಚಿಮ ಬಂಗಾಳದಲ್ಲಿ ಬಾಂಗ್ಲಾ ದೇಶದ ನುಸುಳುಕೋರರು ಬಂಗಾಳ ತೊರೆದು ಕಾಂಗ್ರೆಸ್ ಸರ್ಕಾರ ಇರುವ ಕರ್ನಾಟಕ, ತೆಲಂಗಾಣ, ಕೇರಳಕ್ಕೆ ಬರುತ್ತಿದ್ದಾರೆನ್ನುವ ವಿಷಯ ಹರಿದಾಡುತ್ತಿದೆ. ಪೊಲೀಸ್ ಇಲಾಖೆ ರೈಲು ನಿಲ್ದಾಣಗಳಲ್ಲಿ ತಪಾಸಣೆ ಕೇಂದ್ರಗಳನ್ನು ತೆರೆದು ವಾಪಸ್ ಕಳಿಸಬೇಕು. ಸರ್ಕಾರ ಕೂಡ ನುಸುಳುಕೋರರ ಗಡಿಪಾರಿಗೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು.

■ ಸಿದ್ದಲಿಂಗ ಸ್ವಾಮೀಜಿ,
ಶಿವಸೇನಾ ರಾಜ್ಯಾಧ್ಯಕ್ಷ

ಜೆಜೆಎಂ ಕಾಮಗಾರಿ ಮುಗಿದು 2 ವರ್ಷ ಕಳೆದರೂ ಭೀಮಾ ನದಿಯಿಂದ ನೀರು ಸರಬರಾಜು ಆಗುತ್ತಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಗ್ರಾಮಸ್ಥರು ಮತ್ತು ನಾವು ಜೇವರ್ಗಿ ತಹಸೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿದಾಗ 15 ದಿನಗಳಲ್ಲಿ ನೀರು ಸರಬರಾಜು ಮಾಡುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಅಶ್ವಾಸನೆ ನೀಡಿದರು. 5 ತಿಂಗಳಾದರೂ ಒಂದು ಹನಿ ನೀರು ಬರುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಲ್ಲೂರ-ಆಂದೋಲ ರಸ್ತೆ ಹಾಳಾಗಿ 5 ವರ್ಷಗಳಾಗಿದೆ. ಶಾಸಕರು ಜನರ ಜೀವದ ಜೊತೆ ಚೆಲ್ಲಾಟ ಆಡುತ್ತಿದ್ದಾರೆ. ಕಳೆದ 30ರಂದು ಕಾಂಗ್ರೆಸ್ ಮುಖಂಡ ಅಕ್ರಮವಾಗಿ ಮುರುಮ್ ಸಾಗಿಸುತ್ತಿದ್ದ ವಾಹನ ಪೊಲೀಸರಿಗೆ ಒಪ್ಪಿಸಿದರೆ, ಅವರು ಯಾವುದೇ ಕ್ರಮ ಜರುಗಿಸದೆ ಬಿಟ್ಟು ಕಳಿಸಿದ್ದಾರೆ ಎಂದು ಆರೋಪಿಸಿದರು. ಶಿವಸೇನಾ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಗುರುಶಾಂತ ಟೆಂಗಳಿ, ಶಿವರಾಜ ಬಾಳಿ, ಮಲ್ಕಣ್ಣ ಹಿರೇಪೂಜಾರಿ, ರಾಕೇಶ್ ಜಮಾದರ, ರೋಹಿತ್ ಪಿಸ್ಕೆ, ಪ್ರಭಾಕರ ವಿಶ್ವಕರ್ಮ ಇದ್ದರು.

ಸಿಯುಕೆಯಲ್ಲಿ ಆ. 5 ರಿಂದ 7ರವರೆಗೆ ನಡೆಯುವ ಅಂತಾರಾಷ್ಟ್ರೀಯ ಸಮ್ಮೇಳನದ ಕರಪತ್ರವನ್ನು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಬಿಡುಗಡೆಗೊಳಿಸಿದರು.

ಅಂತಾರಾಷ್ಟ್ರೀಯ ಸಮ್ಮೇಳನದ ಕರಪತ್ರ ಬಿಡುಗಡೆ

ಸಂ.ಕ. ಸಮಾಚಾರ ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ "ದೇವಾಲಯಗಳ ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಸಾರ್ವಜನಿಕ ನೀತಿ, ಆಡಳಿತ, ಜೀವನೋಪಾಯಗಳು ಮತ್ತು ಸ್ಥಿರ ಪ್ರಾದೇಶಿಕ ಅಭಿವೃದ್ಧಿ" ಕುರಿತು ಆಗಸ್ಟ್ 5 ರಿಂದ 7ರವರೆಗೆ ಸಿಯುಕೆ ಆವರಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಸಮ್ಮೇಳನದ ಕರಪತ್ರವನ್ನು ಸಿಯುಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ, ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ ಸೇರಿ ವಿವಿಧ ವಿಭಾಗಗಳ ಅಧ್ಯಾಪಕರಾದ ಪ್ರೊ. ಪಾಂಡುರಂಗ ವಿ., ಡಾ. ಜಿ. ಮಹೇಂದ್ರ ರೆಡ್ಡಿ, ಪ್ರೊ. ಪುಷ್ಪಾ ಸವದತ್ತಿ, ಡಾ. ಎಸ್. ಲಿಂಗಮೂರ್ತಿ, ಪ್ರೊ. ದೇವರಾಜ ಸೇರಿ ಇತರೆ ಅಧ್ಯಾಪಕರು ಬಿಡುಗಡೆ ಮಾಡಿದರು.

ಸಿಯುಕೆ ಮತ್ತು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿ ಆಶ್ರಯದಲ್ಲಿ ಜರುಗುವ ಸಮ್ಮೇಳನದಲ್ಲಿ ದೇವಾಲಯಗಳ ಆರ್ಥಿಕ, ಸಾಮಾಜಿಕ ಹಾಗೂ ಸಾರ್ವಜನಿಕ ನೀತಿ ಸಂಬಂಧಿತ ಆಯಾಮಗಳ ಕುರಿತು ಪ್ರಬಂಧ ಮಂಡನೆ, ಚರ್ಚೆ ಮತ್ತು ಸಂವಾದಗಳು ನಡೆಯಲಿವೆ. ದೇಶೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಶಿಕ್ಷಣ ತಜ್ಞರು, ಸಂಶೋಧಕರು, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ವಿವಿಧ ದೇವಾಲಯಗಳ ಆಡಳಿತಾಧಿಕಾರಿಗಳು ಭಾಗವಹಿಸಲಿದ್ದಾರೆ.

ಆಸಕ್ತರು ದೇವಾಲಯ ಆರ್ಥಿಕತೆ ಮತ್ತು ಅದರ ಆರ್ಥಿಕ ಪರಿಣಾಮ, ಆಡಳಿತ ಮತ್ತು ಕಾನೂನು ಚೌಕಟ್ಟುಗಳು, ಸ್ಥಿರ ಪ್ರವಾಸೋದ್ಯಮ, ಪರಂಪರೆ ಮತ್ತು ಸಾಂಸ್ಕೃತಿಕ ಸಂಪತ್ತು, ದೇವಾಲಯ ನಿರ್ವಹಣೆಯಲ್ಲಿ ಡಿಜಿಟಲ್ ನವೀಕರಣ ಮತ್ತು ಕೃತಕ ಬುದ್ಧಿಮತ್ತೆ ಕುರಿತು ಪ್ರಬಂಧ ಮಂಡನೆ ಮಾಡಬಹುದಾಗಿದೆ.

ಸಂಕ್ಷಿಪ್ತ ಪ್ರಬಂಧ ಸಲ್ಲಿಕೆಗೆ ಜೂನ್ 15 ಕೊನೆಯ ದಿನವಾಗಿದ್ದು, ಸಂಪೂರ್ಣ ಪ್ರಬಂಧ ಸಲ್ಲಿಕೆಗೆ ಜುಲೈ 15 ಕೊನೆಯ ದಿನವಾಗಿದೆ. ಮಾಹಿತಿಗಾಗಿ ಡಾ. ಜಿ. ಮಹೇಂದ್ರ ರೆಡ್ಡಿ ಮೊ. 9666851851, ಡಾ. ಎಸ್. ಲಿಂಗಮೂರ್ತಿ 9014030809 ಇಮೇಲ್: tetpp2026@gmail.com ಸಂಪರ್ಕಿಸಬಹುದಾಗಿದೆ.

ಬಾಲು ನಾಯಕ ತಾಂಡಾದ ಮಾತಾ ಶಕುಂತಲಾ ದೇವಿ ದೇವಸ್ಥಾನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಗುಳನಾಗಾವಿಯ ಪೂಜ್ಯರಾದ ಅಭಿನವ ಸಿದ್ದಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಭಕ್ತಿಯ ಕೇಂದ್ರ ಶಕುಂತಲಾ ದೇವಿ ದೇವಸ್ಥಾನ

ಸಂ.ಕ.ಸಮಾಚಾರ ಶಹಾಬಾದ: ಕುಮಾರಿ ಮುತ್ತೈದೆಯಾಗಿ ಸಣ್ಣ ವಯಸ್ಸಿನಲ್ಲಿಯೇ ದೈವಶಕ್ತಿ ಪಡೆದು, ಭಕ್ತರ ಪಾಲಿಗೆ ದೇವಿಯಾಗಿದ್ದ ಶಕುಂತಲಾ ಮಾತಾ ಅಲ್ಪ ವಯಸ್ಸಿನಲ್ಲಿಯೇ ಅನೇಕ ಪವಾಡ ಮಾಡಿ, ದೇವಿಯ ಪಾದ ಸೇರಿದ್ದು, ಅವರ ಹೆಸರಿನಲ್ಲಿ ನಿರ್ಮಿಸಿದ ದೇವಸ್ಥಾನ ಭಕ್ತಿ ಮತ್ತು ಶ್ರದ್ದೆಯ ಕೇಂದ್ರವಾಗಿದೆ ಎಂದು ಮುಗುಳನಾಗಾವಿ ಕಟ್ಟಿಮನಿ ಹಿರೇಮಠದ ಪೀಠಾಧಿಪತಿ ಅಭಿನವ ಸಿದ್ದಲಿಂಗ ಶಿವಾಚಾರ್ಯರು ಹೇಳಿದರು.

ತಾಲೂಕಿನ ಮುಗುಳನಾಗಾವಿಯ ಬಾಲು ನಾಯಕ ತಾಂಡಾದಲ್ಲಿ ಮಾತಾ ಶಕುಂತಲಾ ದೇವಿ ದೇವಸ್ಥಾನ ಉದ್ಘಾಟನೆ, ನಂದಿ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ ಮಾತನಾಡಿ, ಚಿಕ್ಕ ವಯಸ್ಸಿನಲ್ಲಿಯೇ ದೇವಿ ಜಗದಂಬೆಯ ಆರಾಧಕಳಾಗಿ ಅನೇಕ ಭಕ್ತರಿಗೆ ಕಷ್ಟ ಎಂದು ಬಂದವರಿಗೆ ಮಾರ್ಗದರ್ಶನ ನೀಡಿದ್ದು, ದೇವಿಯ ಒಂದು ಅವತಾರವೇ ಆಗಿದ್ದಾರೆ ಎಂದು ಹೇಳಿದರು.

ಪೂಜ್ಯ ಯಲ್ಲಾಲಿಂಗ ಪುಣ್ಯಾಶ್ರಮದ ಪೀಠಾಧಿಪತಿ ಪೂಜ್ಯ ಜೇಮಸಿಂಗ ಮಹಾರಾಜರು ಆಶೀರ್ವಚನ ನೀಡುತ್ತ, ಚಿಕ್ಕ ಮಕ್ಕಳು ಹೊರಗಿನವರಿಗಿಂತ ಮನೆಯವರನ್ನು ನೋಡಿ ಅನುಕರಣೆ ಮಾಡುತ್ತಾರೆ, ಮನೆಯ ಹಿರಿಯರು ಗುರುಹಿರಿಯರನ್ನು ಗೌರವದಿಂದ ಕಂಡಾಗ ಮಾತ್ರ ಚಿಕ್ಕ ಮಕ್ಕಳು ಅದನ್ನು ರೂಢಿಸಿಕೊಳ್ಳುತ್ತಾರೆ, ಮಕ್ಕಳಿಗೆ ಕೇವಲ ಶಿಕ್ಷಣ ಕೊಟ್ಟರೆ ಸಾಲದು, ಅದರೊಂದಿಗೆ ವಿನಯವನ್ನು ಕಲಿಸಬೇಕು, ಅಂದಾಗ ಮಾತ್ರ ಸಂಸ್ಕಾರಯುತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅನೀಲ ಸಾಹೇಬ ಮಹಾರಾಜ, ರಾಜು ಪವಾರ ಮಾತನಾಡಿದರು. ಕಾರ್ಯಕ್ರಮದಲ್ಲಿ ದತ್ತು ಚವ್ಹಾಣ, ಬಾಲು ಪವಾರ, ಎಎಸ್ಐ ವಿಠಲ ರಾಠೋಡ, ಮೋಹನ ಚವ್ಹಾಣ, ದೇವಸಿಂಗ್ ಚವ್ಹಾಣ, ಡಾಕು ರಾಠೋಡ, ನಾಗಣ್ಣಗೌಡ ಕಂಠಿ, ಚಂದು ಜಾಧವ, ಸಾಗರ ರಾಠೋಡ, ತೇಜು ರಾಠೋಡ, ಭರತ ರಾಠೋಡ, ಶರಣ ಕಾರಬಾರಿ ಹಾಗೂ ನಾಲ್ಕು ತಂಡಾದ ಸಾರ್ವಜನಿಕರು ಪಾಲ್ಗೊಂಡಿದ್ದರು.

ದೇವಸ್ಥಾನ ನಿರ್ಮಾಣಕ್ಕೆ ದಾನಿಗಳಾದ ಮುಂಬೈನ ರಾಜು ಪವಾರ, ದೆಹಲಿ ಪೊಲೀಸ್ ಅಧಿಕಾರಿ ಮೋಹನ ಚವ್ಹಾಣ ಅವರಿಗೆ ಸತ್ಕರಿಸಲಾಯಿತು.

ಕೇಂದ್ರ ರೈಲ್ವೆ
ಸೋಲಾಪುರ ವಿಭಾಗ
ಸಿಗ್ನಲಿಂಗ್ ಕೆಲಸ

ಟೆಂಡರ್ ಸೂಚನೆ ಸಂಖ್ಯೆ 11-2026-SrDENCo. ಕೆಲಸದ ಹೆಸರು: ಎಂಜಿನಿಯರಿಂಗ್ ಇಲಾಖೆಯ ಗ್ಯಾಂಗ್ ಹಟ್‌ಗಳಿಗೆ 68 ಸಂಖ್ಯೆಗಳಿಗೆ ಒಂದು ವರ್ಷದ ವಾರಂಟಿ ಅವಧಿಯ ನಂತರ 3 ವರ್ಷಗಳ ಕಾಲ AMC ಯೊಂದಿಗೆ ರಿವರ್ಸ್ ಆಸ್ಮೋಸಿಸ್ (R.O.) ವಾಟರ್ ಪ್ಯೂರಿಫೈಯರ್‌ಗಳನ್ನು ಒದಗಿಸುವುದು, ಸರಿಪಡಿಸುವುದು, ಸ್ಥಾಪಿಸುವುದು, ಕಾರ್ಯಾರಂಭ ಮಾಡುವುದು. (ಅನುಬಂಧ - III ರ ಪ್ರಕಾರ ವಿವಿಧ ಸ್ಥಳಗಳಲ್ಲಿ), ಕೆಲಸದ ಅಂದಾಜು ವೆಚ್ಚ: ರೂ.24,55,344.00, ಮುಂಗಡ ಠೇವಣಿ ಹಣ: ರೂ.49,100.00. ಕೆಲಸದ ಪೂರ್ಣ ಅವಧಿ: 48 ತಿಂಗಳುಗಳು. ನಿರ್ವಹಣಾ ಅವಧಿ: 06 ತಿಂಗಳು. ಟೆಂಡರ್ ಸೂಚನೆ ಸಂಖ್ಯೆ 06-2026-SrDENC. ಕೆಲಸದ ಹೆಸರು: ಸೋಲಾಪುರ ವಿಭಾಗದಲ್ಲಿ ಮಳೆಗಾಲದಲ್ಲಿ 1 ವರ್ಷದವರೆಗೆ ಎಲ್ಲಾ RUB ಗಳಲ್ಲಿ LC ಗಳ ಬದಲಿಗೆ RUB ಗಳಿಂದ ಸಂಗ್ರಹವಾದ ನೀರನ್ನು ನಿರ್ಜಲೀಕರಣಗೊಳಿಸುವುದು ಮತ್ತು ಮಣ್ಣು ಸ್ವಚ್ಛಗೊಳಿಸುವುದು. ಕೆಲಸದ ಅಂದಾಜು ವೆಚ್ಚ: ರೂ. 87,75,624.76. ಮುಂಗಡ ಠೇವಣಿ ಹಣ: ರೂ.1,75,500.00, ಕೆಲಸದ ಪೂರ್ಣಗೊಂಡ ಅವಧಿ: 12 ತಿಂಗಳುಗಳು. ನಿರ್ವಹಣೆ ಅವಧಿ: ಇಲ್ಲ. www.ireps.gov.in ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಿದ ಟೆಂಡರ್ ಅನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: 11-2026-SrDENCo-22.05.2026 15.00 ಗಂಟೆಗಳವರೆಗೆ. 06-2026-SrDENC 20.05.2026 15.00 ಗಂಟೆಗಳವರೆಗೆ. www.ireps.gov.in ನಲ್ಲಿ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ 09-2026-SrDENCo-22.05.2026 15.30 ಗಂಟೆಗಳವರೆಗೆ. 06-2026-SrDENC - 20.05.2026 15.30 ಗಂಟೆಗಳವರೆಗೆ. ಸಂಭಾವ್ಯ ಟೆಂಡರ್‌ದಾರರು ಟೆಂಡರ್ ಮುಕ್ತಾಯದ ದಿನಾಂಕದ ಮೊದಲು ವೆಬ್‌ಸೈಟ್‌ಗೆ ಆಗಾಗ್ಗೆ ಭೇಟಿ ನೀಡಬೇಕೆಂದು ಸೂಚಿಸಲಾಗಿದೆ, ಟೆಂಡರ್‌ಗಾಗಿ ನೀಡಲಾದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳನ್ನು ಗಮನಿಸಲು, ವೆಬ್‌ಸೈಟ್: www.ireps.gov.in
DRM (C), ಸೋಲಾಪುರ

ರೈಲ್ವೆ ಮಾರ್ಗಗಳಿಂದ ನಿಮ್ಮ ಪ್ರಾಣಿಗಳನ್ನು ದೂರವಿಡಿ. 16

ಸಾಲಬಾಧೆ ರೈತ ಆತ್ಮಹತ್ಯೆ

ಅಫಜಲಪುರ: ಕೃಷಿ ಚಟುವಟಿಕೆ ಹಾಗೂ ಮನೆಯ ಅಡಚಣೆಗಾಗಿ ಮಾಡಿದ ಸಾಲ ಮರುಪಾವತಿಸಲಾಗದೆ ಮನನೊಂದು ರೈತ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಬಿಲ್ವಾಡ(ಕೆ) ಗ್ರಾಮದಲ್ಲಿ ನಡೆದಿದೆ. ಮೃತ ರೈತನನ್ನು ಶ್ರೀಶೈಲ್ ಹೂಗಾರ(39) ಎಂದು ಗುರುತಿಸಲಾಗಿದ್ದು ಮೃತನ ತಾಯಿ ನೀಲಮ್ಮ ಹೂಗಾರ ದೂರು ದಾಖಲು ಮಾಡಿದ್ದಾರೆ. 3ರಂದು ರಾತ್ರಿ 10 ಗಂಟೆ ವೇಳೆಗೆ ಹೊಲಕ್ಕೆ ಹೋಗುತ್ತೇನೆ ಎಂದು ಹೇಳಿ ಮನೆಯಿಂದ ಹೋದ ಶ್ರೀಶೈಲ್ ಹೂಗಾರ ಜಮೀನಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 4ರಂದು ಬೆಳಿಗ್ಗೆ 9 ಗಂಟೆಗೆ ಹೊಲಕ್ಕೆ ರೊಟ್ಟಿ ಬುತ್ತಿ ತೆಗೆದುಕೊಂಡು ಹೋದಾಗ ನೇಣು ಬಿಗಿದ ಸ್ಥಿತಿಯಲ್ಲಿ ಮಗನನ್ನು ನೋಡಿದ್ದೇನೆ ಎಂದು ತಾಯಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಸರ್ಕಾರಿ ಶಾಲೆಗಳ ಭರ್ಜರಿ ಸಾಧನೆ

ಜಿಪಂ ಸಿಇಓ ಭಂವರ್‌ಸಿಂಗ್ ಮೀನಾ ಹೇಳಿಕೆ | ಎಸ್.ಎಸ್.ಎಲ್.ಸಿ ಫಲಿತಾಂಶ

ಸಂ.ಕ. ಸಮಾಚಾರ ಕಲಬುರಗಿ: ಜಿಲ್ಲೆಯ ಸರ್ಕಾರಿ ಶಾಲೆಗಳು ಈ ಬಾರಿ ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿವೆ. ಜಿಲ್ಲೆಯು ಒಟ್ಟಾರೆಯಾಗಿ ಶೇ. 85.94 ರಷ್ಟು ಫಲಿತಾಂಶವನ್ನು ಹೊಂದುವ ಮೂಲಕ ರಾಜ್ಯ ಸರಾಸರಿಗಿಂತ ಶೇ. 9.9 ರಷ್ಟು ಅಧಿಕ ಸಾಧನೆ ಮಾಡಿ, ರಾಜ್ಯದಲ್ಲೇ ಅತಿ ಹೆಚ್ಚು ಸುಧಾರಣೆ ಕಂಡ ಎರಡನೇ ಜಿಲ್ಲೆಯಾಗಿ ಕಲಬುರಗಿ ಹೊರಹೊಮ್ಮಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭಂವರ್ ಸಿಂಗ್ ಮೀನಾ ತಿಳಿಸಿದ್ದಾರೆ.

ನಗರದ ಜಿಪಂ ಹೊಸ ಸಭಾಂಗಣದಲ್ಲಿ ಮಂಗಳವಾರ 2025-26ನೇ ಸಾಲಿನ ಜಿಲ್ಲಾವಾರು ಮತ್ತು ತಾಲೂಕುವಾರು ಪರೀಕ್ಷಾ ಫಲಿತಾಂಶದಲ್ಲಿ ಜಿಲ್ಲೆಯ ಸರಕಾರಿ ಶಾಲೆಗಳು ಫಲಿತಾಂಶದಲ್ಲಿ ಭಾರೀ ಏರಿಕೆ ಕುರಿತು ಎಲ್ಲಾ ಸರಕಾರಿ ಶಾಲೆಯ ಮುಖ್ಯೋಪಾಧ್ಯಾಯ-ರಿಗೆ ಸನ್ಮಾನಿಸಿ ಮಾತನಾಡಿದ ಅವರು, 298 ಸರ್ಕಾರಿ ಪ್ರೌಢಶಾಲೆಗಳ ಪೈಕಿ ಜಿಲ್ಲೆಯ ಒಟ್ಟು 109 ಶಾಲೆಗಳು ಶೇ. 100 ಫಲಿತಾಂಶವನ್ನು ದಾಖಲಿಸಿದ್ದು, ಅದರಲ್ಲಿ 61 ಸರ್ಕಾರಿ ಶಾಲೆಗಳಾಗಿರುವುದು ವಿಶೇಷ ಸಾಧನೆ ಮಾಡಿದೆ ಎಂದರು.

ಕಲಬುರಗಿ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಫಲಿತಾಂಶ ದೊರೆಕಿದ ಹಿನ್ನೆಲೆಯಲ್ಲಿ ಬಿಇಓ, ಮುಖ್ಯೋಪಾಧ್ಯಾಯರನ್ನು ಗೌರವಿಸಲಾಯಿತು.

ಕಳೆದ ವರ್ಷದ ಫಲಿತಾಂಶಕ್ಕೆ ಹೋಲಿಸಿದರೆ ಈ ವರ್ಷ ಶೈಕ್ಷಣಿಕ ಪ್ರಗತಿಯಲ್ಲಿ ಸುಮಾರು ಶೇ. 15 ಅಂತರ ಸರಿದೂಗಿಸಲಾಗಿದೆ. ರಾಜ್ಯ ಸರಾಸರಿಯ ಜೊತೆ ಹೋಲಿಸಿದರೆ ಜಿಲ್ಲೆಯ ಶಾಲಾ ಶಿಕ್ಷಣದ ಫಲಿತಾಂಶದಲ್ಲಿನ ವ್ಯತ್ಯಾಸವನ್ನು ಗಮನಾರ್ಹವಾಗಿ ತಗ್ಗಿಸಲಾಗಿದೆ. ಈ ಅಭಿವೃದ್ಧಿಯ ಹಿಂದೆ ಶಿಕ್ಷಕರ, ಅಧಿಕಾರಿಗಳ ಹಾಗೂ ವಿದ್ಯಾರ್ಥಿಗಳ ಶ್ರಮವಿದ್ದು, ಮುಂಬರುವದಿನಗಳಲ್ಲಿಇನ್ನಷ್ಟುಉತ್ತಮಸಾಧನೆಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದರು. ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಸಾಧನೆಗೈದ ಸರಕಾರಿ ಶಾಲೆಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹಾಗೂ ಶಿಕ್ಷಕರನ್ನು ಸನ್ಮಾನಿಸಲಾಯಿತು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನಿರ್ದೇಶಕ ಬಸವರಾಜ ಶೆಟ್ಟಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಶಂಕರಮ್ಮ ಡವಳಗಿ ಇದ್ದರು.

2024-25ನೇ ಸಾಲಿನ ಪರೀಕ್ಷೆ-1 ರಲ್ಲಿದ್ದ ಶೇ.42.43 ರಷ್ಟು ಫಲಿತಾಂಶವು 2025-26ನೇ ಸಾಲಿನಲ್ಲಿ ಬರೋಬ್ಬರಿ ಶೇ.85.06 ಕ್ಕೆ ಏರಿಕೆಯಾಗಿದೆ. ಒಟ್ಟು 37,352 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 31,770 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಆಡಳಿತಾತ್ಮಕ ಶೈಕ್ಷಣಿಕ ಸುಧಾರಣೆಗಳು ಯಶಸ್ವಿಯಾಗಿವೆ.
■ ಭಂವರ್‌ಸಿಂಗ್ ಸಿಂಗ್ ಮೀನಾ,
ಜಿಪಂ ಸಿಇಓ

ಚಿಕ್ಕ ಜಾಹೀರಾತು

ಬೇಕಾಗಿದ್ದಾರೆ
"ವಾದಿರಾಜ ಪತ್ರಿಕೆ" ಗೆ
ಜಿಲ್ಲಾ ವರದಿಗಾರರು,
ತಾಲೂಕು ವರದಿಗಾರರು
ಬೇಕಾಗಿದ್ದಾರೆ
ಸಂಪರ್ಕಿಸಿರಿ
7795849680

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗಿರುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

ಪಾತಾಳ ಕಂಡ ತುಂಗಭದ್ರಾ ಜಲಾಶಯ: ಆತಂಕ

ಮುಂಗಾರು ಪೂರ್ವ ಕೈಕೊಟ್ಟರೆ ಕುಡಿಯುವ ನೀರಿಗೂ ಸಂಕಷ್ಟ | 10 ಟಿಎಂಸಿಗೆ ಇಳಿದ ನೀರಿನ ಮಟ್ಟ

(ವಿಶೇಷ ವರದಿ)
ಸಂ.ಕ.ಸಮಾಚಾರ ಬಳ್ಳಾರಿ

ಎರಡನೇ ಬೆಳೆಗೆ ನೀರು ಹರಿಸದೇ ಇದ್ದರೂ ತುಂಗಭದ್ರಾ ಜಲಾಶಯದ ನೀರಿನ ಮಟ್ಟ ಪಾತಾಳ ಕಂಡಿದೆ. ಸದ್ಯ ಡ್ಯಾಂನಲ್ಲಿ ಬರೀ 10 ಟಿಎಂಸಿ ನೀರು ಉಳಿಕೆಯಾಗಿದ್ದು, ಕುಡಿಯುವ ನೀರಿಗಾಗಿ ಡೆಡ್ ಸ್ಟೋರೇಜ್‌ಗೂ ಕೈ ಹಾಕುವ ಅನಿವಾರ್ಯತೆ ಇದೆ. ಮುಂಗಾರುಪೂರ್ವ ಮಳೆ ಸುರಿಯದೇ ಹೋದರೆ, ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಸೇರಿ ನೆರೆಯ ಆಂಧ್ರ, ತೆಲಂಗಾಣದ ಕೆಲ ಜಿಲ್ಲೆಗಳಲ್ಲಿ ಕುಡಿವ ನೀರಿನ ಕ್ಷಾಮ ಉಂಟಾಗಲಿದೆ.

ತುಂಗಭದ್ರಾ ಜಲಾಶಯ ಈ ಭಾಗದ ಸಂಜೀವಿನಿ. ಕುಡಿವ ಮತ್ತು ಕೃಷಿಗೆ ಆಧಾರವಾಗಿರುವ ಡ್ಯಾಂನ ಎಲ್ಲ 33 ಕ್ರಸ್ಟ್‌ಗೇಟುಗಳ ಬದಲಾವಣೆ ಹಿನ್ನೆಲೆಯಲ್ಲಿ ಸಂಗ್ರಹಿತ ನೀರನ್ನು ನದಿ ಮೂಲಕ ಹೊರ ಹರಿಸಲಾಗಿದೆ. ಮೇ.5ರ ಅಂಕಿ-ಸಂಖ್ಯೆಗಳ ಪ್ರಕಾರ 10 ಟಿಎಂಸಿ ನೀರು ಉಳಿಕೆಯಾಗಿದ್ದು ಇದರಲ್ಲಿ 2 ಟಿಎಂಸಿ ಡೆಡ್ ಸ್ಟೋರೇಜ್ ಹಾಗೂ ಎವಪರೇಷನ್(ಬಿಸಿಲಿಗೆ ನೀರು ಆವಿಯಾಗಿ ಹೋಗುವ ಪ್ರಮಾಣ) ಲಾಸ್ ಆಗಿದ್ದು, ಉಳಿದ 8 ಟಿಎಂಸಿ ನೀರು ಮಾತ್ರ ಆಂಧ್ರ-ಕರ್ನಾಟಕಕ್ಕೆ ಕುಡಿವ ಉದ್ದೇಶಕ್ಕೆ ಬಳಕೆಯಾಗಬೇಕಿದೆ.

7.50 ಟಿಎಂಸಿ ಕರ್ನಾಟಕಕ್ಕೆ

8 ಟಿಎಂಸಿಯಲ್ಲಿ 1.25 ಟಿಎಂಸಿ ಆಂಧ್ರ ಕೋಟಾ ಉಳಿದಿದ್ದು, ಕರ್ನಾಟಕದ ಪಾಲು 7.5 ಟಿಎಂಸಿ ಆಗಿದೆ. ಇದರಲ್ಲಿ ಬಚಾವತ್ ಆಯೋಗದ ಪ್ರಕಾರ ರಾಯ ಮತ್ತು ಬಸವ ಕಾಲುವೆಗೆ 365 ದಿನವೂ ನೀರು ಹರಿಸಬೇಕಾದ ಹಿನ್ನೆಲೆಯಲ್ಲಿ 1.5 ಟಿಎಂಸಿ ನೀರನ್ನು ಈ ಕಾಲುವೆಗಳಿಗೆ ಮೀಸಲಿರಿಸಲಾಗಿದೆ. 5 ಟಿಎಂಸಿಯಲ್ಲಿ ವಿಜಯನಗರ, ಕೊಪ್ಪಳ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಕುಡಿವ ನೀರಿನ ದಾಹ ತೀರಿಸುವ ಶ್ರಮ ಟಿಬಿ ಬೋರ್ಡ್, ನೀರಾವರಿ ಇಲಾಖೆ ಸೇರಿ ನಾಲ್ಕೂ ಜಿಲ್ಲಾಡಳಿತಗಳ ಹೆಗಲೇರಿದೆ.

ಈಗಾಗಲೇ ಎರಡು ಬಾರಿ ಕಾಲುವೆಗಳಿಗೆ ನೀರು ಹರಿಸಿ ಕೆರೆಗಳನ್ನು ತುಂಬಿಸಿ ಕುಡಿವ ನೀರು ಸರಬರಾಜು ಮಾಡಲಾಗಿದೆ. ಬಹುತೇಕ ಕೆರೆಗಳು ಖಾಲಿಯಾಗಿದ್ದು, ಕಾಲುವೆ ಅವಲಂಬಿತ ಹಳ್ಳಿಗಳಲ್ಲಿ ಈಗಲೇ ನೀರಿನ ಸಮಸ್ಯೆ ಬಿಗಡಾಯಿಸಿದೆ. ಮೇ 10ರೊಳಗೆ ನೀರು ಹರಿಸುವಂತೆ ಗ್ರಾ.ಪಂ.ಗಳಿಂದ ಆಯಾ ಜಿಲ್ಲೆಗಳ ಜಿಲ್ಲಾಡಳಿತಕ್ಕೆ ಒತ್ತಡ ಹೇರಲಾಗುತ್ತಿದೆ. ಅಷ್ಟರೊಳಗೆ ನೀರು ಹರಿಸಿದರೆ ಕುಡಿವ ನೀರಿಗಾಗಿ ಜಲಾಶಯದಲ್ಲಿ ಕಾಯ್ದಿಟ್ಟ 5 ಟಿಎಂಸಿ ನೀರು ಖಾಲಿಯಾಗಲಿದ್ದು, ಮುಂಗಾರು ಪೂರ್ವ ಮಳೆ ಆಗದೇ ಇದ್ದರೆ ಡ್ಯಾಂನಲ್ಲಿನ ಡೆಡ್ ಸ್ಟೋರೇಜ್ ನೀರನ್ನು ಬಳಸಬೇಕಾದ ಅನಿವಾರ್ಯತೆ ಎದುರಾಗಲಿದೆ ಎನ್ನುವ ಆತಂಕ ನೀರಾವರಿ ಇಲಾಖೆ ಅಧಿಕಾರಿಗಳಲ್ಲಿ ಮನೆ ಮಾಡಿದೆ.

ಡೆಡ್ ಸ್ಟೋರೇಜ್‌ಗೂ ಕೈ

ಬರೀ 5 ಟಿಎಂಸಿ ನೀರಿನಲ್ಲಿ ನಾಲ್ಕು ಜಿಲ್ಲೆಗಳ ಕುಡಿವ ನೀರಿನ ಸಮಸ್ಯೆ ಬಗೆಹರಿಯದು ಎನ್ನುವ ಅಂಶ ಈಗ ಟಿಬಿ ಬೋರ್ಡ್ ಹಾಗೂ ನೀರಾವರಿ ಇಲಾಖೆ ಎಂಜಿನಿಯರ್‌ಗಳಲ್ಲಿ ಭೀತಿ ಸೃಷ್ಟಿಸಿದೆ. ಎಷ್ಟೇ ಲೆಕ್ಕಾಚಾರ ಹಾಕಿ ನೀರು ಹರಿಸಿದರೂ ಡೆಡ್ ಸ್ಟೋರೇಜ್‌ನ ನೀರಿಗೆ ಕೈ ಹಾಕಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಆದರೆ ಡೆಡ್ ಸ್ಟೋರೇಜ್ ನೀರನ್ನು ಬಳಸಬಾರದು ಎನ್ನುವುದು ತಜ್ಞರ ವಾದವಾಗಿದೆ. ಡೆಡ್ ಸ್ಟೋರೇಜ್ ಜಲಾಶಯದಲ್ಲಿನ ನೀರು ಬಳಸಿದರೆ ಜಲಚರಗಳು, ಡ್ಯಾಂನ ಸುರಕ್ಷತೆ, ಅಂತರ್ಜಲ ಕುಸಿತಕ್ಕೆ ದಾರಿಯಾಗಲಿದೆ ಎನ್ನುವ ಆತಂಕಗಳಿವೆ.

ಪ್ಯಾಲಿಯೇಟಿವ್ ಕೇರ್ ಕೇಂದ್ರ ರಾಜ್ಯಾದ್ಯಂತ ವಿಸ್ತರಣೆ: ದಿನೇಶ್

ಸಂ.ಕ.ಸಮಾಚಾರ, ಬೆಂಗಳೂರು

ರೋಗಿಗಳು ಚಿಕಿತ್ಸೆಗೆ ಸ್ಪಂದಿಸದೇ ಇರುವ ಹಂತದಲ್ಲಿ, ಅಸಾಧಾರಣ ನೋವು, ಮಾನಸಿಕ ಒತ್ತಡದಿಂದ ಬಳಲುವ ರೋಗಿಗಳ ಮತ್ತು ಅಂತಹ ರೋಗಿಗಳ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ಪ್ಯಾಲಿಯೇಟಿವ್ ಕೇರ್ ಕೇಂದ್ರ ವರದಾನವಾಗಲಿದೆ. ಇಂಥಹ ಆರೈಕೆ ಕೇಂದ್ರವನ್ನು ರಾಜ್ಯಾದ್ಯಂತ ಆರಂಭಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಮಲ್ಲೇಶ್ವರಂ ಕೆಸಿ ಜನರಲ್ ಆಸ್ಪತ್ರೆಯಲ್ಲಿ ಮಂಗಳವಾರ ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಸ್ಥಾಪಿಸಲಾದ "ಪ್ಯಾಲಿಯೇಟಿವ್ ಕೇರ್ ಯುನಿಟ್" ಉದ್ಘಾಟಿಸಿ ಅವರು ಮಾತನಾಡಿದ ಅವರು, ರಾಜ್ಯಾದ್ಯಂತ ಪ್ಯಾಲಿಯೇಟಿವ್ ಕೇರ್ ಕೇಂದ್ರ ವಿಸ್ತರಣೆಗೆ ಚಿಂತನೆ ಇದೆ ಎಂದರು.

ಪ್ಯಾಲಿಯೇಟಿವ್ ಕೇರ್ ಕೇಂದ್ರದಲ್ಲಿ ಚಿಕಿತ್ಸೆ ನೀಡುವುದಿಲ್ಲ. ರೋಗಿಗಳ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ನೆರವಾಗುತ್ತದೆ.

ಉದ್ಘಾಟನೆಗೊಂಡ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್‌ಗಳ ಒಂದು ವಾರ್ಡ್ ನಿರ್ಮಾಣ ಮಾಡಿದ್ದೇವೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಕಾರಿಯಾಗುತ್ತದೆ ಎಂದರು.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಸರನಂ ಸಂಸ್ಥೆಯ ಸಹಕಾರದೊಂದಿಗೆ ಉದ್ಘಾಟನೆಯಾದ ಈ ಯುನಿಟ್‌ನಲ್ಲಿ ತಜ್ಞರ ತಂಡದಿಂದ ಹೊರರೋಗಿ ವಿಭಾಗ, ಡೇ ಕೇರ್ ವಿಭಾಗ, ಸುಸಜ್ಜಿತ ಒಳರೋಗಿ ವಿಭಾಗ ಮತ್ತು ಕೆ.ಸಿ ಜನರಲ್ ಆಸ್ಪತ್ರೆಯಿಂದ 5-8 ಕಿಲೋ ವ್ಯಾಪ್ತಿಯಲ್ಲಿ ಮನೆಗೆ ತೆರಳಿ ಆರೈಕೆ ಮಾಡುವ ಮತ್ತು ಆರೈಕೆಗೆ ಪೂರಕ ತರಬೇತಿ ನೀಡುವ ಮೊಬೈಲ್ ಯುನಿಟ್ ಸಹ ಇರಲಿದೆ. ಮಾನವೀಯತೆ ದೃಷ್ಟಿಯಿಂದ ಈ ಸೇವೆ ನೀಡಲಾಗುತ್ತಿದ್ದು ಸಾರ್ವಜನಿಕರು ಇದರ ಉಪಯೋಗ ಪಡೆಯಬೇಕೆಂದು ತಿಳಿಸಿದರು.

ಕಾರ್ಮಿಕರ ಮಕ್ಕಳಿಗೆ ₹8,736 ಮೌಲ್ಯದ ಶಾಲಾಕಿಟ್

ಸುಮಾರು 1.3 ಲಕ್ಷ ಫಲಾನುಭವಿಗಳು | ಈ ಯೋಜನೆಗೆ 115.8 ಕೋಟಿ ರೂ. ವೆಚ್ಚ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದ ನೋಂದಾಯಿತ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ತಲಾ 8,736 ರೂ. ಮೌಲ್ಯದ ಶಾಲಾ ಕಿಟ್‌ಗಳನ್ನು ನೀಡಲು ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಕಾರ್ಮಿಕ ಇಲಾಖೆ ನಿರ್ಧರಿಸಿದೆ.

ಈ ಯೋಜನೆಗಾಗಿ ಸುಮಾರು 1.3 ಲಕ್ಷ ಫಲಾನುಭವಿಗಳನ್ನು ಗುರುತಿಸಲಾಗಿದೆ. ಕಿಟ್‌ಗಳ ಖರೀದಿ ಮತ್ತು ವಿತರಣೆಗಾಗಿ 115.8 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಪ್ರಸ್ತಾವನೆಗೆ ಕಳೆದ ವಾರ ಸಚಿವ ಸಂಪುಟ ಅನುಮೋದನೆ ನೀಡಿದೆ. 2021ರಲ್ಲಿ ಶಾಲಾ ಕಿಟ್ ಖರೀದಿ ವೆಚ್ಚವನ್ನು ಖರೀದಿ ಬೆಲೆಗಿಂತ ಹೆಚ್ಚಾಗಿ ತೋರಿಸುವ ಮೂಲಕ ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ಈಗ ಈ ಯೋಜನೆಯನ್ನು ಮತ್ತೆ ಮರು ಪ್ರಾರಂಭ ಮಾಡಲಾಗಿದೆ. ಪ್ರತಿ ಕಿಟ್‌ನಲ್ಲಿ ಸುಮಾರು 23 ವಸ್ತುಗಳು ಇರುತ್ತವೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಕಾಮಿಕ್ ಪುಸ್ತಕಗಳಿಂದ ಹಿಡಿದು ವ್ಯಾಕರಣ ಪಾಠಪುಸ್ತಕಗಳು, ಥರ್ಮೋ ಫ್ಲಾಸ್ಕ್‌ಗಳು ಹಾಗೂ ಚಿಕ್ಕ ಮಕ್ಕಳಿಗಾಗಿ ಆಟದ ಮಣ್ಣಿನ ವಸ್ತುಗಳವರೆಗೆ ಒಳಗೊಂಡಿರುತ್ತದೆ. ಕಿಟ್‌ಗಳು ತರಗತಿ 1ರಿಂದ 12ರವರೆಗಿನ ವಿದ್ಯಾರ್ಥಿಗಳಿಗೆ ವಯೋಮಾನದ ಪ್ರಕಾರ ವಿನ್ಯಾಸಗೊಳಿಸಲಾಗುತ್ತದೆ.

ವಿದ್ಯಾರ್ಥಿಗಳಿಗೆ ನೀಡುವ ವಸ್ತುಗಳು

1 ರಿಂದ 5ನೇ ತರಗತಿವರೆಗಿನ ಮಕ್ಕಳಿಗೆ ರೆಕ್ಸಿನ್ ಬ್ಯಾಗ್, ಪೆನ್ಸಿಲ್, ಇರೇಸರ್, ಬರವಣಿಗೆ ಪುಸ್ತಕಗಳು, ಗಣಿತ ವರ್ಕ್‌ಬುಕ್‌ಗಳು, ಕ್ರೇಯಾನ್‌ಗಳು, ಮಣ್ಣಿನ ಆಟದ ಸಾಮಗ್ರಿಗಳು, ಪೇಂಟಿಂಗ್ ಸಾಮಗ್ರಿಗಳು, ನೀರಿನ ಬಣ್ಣಗಳು, ಕಾಮಿಕ್‌ಗಳು, ರೇನ್‌ಕೋಟ್, ಸ್ಟೀಲ್ ಲಂಚ್ ಬಾಕ್ಸ್, ನೀರಿನ ಬಾಟಲ್ ಇತ್ಯಾದಿ.

6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಬ್ಯಾಗ್, ಬಾಲ್ ಪೆನ್‌ಗಳು, ಪೆನ್ಸಿಲ್, ಇರೇಸರ್, ಗ್ರಾಫ್ ಪುಸ್ತಕ, ಕ್ರೇಯಾನ್‌ಗಳು, ಪೇಂಟ್ ಬ್ರಷ್, ಸ್ಕೇಲ್, ಡ್ರಾಯಿಂಗ್ ಪುಸ್ತಕಗಳು, ಹೈಲೈಟರ್‌ಗಳು, ನಕ್ಷೆಗಳು, ಡಿಕ್ಷನರಿ, ರೇನ್‌ಕೋಟ್, ಲಂಚ್ ಬಾಕ್ಸ್, ನೀರಿನ ಬಾಟಲ್ ಇತ್ಯಾದಿ.

9 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಬ್ಯಾಗ್, ಬಾಲ್ ಪೆನ್‌ಗಳು, ಗ್ರಾಫ್ ಪುಸ್ತಕ, ಕಾಂಪಾಸ್ ಬಾಕ್ಸ್, ಸ್ಟೇಪ್ಲರ್, ಕಥೆ ಪುಸ್ತಕಗಳು, ಕಾರ್ಡ್‌ಬೋರ್ಡ್ ಪ್ಯಾಡ್, ಛತ್ರಿ, ಥರ್ಮೋ ಸ್ಟೀಲ್ ಬಾಟಲ್, ಲಂಚ್ ಬಾಕ್ಸ್ ಇತ್ಯಾದಿ. ಗುಣಮಟ್ಟವನ್ನು ಖಚಿತಪಡಿಸಲು, ಇಲಾಖೆಯು ಟೆಂಡರ್ ಪ್ರಕ್ರಿಯೆಯನ್ನು ಬಿಟ್ಟು ವಿನಾಯಿತಿ ಪಡೆಯಲು ಯೋಜಿಸಿದೆ. ಇದರಿಂದ "ಲೇಖಕ್"ಬ್ರಾಂಡ್ ಪುಸ್ತಕಗಳನ್ನು ಮಾತ್ರ ಪೂರೈಕೆ ಮಾಡಲಾಗುತ್ತದೆ.

ಅಧಿಕಾರಿಗಳ ಪ್ರಕಾರ, ಕೆಲವು ವಸ್ತುಗಳ ಬೆಲೆ ಹೆಚ್ಚು ಕಾಣಬಹುದು, ಆದರೆ ಅವುಗಳನ್ನು ವರ್ಷಪೂರ್ತಿ ಬಳಸುವಂತೆ ಉತ್ತಮ ಗುಣಮಟ್ಟದಲ್ಲಿ ನೀಡಲಾಗುತ್ತದೆ. ಉದಾಹರಣೆಗೆ, 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ 10 ಕಾಮಿಕ್ ಪುಸ್ತಕಗಳ ಸೆಟ್ ರೂ.895ಕ್ಕೆ ನೀಡಲಾಗುತ್ತದೆ. ಅದೇ ರೀತಿ, 10 ಪೆನ್‌ಗಳ ಬಾಕ್ಸ್ ರೂ.90 ಆಗಿದ್ದು, ಇದರಿಂದ ಪ್ರತಿ ವಿದ್ಯಾರ್ಥಿಯ ವೆಚ್ಚ ಮಧ್ಯಮ ಶಾಲೆಗೆ ರೂ.179 ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ರೂ.268 ಆಗುತ್ತದೆ.

> ರಾಜ್ಯದ ಕಾರ್ಮಿಕರ ಮಕ್ಕಳಿಗೆ ಶಾಲಾ ಕಿಟ್‌ಗಳನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮೂಲಕ ಪೂರೈಕೆ ಮಾಡಲಾಗುತ್ತದೆ. ಎಂಎಸ್‌ಐಎಲ್ ಟೆಂಡರ್ ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ. ಇದರ ಖರೀದಿ ವೆಚ್ಚವನ್ನು ಕಲ್ಯಾಣ ಮಂಡಳಿ ಭರಿಸುತ್ತದೆ.
> ▪ ಸಂತೋಷ್ ಲಾಡ್, ಕಾರ್ಮಿಕ ಸಚಿವ

ವಿದ್ಯಾರ್ಥಿಗಳ ಸಂಖ್ಯೆ		ಪ್ರತಿ ಕಿಟ್ ವೆಚ್ಚ
ತರಗತಿ 1 ರಿಂದ5:	45,000	8,706 ರೂ.
ತರಗತಿ 6 ರಿಂದ 8:	35,000	8,281 ರೂ
ತರಗತಿ 9 ರಿಂದ 12:	50,000	9,536 ರೂ
ಒಟ್ಟು	1.3 ಲಕ್ಷ	115.8 ಕೋ.ರೂ.

ಇಂಜಿನಿಯರಿಂಗ್ ಕಾಲೇಜು ಆರಂಭಕ್ಕೆ 10 ಅರ್ಜಿ ಸಲ್ಲಿಕೆ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಇಂಜಿನಿಯರಿಂಗ್ ಪ್ರವೇಶಕ್ಕೆ ಬೇಡಿಕೆ ಕುಸಿಯುತ್ತಿದ್ದರೂ, ಖಾಲಿ ಸೀಟುಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಪರಿಸ್ಥಿತಿಯಲ್ಲಿಯೂ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 2026-27ರ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಕಾಲೇಜುಗಳನ್ನು ಆರಂಭಿಸಲು ಖಾಸಗಿ ಆಡಳಿತ ಮಂಡಳಿಗಳಿಂದ 10 ಅರ್ಜಿಗಳನ್ನು ಸ್ವೀಕರಿಸಿದೆ.ಈ ಅರ್ಜಿಗಳ ಪೈಕಿ ಆರು ಬೆಂಗಳೂರು ನಗರದಿಂದ, ತಲಾ ಒಂದೊಂದು ಅರ್ಜಿಗಳು ದೊಡ್ಡಬಳ್ಳಾಪುರ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಬ್ಬಳ್ಳಿ ಮತ್ತು ವಿಜಯಪುರದಿಂದ ಬಂದಿವೆ. ಪ್ರತಿಯೊಂದು ಕಾಲೇಜು 120 ಆಸನಗಳ ಅನುಮತಿಯನ್ನು ಕೇಳಿದೆ.

ಸಚಿವರ ಆಶ್ಚರ್ಯ: ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಈ ಅರ್ಜಿಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿದ್ದು, ಜನರು ಏಕೆ ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ಆರಂಭಿಸುತ್ತಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ವಿಟಿಯು ಮುಂದೆ ಈ ವರ್ಷವೂ ಕೆಲವು ಅರ್ಜಿಗಳು ಬಂದಿರುವುದು ನನಗೆ ಆಶ್ಚರ್ಯವಾಗಿದೆ ಎಂದರು.ಪ್ರತಿ ವರ್ಷ ಹಲವಾರು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ತಮ್ಮಿಂದಲೇ ಆಸನಗಳನ್ನು ತುಂಬಲು ಸಾಧ್ಯವಾಗದೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೀಟುಗಳನ್ನು ಒಪ್ಪಿಸುತ್ತಿವೆ. ಪ್ರವೇಶಗಳು ಕುಸಿದಿದ್ದರೂ ಮತ್ತು ಸೀಟುಗಳು ಖಾಲಿಯಾಗಿದ್ದರೂ, ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ 25 ಹೊಸ ಇಂಜಿನಿಯರಿಂಗ್ ಕಾಲೇಜುಗಳು ಆರಂಭಗೊಂಡಿದ್ದು, ಅವುಗಳಲ್ಲಿ ಕೇವಲ ಒಂದು ಮಾತ್ರ ಮುಚ್ಚಲಾಗಿದೆ ಎಂದರು. ಕೃತಕ ಬುದ್ಧಿಮತ್ತೆಯಿಂದ ಉದ್ಯೋಗಗಳಿಗೆ ಅಪಾಯ ಇದೆ ಎಂದು ಕೈಗಾರಿಕೆ ಹೇಳುತ್ತಿರುವ ಸಂದರ್ಭದಲ್ಲಿ, ಹೊಸ ಕಾಲೇಜುಗಳ ಸಂಖ್ಯೆ ಹೆಚ್ಚುತ್ತಿರುವುದು ಒಳ್ಳೆಯ ಸಂಕೇತ ಎಂದು ವಿಟಿಯು ಉಪಕುಲಪತಿ ವಿದ್ಯಾಶಂಕರ್ ಎಂದು ಹೇಳಿದರು. ಕಳೆದ ನಾಲ್ಕು ವರ್ಷಗಳಲ್ಲಿ ನಾವು ನಾಲ್ಕರಿಂದ ಐದು ಅರ್ಜಿಗಳನ್ನು ಮಾತ್ರ ಪಡೆಯುತ್ತಿದ್ದೇವೆ. ಆದರೆ ಈ ವರ್ಷ ಸಂಖ್ಯೆ ದ್ವಿಗುಣವಾಗಿದೆ. ಇದರಿಂದ ಇಂದಿನ ಕೈಗಾರಿಕಾ ಬೇಡಿಕೆಗಳಿಗೆ ತಕ್ಕಂತೆ ನವೀಕೃತ ಕೌಶಲ್ಯ ಮತ್ತು ಜ್ಞಾನ ಹೊಂದಿರುವ ಇಂಜಿನಿಯರ್‌ಗಳ ಅಗತ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದರು.2025ರಲ್ಲಿ 15,000ಕ್ಕೂ ಹೆಚ್ಚು ಇಂಜಿನಿಯರಿಂಗ್ ಸೀಟುಗಳು ಖಾಲಿಯಾಗಿದ್ದು, ಅದರಲ್ಲಿ 9,000 ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ವಿಷಯಗಳಿಗೆ ಸೇರಿದ್ದವು ಎಂದು ಮಾಹಿತಿ ನೀಡಿದರು.

ಕೇಂದ್ರ ಚುನಾವಣಾ ಆಯುಕ್ತರಿಂದಲೇ ಬಿಜೆಪಿಗೆ ಗೆಲುವು: ಸಚಿವ ಲಾಡ್ ಕಿಡಿ

ಸಂ.ಕ. ಸಮಾಚಾರ ಬೆಂಗಳೂರು

ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಕೇಂದ್ರ ಚುನಾವಣೆ ಆಯುಕ್ತ ಜ್ಞಾನೇಶ್ ಕುಮಾರ್‌ರಿಂದ ಬಿಜೆಪಿಗೆ ಗೆಲುವಾಗಿದೆ ಎಂದು ಸಚಿವ ಸಂತೋಷ್ ಲಾಡ್ ಚುನಾವಣಾ ಆಯೋಗದ ವಿರುದ್ಧ ಕಿಡಿಕಾರಿದ್ದಾರೆ. ಪಂಚರಾಜ್ಯ ಚುನಾವಣೆ ಮತ್ತು ಉಪ ಚುನಾವಣೆ ಫಲಿತಾಂಶದ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಉಪ ಚುನಾವಣೆಯಲ್ಲಿ ನಿರೀಕ್ಷೆಯಂತೆ 2 ಕ್ಷೇತ್ರದಲ್ಲಿ ನಾವು ಗೆದ್ದಿದ್ದೇವೆ. ಸರ್ಕಾರದ ಕಾರ್ಯಕ್ರಮ ಅದರ ಜೊತೆ ಕಾರ್ಯಕರ್ತರು, ಮುಖಂಡರ ಕೆಲಸದಿಂದ ಜನ ಮತ ಹಾಕಿ ಗೆಲ್ಲಿಸಿದ್ದಾರೆ ಎಂದು ತಿಳಿಸಿದರು. ಅಸ್ಸಾಂನಲ್ಲಿ ಮ್ಯಾನ್ ಆಫ್ ದಿ ಮ್ಯಾಚ್, ಮ್ಯಾನ್ ಆಫ್ ದಿ ಸಿರಿಸ್ ಜ್ಞಾನೇಶ್ ಕುಮಾರ್ ಇದ್ದಾರೆ. ಅದರ ಬಗ್ಗೆ ಮಾಹಿತಿ ಕೊಡುತ್ತೇವೆ. ಪಶ್ಚಿಮ ಬಂಗಾಳ 90 ಲಕ್ಷ ವೋಟ್ ಡಿಲೀಟ್ ಮಾಡಿ, ಬೇಕಾದ ಕಡೆ ವೋಟ್ ಡಿಲೀಟ್ ಮಾಡಿದ್ದಾರೆ. ಟಿಎಂಸಿ ಸೋಲಿಸುವ ವ್ಯವಸ್ಥೆ ಮಾಡಿದ್ದಾರೆ. ಆಡಳಿತ ವಿರೋಧಿ ಅಲೆ ಕೂಡಾ ಇತ್ತು. ಕೆಲಸದ ಮೇಲೆ ಮತ ಕೇಳದೇ ಜ್ಞಾನೇಶ್ ಕುಮಾರ್ ಮೂಲಕ ವಂಚನೆ ಮಾಡಿ ಗೆದ್ದಿದ್ದಾರೆ ಎಂದಿದ್ದಾರೆ.

ಕಬ್ಬು ರೈತರ ನೆರವಿಗೆ ಕೇಂದ್ರ: ₹ 365 ಎಫ್‌ಆರ್‌ಪಿಗೆ ಅಸ್ತು

ಕರ್ನಾಟಕದ 8-10 ಲಕ್ಷ ರೈತರಿಗೆ ಪ್ರಯೋಜನ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ಸಂ.ಕ.ಸಮಾಚಾರ, ನವದೆಹಲಿ

ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ಬೆಂಬಲಕ್ಕೆ ನಿಂತ ಬೆನ್ನಲ್ಲೇ ಕೇಂದ್ರ ಸರ್ಕಾರ ಇದೀಗ ಕಬ್ಬು ಬೆಳೆಗಾರರಿಗೂ ಬೆಂಬಲ ಬೆಲೆ ಹೆಚ್ಚಿಸಿ ನೆರವಿಗೆ ಬಂದಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟ 2026-27ನೇ ಹಂಗಾಮಿಗೆ ಕಬ್ಬಿಗೆ ಶೇ.10.25 ಮೂಲ ರಿಕವರಿ ದರದ ಮೇಲೆ ಪ್ರತಿ ಕ್ವಿಂಟಲ್‌ಗೆ 365 ರೂ. ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆಯನ್ನು (ಎಫ್‌ಆರ್‌ಪಿ) ಅನುಮೋದಿಸಿದೆ.

ಇದರಿಂದ ಕರ್ನಾಟಕದ ಸರಿ ಸುಮಾರು 8 ರಿಂದ 10 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದಿದ್ದಾರೆ.

ರಿಕವರಿ ಕಡಿಮೆ ಇದ್ರೂ ಬೆಂಬಲ ಬೆಲೆ: ಕಬ್ಬಿನ ರಿಕವರಿಯಲ್ಲಿ ಶೇ.0.1 ಏರಿಕೆಗೆ 3.56 ರೂ. ಪ್ರತಿ ಕ್ವಿಂಟಲ್ ಹೆಚ್ಚುವರಿ ಪ್ರೋತ್ಸಾಹಧನ ನೀಡುವುದರ ಜತೆಗೆ ರಿಕವರಿ ಶೇ.9.5 ಅಥವಾ ಅದಕ್ಕಿಂತ ಕಡಿಮೆ ಇದ್ದರೂ ಯಾವುದೇ ಕಡಿತವಿಲ್ಲದೆ ಪ್ರತಿ ಕ್ವಿಂಟಲ್ ಗೆ 338.3 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಕೇಂದ್ರ ಸರ್ಕಾರದ ಈ ಮಹತ್ವದ ನಿರ್ಧಾರದಿಂದ ದೇಶದ ಸುಮಾರು 5 ಕೋಟಿ ಕಬ್ಬು ಬೆಳೆಗಾರರು ಮತ್ತವರ ಕುಟುಂಬಗಳಿಗೆ ನೆರವಾಗಲಿದೆ. ಅದರಂತೆ ಕರ್ನಾಟಕದಲ್ಲೂ ಸುಮಾರು 8-10 ಲಕ್ಷ ರೈತರು ಈ ಎಫ್‌ಆರ್‌ಪಿ ದರದ ಲಾಭ ಪಡೆಯಲಿದ್ದಾರೆ ಎಂದಿದ್ದಾರೆ.

ಕೇಂದ್ರದ ಈ ನಿರ್ಣಯ ಕಬ್ಬು ಬೆಳೆಗಾರರು ಮಾತ್ರವಲ್ಲದೆ, ಸಕ್ಕರೆ ಕಾರ್ಖಾನೆಗಳು ಹಾಗೂ ಸಕ್ಕರೆ ಉದ್ಯಮದ 5 ಲಕ್ಷಕ್ಕೂ ಅಧಿಕ ಕಾರ್ಮಿಕರಿಗೂ ನೆರವಾಗಲಿದೆ. ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ ಮೂಲಕ ಸಮಸ್ತ ಸಕ್ಕರೆ ಉದ್ಯಮ ಮತ್ತು ಕೃಷಿ ಕ್ಷೇತ್ರವನ್ನು ಮತ್ತಷ್ಟು ಸಶಕ್ತಗೊಳಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಬದ್ಧತೆ ತೋರಿದ್ದಾರೆ ಎಂದು ಸಚಿವ ಜೋಶಿ ಪ್ರತಿಪಾದಿಸಿದ್ದಾರೆ.

ರಾಜ್ಯದ ಬೆಳಗಾವಿ, ಬಾಗಲಕೋಟೆ, ಮಂಡ್ಯ, ಮೈಸೂರು, ವಿಜಯಪುರ ಮತ್ತು ಬಳ್ಳಾರಿ, ದಾವಣಗೆರೆ, ಬೀದರ್ ಹೀಗೆ ವಿವಿಧ ಜಿಲ್ಲೆಗಳು ಕಬ್ಬು ಬೆಳೆಯುವಲ್ಲಿ ಮುಂಚೂಣಿಯಲ್ಲಿದ್ದು, ದೇಶದ ಒಟ್ಟು ಸಕ್ಕರೆ ಉತ್ಪಾದನೆಯ ಶೇ.16 ರಷ್ಟು ಕರ್ನಾಟಕದ ಪಾಲಿದೆ. ಹೀಗಾಗಿ ಈ ಎಫ್‌ಆರ್‌ಪಿ ಹೆಚ್ಚಳವು ರಾಜ್ಯದ ಪಾಲಿಗೂ ಅನನ್ಯ ಕೊಡುಗೆಯಾಗಿದೆ ಎಂದು ಹೇಳಿದ್ದಾರೆ.

ಗ್ರಾಮೀಣರ ನೀರಿನ ಸಮಸ್ಯೆಗೆ ₹208.67 ಕೋ. ಬಿಡುಗಡೆ

ಸಂ.ಕ. ಸಮಾಚಾರ ಬೆಂಗಳೂರು

ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಅಭಾವವನ್ನು ತಗ್ಗಿಸಲು ಸರ್ಕಾರವು ಸಮರೋಪಾದಿಯಲ್ಲಿ ಕ್ರಮ ಕೈಗೊಂಡಿದ್ದು, ಮಾರ್ಚ್ 2026 ರಿಂದ ಇಂದಿನವರೆಗೆ 208.67 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು, ತುರ್ತು ಕಾಮಗಾರಿಗಳಿಗಾಗಿ ಮತ್ತೆ 72 ಕೋಟಿಗಳ ರೂ.ಗಳ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಪ್ರಸಕ್ತ ಸಾಲಿನ ಹೊಸ ಕಾಮಗಾರಿಗಳ ಜೊತೆಗೆ, ಈ ಹಿಂದೆ ಟಾಸ್ಕ್ ಫೋರ್ಸ್ ಸಮಿತಿಯಿಂದ ಅನುಮೋದನೆ ಪಡೆದು ಪೂರ್ಣಗೊಂಡಿದ್ದ ಕಾಮಗಾರಿಗಳ ಬಾಕಿ ಪಾವತಿಗಾಗಿ ವಿನಿಯೋಗಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ತುರ್ತು ಕ್ರಮಗಳಿಗೆ ಸೂಚನೆ

ಬೇಸಿಗೆಯ ತೀವ್ರತೆಯಿಂದ ಅಂತರ್ಜಲ ಮಟ್ಟ ಕುಸಿದು ಕೊಳವೆಬಾವಿಗಳಲ್ಲಿ ನೀರು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ, ಜಿಲ್ಲಾಡಳಿತಗಳು ಲಭ್ಯವಿರುವ ಕೊಳವೆಬಾವಿಗಳನ್ನು ಫ್ಲಶಿಂಗ್ ಮಾಡಲು ಮತ್ತು ಆಳಗೊಳಿಸಲು ನಿರ್ದೇಶನ ನೀಡಲಾಗಿದೆ. ನೀರಿನ ಮೂಲಗಳಿಲ್ಲದ ಕಡೆಗಳಲ್ಲಿ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯಲು ಅಥವಾ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಅನುಮತಿ ನೀಡಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಭೂವಿಜ್ಞಾನಿಗಳ ವರದಿ ಆಧರಿಸಿ ಹೊಸ ಕೊಳವೆಬಾವಿ ಕೊರೆಯಲು ಮತ್ತು ಪಂಪಿಂಗ್ ಯಂತ್ರಗಳನ್ನು ಅಳವಡಿಸಲು ಸೂಚಿಸಲಾಗಿದೆ ಎಂದಿದ್ದಾರೆ.

ಪರಿಸ್ಥಿತಿ ಅವಲೋಕನ

ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಕೊರತೆಯುಂಟಾಗದಂತೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ನಿರಂತರವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು ಟಾಸ್ಕ್ ಫೋರ್ಸ್ ಸಭೆಗಳನ್ನು ನಡೆಸುತ್ತಿದ್ದಾರೆ, ಸರ್ಕಾರದ ಮಟ್ಟದಲ್ಲಿ ನಿಯಮಿತವಾಗಿ ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದೆ ಎಂದೂ ಸಚಿವರು ಹೇಳಿದ್ದಾರೆ. ಬೃಹತ್ ಮೊತ್ತದ ಬಿಡುಗಡೆಯಿಂದಾಗಿ ರಾಜ್ಯದ 31 ಜಿಲ್ಲೆಗಳ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ತಕ್ಷಣದ ಪರಿಹಾರ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯೋಗದ ಗೆಲುವು: ಖರ್ಗೆ ಟೀಕೆ

ಸಂ.ಕ. ಸಮಾಚಾರ ಬೆಂಗಳೂರು

ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗವನ್ನು ದುರುಪಯೋಗ ಪಡಿಸಿಕೊಂಡು ಗೆದ್ದಿರುವಂತೆ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಬಿಜೆಪಿ ಹುನ್ನಾರ ನಡೆಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಎಚ್ಚರಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಾಶ ಮಾಡಿದ್ದಾರೆ. ಆಯೋಗವನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ದುರುಪಯೋಗ ಪಡಿಸಿಕೊಂಡಿದ್ದಾರೆ. ಅಸ್ಸಾಂ ಮತ್ತು ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಗೆಲುವಲ್ಲ, ಚುನಾವಣಾ ಆಯೋಗದ ಗೆಲುವು ಎಂದು ಟೀಕಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ನಂ. ಸಿಎ-15:17, 1ನೇ ಮಹಡಿ, ಅಂಜನಾದ್ರಿ ಮುಖ್ಯರಸ್ತೆ, 2ನೇ ಫೇಸ್, 4ನೇ ಹಂತ, ವಿಜಯನಗರ ಮೈಸೂರು-570010. Phone: 0821-2543003, e-mail: dcpumysore@gmail.com

ಸಂ.ಈಮರಘಮ್ಮೈ/ಪತ್ರಿಕಾ ಪ್ರಕಟಣೆ/2026-27 ದಿನಾಂಕ: 23.04.2026

ಬಾಲಕಿ ಸೌಮ್ಯ (09 ವರ್ಷ) ಈಕೆಯ ಜೈವಿಕ ಪೋಷಕರ ಪತ್ತೆಗಾಗಿ ಪ್ರಕಟಣೆ

ಮಗುವಿನ ಮಾಹಿತಿ ಮಗುವಿನ ಭಾವಚಿತ್ರ

1) ಬಾಲಕಿಯ ಹೆಸರು: **ಸೌಮ್ಯ** 2) ಮಗು ಸಿಕ್ಕಿದ ಸ್ಥಳ: ನಂಜನಗೂಡು ಪಟ್ಟಣದ ಹಳೇ ಬಸ್ ನಿಲ್ದಾಣ, ಮೈಸೂರು ಜಿಲ್ಲೆ. 3) **ಪ್ರಸ್ತುತ ವಿಳಾಸ:** ಶ್ರೀ ಒಪನ್ ಆರ್ಮ್ಸ್ ಕ್ರೈಸಿಸ್ ಸೆಂಟ್, 2ನೇ ಕ್ರಾಸ್, ಗ್ರೇಸ್ ಸ್ಕೂಲ್ ಕ್ಯಾಂಪಸ್, ಮಹದೇಶ್ವರ ಬಡಾವಣೆ, ಮೈಸೂರು. 4) **ವಯಸ್ಸು:** ಸುಮಾರು 09 ವರ್ಷ. 5) **ತೂಕ:** 22.2 ಕೆ.ಜಿ.. 6) **ಎತ್ತರ:** 123 ಸೆಂ.ಮೀ. 7) **ಬಣ್ಣ:** ಗೋಧಿ ಬಣ್ಣ. 8) **ಮಗುವಿನ ಬುದ್ಧಿ ಮಾಂದ್ಯತೆ:** ಬಾಲಕಿಯ ಮಾತುಗಳು ಹಾಗೂ ಬುದ್ಧಿಯಲ್ಲಿ ವಯಸ್ಸಿಗನುಗುಣವಾದ ಪ್ರೌಢಿಮೆ ಇರುವುದಿಲ್ಲ ಹಾಗೂ ಮಾತು/ ಪದಗಳು ವಯಸ್ಸಿನುಗುಣವಾಗಿ ಸ್ಪಷ್ಟವಾಗಿಲ್ಲ. 9) **ಸಂಪರ್ಕಿಸುವ ವಿಳಾಸ :** ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ನಂ:15-17, 1ನೇ ಮಹಡಿ, ಅಂಜನಾದ್ರಿ ರಸ್ತೆ, 02ನೇ ಘಟ್ಟ, 04ನೇ ಹಂತ, ವಿಜಯನಗರ, ಮೈಸೂರು-570032, ದೂರವಾಣಿ ಸಂಖ್ಯೆ: 0821-2543003.

ಸಹಿ/- **ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ**
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು.
DIPR/MYS/135/SA/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂ:08539-220054.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2026-27/329
ದಿ: 05/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗಳ ದ್ವಿ ಲಕೋಟೆ ಪದ್ದತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ ರೂ.**200.00** ಲಕ್ಷಗಳರಿಂದ **980.00** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **06.05.2026** ರಿಂದ ದಿನಾಂಕ: **16-05-2026** ಸಂಜೆ. 16.00 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **12.05.2026** ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **19-05-2026** ರಂದು ಬೆಳಿಗ್ಗ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **21-05-2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ" ವೆಬ್‌ಸೈಟ್ Karnataka Public Procurement Portal ನಲ್ಲಿ ಪಡೆಯಬಹುದು.

ಸಹಿ/-**ಕಾರ್ಯನಿರ್ವಾಹಕ ಇಂಜನೀಯರರು,**
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ದಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/66/ಕೆಎಸ್‌ಎಂಸಿಎ/2026-27

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ,
ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಜಿ.ಟಿ.ಟಿ.ಸಿ.ಹತ್ತಿರ, ಕೈಗಾರಿಕಾ ವಸಾಹತು,
ರಾಜಾಜಿನಗರ, ಬೆಂಗಳೂರು-560010, ಫೋನ್ ನಂ.23501478,
E-mail id: jd-bang-u@karnatakaindustry.gov.in / dicbangurban@gmail.com
ಸಂಖ್ಯೆ:ಜಿಕೈಕೇ/ಬೆಂ(ನ)/ಇ-ಟೆಂಡರ್/2026-27 ದಿನಾಂಕ: 05.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆಯಲ್ಲಿ ಅವಶ್ಯವಿರುವ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ನುರಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮುಖಾಂತರ (ಟೆಂಡರ್ ಸಂಖ್ಯೆ: **IC/2026-27/SE0194**) ಡೌನ್‌ಲೋಡ್ ಮಾಡಿಕೊಳ್ಳಬಹುದು ಆನ್‌ಲೈನ್ ಮೂಲಕ ಭರ್ತಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18.05.2026 ರಂದು ಸಂಜೆ 5.00 ಗಂಟೆಯ ವರೆಗೆ.** ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/- ಜಂಟಿ ನಿರ್ದೇಶಕರು, ಜಿ.ಕೈ.ಕೇ, ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಸಹಾಯಕ ನಿರ್ದೇಶಕರ ಕಛೇರಿ, 4ನೇ ಮಹಡಿ, ಅನೆಕ್ಸ್-3,
ನರಸಿಂಹರಾಜ ಚೌಕ, ಬೆಂಗಳೂರು - 02.
ಇ-ಮೇಲ್:adahbccc@gmail.com
ಸಂ. ಸನಿ(ಪಸಂ)/(ಬೆಕೇನಪಾ)/ಪಿಆರ್-22/2025-26 ದಿನಾಂಕ : 05-05-2026

ಪ್ರಸ್ತಾವನೆಗಾಗಿ ಕೋರಿಕೆ ಪ್ರಕಟಣೆ

ಬೆಂಗಳೂರು ಕೇಂದ್ರ ನಗರ ಪಾಲಿಕೆ ಇವರು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಪಶು ದೊಡ್ಡಿ ಮತ್ತು ನಗರ ಕಸಾಯಿಖಾನೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವುದಕ್ಕಾಗಿ ಅಲ್ಪಾವಧಿ ಪ್ರಸ್ತಾವನೆಗಾಗಿ ಕೋರಿಕೆಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕ್ರಿಯೆಯು ಕೆಳಕಂಡಂತಿದೆ : (1) ಪ್ರಸ್ತಾವನೆಗಾಗಿ ಕೋರಿಕೆ ಸಂ. : ಬಿಸಿಸಿಸಿ/2026-27/ಎಸ್‌ಇ0168 (2) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ (**https://kppp.karnataka.gov.in**) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದಾದ ಪ್ರಾರಂಭಿಕ ದಿನಾಂಕ : **05-05-2026** ರಿಂದ (3) ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ : ಮುಖ್ಯ ಪಶುವೈದ್ಯಾಧಿಕಾರಿ, (ಪಶುಸಂಗೋಪನೆ), ಬೆಕೇನಪಾ (4) ಟೆಂಡರ್ ಅನುಮೋದಿಸುವ ಪ್ರಾಧಿಕಾರಿ : ಆಯುಕ್ತರು, ಬೆಕೇನಪಾ (5) ಕೆಪಿಪಿ ಪೋರ್ಟಲ್‌ನಲ್ಲಿ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **07-05-2026 ರಂದು ಸಂಜೆ 5:00 ಗಂಟೆಯವರೆಗೆ** (6) ಬಿಡ್-ಪೂರ್ವ ಸಭೆಯ ದಿನಾಂಕ : **07-05-2026 ರಂದು ಮಧ್ಯಾಹ್ನ 12:30 ಗಂಟೆಗೆ.** ಸ್ಥಳ : ಸಹಾಯಕ ನಿರ್ದೇಶಕರ ಕಛೇರಿ (ಪಶುಸಂಗೋಪನೆ), ಬೆಕೇನಪಾ, ಅನೆಕ್ಸ್-3, 4ನೇ ಮಹಡಿ, ಎನ್.ಆರ್.ಚೌಕ, ಬೆಂಗಳೂರು - 560002 (7) ಕೆಪಿಪಿ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಾಗಿ ಕೋರಿಕೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **12-05-2026 ರಂದು ಸಂಜೆ 5:00 ಗಂಟೆಯವರೆಗೆ** (8) ಕೆಪಿಪಿ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಾಗಿ ಕೋರಿಕೆಯನ್ನು ಆನ್‌ಲೈನ್‌ನಲ್ಲಿ ತೆರಯುವ ದಿನಾಂಕ ಮತ್ತು ಸಮಯ : **13-05-2026 ರಂದು ಸಂಜೆ 5:10 ಗಂಟೆಗೆ** (9) ಪ್ರಸ್ತಾವನೆಗಾಗಿ ಕೋರಿಕೆಯನ್ನು ತೆರೆಯುವ ಸ್ಥಳ : ಆನ್‌ಲೈನ್‌ನಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ (10) ಸಂಪರ್ಕಿಸುವ ವಿಳಾಸ : ಸಹಾಯಕ ನಿರ್ದೇಶಕರು (ಪಶುಸಂಗೋಪನೆ), ಬೆಕೇನಪಾ, ಅನೆಕ್ಸ್-3, 4ನೇ ಮಹಡಿ, ಎನ್.ಆರ್.ಚೌಕ, ಬೆಂಗಳೂರು - 560002. ದೂ: 9900229973. ಇಮೇಲ್: adahbccc@gmail.com

ಸಹಿ/- ಸಹಾಯಕ ನಿರ್ದೇಶಕರು (ಪಶುಸಂಗೋಪನೆ),
ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ಅಪೆಂಡಿಕ್ಸ್-ಇ/2026-27/258 ದಿನಾಂಕ:02.05.2026

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ- 4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 01 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 600.00 ಲಕ್ಷಗಳು ಮತ್ತು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 9,00,000/- ರೂಗಳು. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಪೂರ್ವ ಭಾವಿ ಸಭೆ ದಿನಾಂಕ: 08.05.2026 ರ ಮುಂಜಾನೆ 11.00 ಗಂಟೆಗೆ, 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:- 18.05.2026 ರ ಅಪರಾಹ್ನ 1.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 19.05.2026 ರ ಅಪರಾಹ್ನ 1:31 ಘಂಟೆಯ ನಂತರ ಮತ್ತು. 4) ಟೆಂಡರಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 20.05.2026 ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ವಿಜಯಪುರ/76/ಕೆಎಸ್‌ಎಂಸಿಎ/2026-27 **ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ**

Government of Karnataka
Rural Drinking Water & Sanitation Department
Office of the Executive Engineer,
Rural Drinking Water & Sanitation Department,
Bangalore Rural Division, Email-id: eerdwsd.bngr1@gmail.com

NO.EE/RWS&D/BNGR/Yettinahole-DPR/2026-27 DATE: 02.05.2026

SHORT-TERM TENDER NOTIFICATION
No.03/2026-27, Dt: 02.05.2026 (Through KPP Portal only)

On Behalf of Governor of Karnataka, Executive Engineer, Rural Drinking Water Supply & Sanitation Bangalore Rural Division invites short e-Tender in Two Cover system for Providing Consultancy Services for preparation of Preliminary Scheme Report (PSR), Concept Note with Technical Specifications and Cost estimates for Multi village Drinking Water Supply Schemes under DBOT model to rural habitation of Bengaluru Rural District from Yettinahole source through KPP Portal **(https://kppp.karnataka.gov.in).**

Tenders are invited through KPP Portal for the Below Mentioned Work.

Description: Providing Consultancy Services for preparation of Preliminary Scheme Report (PSR), Concept Note with Technical Specifications and Cost estimates for Multi-village Drinking Water Supply Schemes under DBOT model to Rural Habitation of Bengaluru Rural District from Yettinahole source. Amount put to Tender (Rupees in Lakhs): **202.29.** Earnest Money Deposit (in Rupees): **5,00,000/-.** Registered Agencies: **Registered Engineering Consulting Firm.**

Calender of Events:

1. Downloading of document through portal: **02.05.2026 to 18.05.2026 Time: 17.00 hrs.**
2. Prebid meeting: **06.05.2026 Time: 11.00 hrs.**
3. Date of Opening Technical Bid: **19.05.2026 Time: 17.05 hrs.**
4. Date of Opening Financial Bid: **22-05-2026 Time: 11.00 hrs.**

For more details this office may please be contacted during Office Hours and also through by clicking **https://kppp.karnataka.gov.in** List of Tenders which will link to all Dept. works list.

Sd/- Executive Engineer
RDW&S Division, Bangalore Rural District
DIPR/CP/RO510/AAPL/2026-27

ಸಂಯುಕ್ತ ಕರ್ನಾಟಕ ಸಂಪಾದಕೀಯ

ಯುವಕರ ಆಕರ್ಷಿಸಲು ಕಮ್ಯೂನಿಸ್ಟ್ ಪಕ್ಷ ವಿಫಲ

ಸ್ವಾತಂತ್ರ್ಯ ಪೂರ್ವದಿಂದಲೂ ದೇಶದ ಆರ್ಥಿಕ ಮತ್ತು ಸಾಮಾಜಿಕ ಆಡಳಿತ ಯುಗ ಕೇರಳದ ಪಿಣರಾಯಿ ವಿಜಯನ್ ನಿರ್ಗಮನದ ಮೂಲಕ ಅಂತ್ಯಗೊಂಡಿದೆ. ವ್ಯಕ್ತಿಪೂಜೆಯೇ ಪ್ರಧಾನವಾಗುತ್ತಿರುವ ಇಂದಿನ ರಾಜಕೀಯ ರಂಗದಲ್ಲಿ ಕಮ್ಯೂನಿಸ್ಟ್ ಪಕ್ಷ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟವಾಯಿತು. ವ್ಯಕ್ತಿಗಿಂತ ವ್ಯವಸ್ಥೆ ಬದಲಾವಣೆ ಮುಖ್ಯ ಎಂದು ಹೇಳಿದ ಕಮ್ಯೂನಿಸ್ಟ್ ಪಕ್ಷ ಸಮಾನತೆಯ ಸಿದ್ಧಾಂತಕ್ಕೆ ಬದ್ಧವಾಗಿತ್ತು. ಇದು ಯುವ ಪೀಳಿಗೆಯನ್ನು ಆಕರ್ಷಿಸುವುದರಲ್ಲಿ ಸಫಲತೆ ಕಾಣಲಿಲ್ಲ. ಸಿಪಿಐ ಮತ್ತು ಸಿಪಿಐಎಂ ಎರಡೂ ಪಕ್ಷಗಳೂ ಜನಪರವಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಮತ್ತೊಂದು ರೂಪವೇ ನಕ್ಸಲ್ ತತ್ವ. ಅದೂ ಈಗ ಅವಸಾನ ಕಂಡಿದೆ. ನಕ್ಸಲೀಯರು ಸಾಮೂಹಿಕವಾಗಿ ಶರಣಾಗಿದ್ದಾರೆ.

1925 ರಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಅಸ್ತಿತ್ವಕ್ಕೆ ಬಂದಿತು. 1964 ರಲ್ಲಿ ಅದು ವಿಭಜನೆಗೊಂಡಿತು. ಕೇರಳದಲ್ಲಿ 1957ರಲ್ಲಿ ಇಎಂಎಸ್ ನಂಬೂದರಿ ಪಾಡ್ ಮೊದಲ ಮುಖ್ಯಮಂತ್ರಿಯಾಗಿ ಕೇರಳದಲ್ಲಿ ಸರ್ಕಾರ ರಚಿಸಿದರು. ಪಶ್ಚಿಮ ಬಂಗಾಳದಲ್ಲಿ 1977 ಮತ್ತು 1978ರಲ್ಲಿ ತ್ರಿಪುರದಲ್ಲಿ ಕಮ್ಯೂನಿಸ್ಟ್ ಪಕ್ಷ ಸರ್ಕಾರ ರಚನೆಯಾಯಿತು. 2011ರಲ್ಲಿ ಮಮತಾ ಬ್ಯಾನರ್ಜಿ ಬಂಗಾಳದಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ಕಿತ್ತೊಗೆದರು. ಮೊದಲಿನಿಂದಲೂ ಕಮ್ಯೂನಿಸ್ಟ್ ಪಕ್ಷ ರಾಷ್ಟ್ರಮಟ್ಟದಲ್ಲಿ ಪ್ರತಿಪಕ್ಷವಾಗಿ ಪ್ರಮುಖ ಪಾತ್ರವಹಿಸಿದೆ. 1996, 2004ರಲ್ಲಿ ಕೇಂದ್ರ ಸರ್ಕಾರಕ್ಕೆ ಬೆಂಬಲ ಸೂಚಿಸಿತ್ತು. 1975ರಲ್ಲಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದಾಗ ಸಿಪಿಐ ಬೆಂಬಲ ವ್ಯಕ್ತಪಡಿಸಿತು. ಸಿಪಿಐ(ಎಂ) ವಿರೋಧಿಸಿತು. ನಂತರ ಕಮ್ಯೂನಿಸ್ಟ್ ಪಕ್ಷ ತುರ್ತು ಪರಿಸ್ಥಿತಿಗೆ ಬೆಂಬಲ ವ್ಯಕ್ತಪಡಿಸಿದ್ದು ಐತಿಹಾಸಿಕ ಅಪರಾಧ ಎಂದು ಒಪ್ಪಿಕೊಂಡಿತು.

> **ಕಮ್ಯೂನಿಸ್ಟ್ ಪಕ್ಷ ಸಮಾನತೆಯ ಸಿದ್ಧಾಂತಕ್ಕೆ ಬದ್ಧವಾಗಿತ್ತು. ಇದು ಯುವ ಪೀಳಿಗೆಯನ್ನು ಆಕರ್ಷಿಸುವುದರಲ್ಲಿ ಸಫಲತೆ ಕಾಣಲಿಲ್ಲ.**

ಕಮ್ಯೂನಿಸ್ಟ್ ಪಕ್ಷ ಉತ್ತಮ ನಾಯಕರನ್ನು ದೇಶಕ್ಕೆ ನೀಡಿತು ಎಂಬುದರಲ್ಲಿ ಎರಡು ಮಾತಿಲ್ಲ. ಇಎಂಎಸ್ ನಂಬೂದರಿ ಪಾಡ್ ಈ ದೇಶ ಕಂಡ ಅತ್ಯುನ್ನತ ನಾಯಕ. 1920ರಲ್ಲೇ ಎಂ.ಎನ್. ರಾಯ್ ತಮ್ಮದೇ ಆದ ಸಿದ್ಧಾಂತ ರೂಪಿಸಿದವರು. ಎಸ್.ಆರ್. ಬೊಮ್ಮಾಯಿ ಅವರ ಅನುಯಾಯಿ. ಜ್ಯೋತಿ ಬಸು ಬಂಗಾಳದ ಅತಿ ದೀರ್ಘಕಾಲದ ಮುಖ್ಯಮಂತ್ರಿ. ಅವರಿಗೆ ಪ್ರಧಾನಿಯಾಗುವ ಯೋಗ ಬಂದಿತ್ತು. ಆದರೆ ಪಕ್ಷ ಒಪ್ಪಲಿಲ್ಲ ಎಂದು ಪ್ರಧಾನಿ ಹುದ್ದೆ ಒಪ್ಪಿಕೊಳ್ಳಲಿಲ್ಲ. ಅವರಿಗೆ ಪಕ್ಷದ ಶಿಸ್ತು ಬಹಳ ಮುಖ್ಯವಾಗಿತ್ತು. ಶಾಸಕರಾದವರು ತಮ್ಮ ಸಂಬಳವನ್ನು ಪಕ್ಷಕ್ಕೆ ನೀಡುತ್ತಿದ್ದರು. ಎಸ್.ಎ. ಡಾಂಗೆ, ಸುಂದರಯ್ಯ, ಎ.ಕೆ. ಗೋಪಾಲನ್, ಅಚ್ಯುತಾನಂದನ್, ಇ.ಕೆ. ನಾಯನಾರ್, ಅಚ್ಯುತಮೆನನ್, ಪ್ರಮೋದದಾಸ್ ಗುಪ್ತ, ಹರಿಕಿಶನ್ ಸಿಂಗ್ ಸುರ್ಜಿತ್ ಸೇರಿದಂತೆ ಹಲವು ನಾಯಕರು ತಮ್ಮ ಜೀವನವನ್ನೇ ಪಕ್ಷಕ್ಕಾಗಿ ತ್ಯಾಗ ಮಾಡಿದರು. ಇಂದಿನ ರಾಜಕೀಯ ಮೇಲಾಟಗಳನ್ನು ನೋಡಿದರೆ ಕಮ್ಯೂನಿಸ್ಟ್ ಪಕ್ಷದ ನಾಯಕರಿಗೆ ನಿಷ್ಠೆಯಿಂದ ಇರುವುದು ಕಷ್ಟವಾಗುತ್ತಿತ್ತು. ತುಂಬ ಕೇಡರ್ ಆಧರಿತ ಪಕ್ಷ ಕಾಲಕ್ರಮೇಣ ಇತರ ಪಕ್ಷಗಳ ರೀತಿ ವ್ಯಕ್ತಿಗಳನ್ನು ಅವಲಂಬಿಸುವುದು ಅನಿವಾರ್ಯವಾಯಿತು. ಜನ ಸಾಮಾನ್ಯರು ಕೂಡ ಪಕ್ಷದ ಸಿದ್ಧಾಂತಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು. ಕೇರಳದಲ್ಲಿ ಈಗ ಕಾಂಗ್ರೆಸ್, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಕಮ್ಯೂನಿಸ್ಟ್ ಪಕ್ಷ ನೇಪಥ್ಯಕ್ಕೆ ಸರಿದಿದೆ. ಮುಂದೆ ಈ ಪಕ್ಷಕ್ಕೆ ಕಾಲ ಬರಬಹುದು. ಸಮಾನತೆಯ ಹಾದಿ ಸುಲಭವಲ್ಲ. ಅಲ್ಲದೆ ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆ ಸಬಲಗೊಳಿಸುವ ಕೆಲಸ ಶಿಥಿಲಗೊಳ್ಳುತ್ತಿದೆ. ಹೀಗಾಗಿ ಸಾಂವಿಧಾನಿಕ ಸಂಸ್ಥೆಗಳು ತನ್ನ ಮಹತ್ವ ಮತ್ತು ಸ್ವಾಯತ್ತೆ ಕಳೆದುಕೊಳ್ಳುತ್ತಿರುವುದರಿಂದ ಕಮ್ಯೂನಿಸ್ಟ್ ತೆರೆಯ ಮರೆಗೆ ಸರಿಯುತ್ತಿರುವುದು ದುಃಖದ ಸಂಗತಿ. ಆದರೂ ಕಮ್ಯೂನಿಸ್ಟ್ ಪಕ್ಷದ ಕಾಲ ಮುಗಿದು ಹೋಯಿತು ಎಂದು ತಿಳಿಯುವ ಅಗತ್ಯವಿಲ್ಲ. ಕಾರ್ಮಿಕರ ಸಂಘಟನೆಯಲ್ಲಿ ಕಮ್ಯೂನಿಸ್ಟ್ ತನ್ನ ಅಸ್ತಿತ್ವಕ್ಕೆ ಉಳಿಸಿಕೊಂಡಿದೆ. ಆದರೆ ಆಡಳಿತದಲ್ಲಿರುವ ಪಕ್ಷಗಳು ಟ್ರೇಡ್ ಯೂನಿಯನ್ ಸಂಘಟನೆಗಳನ್ನು ಉತ್ತೇಜಿಸಲು ಬಯಸುವುದಿಲ್ಲ. ಹೀಗಾಗಿ ಕಾರ್ಮಿಕ ಸಂಘಟನೆಗಳು ಉಳಿಯುವುದು ಕಷ್ಟ. ಅಲ್ಲದೆ ಈಗ ಎಲ್ಲ ಕಡೆ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರ ನೇಮಕ ನಡೆಯುತ್ತಿರುವುದರಿಂದ ಅಲ್ಲದೆ ಹೊರಗುತ್ತಿಗೆಯ ಮೇಲೆ ಕಾರ್ಮಿಕರ ನೇಮಕಾತಿ ನಡೆಯುತ್ತಿರುವುದರಿಂದ ಕಮ್ಯೂನಿಸ್ಟ್ ತತ್ವಗಳಿಗೆ ಮಹತ್ವ ಕಡಿಮೆಯಾಗುತ್ತಿದೆ. ಈಗ ಬಹುತೇಕ ರಾಜಕೀಯ ಪಕ್ಷಗಳು ಕಾರ್ಮಿಕ ವಿಭಾಗವನ್ನು ಹೊಂದಿಲ್ಲ. ಕಾರ್ಮಿಕರು ಸಂಘಟಿತರಾಗಲು ಅವಕಾಶವನ್ನೂ ನೀಡುತ್ತಿಲ್ಲ. ಹೀಗಾಗಿ ಕಮ್ಯೂನಿಸ್ಟ್ ಸಿದ್ಧಾಂತಗಳು ಜನ ಮಾನಸದಿಂದ ಮರೆಯಾಗುತ್ತಿರುವುದು ಕಹಿ ಸತ್ಯ. ಇದರ ಪರಿಣಾಮ ಚುನಾವಣೆಗಳಲ್ಲೂ ಕಂಡು ಬರುತ್ತಿದೆ. ಕಾರ್ಮಿಕ ಮುಖಂಡರು ಸಾರ್ವತ್ರಿಕ ಚುನಾವಣೆ ಎದುರಿಸುವುದು ಕಷ್ಟ. ಯುವ ಪೀಳಿಗೆಯಲ್ಲೂ ಕಮ್ಯೂನಿಸ್ಟ್ ಚಳವಳಿಯ ಸೆಳವು ಕಡಿಮೆಯಾಗುತ್ತಿದೆ. ಹಿಂದೆ ಕಾಮ್ರೆಡ್ ಎಂದು ಹೇಳಿಕೊಳ್ಳುವುದು ಹೆಮ್ಮೆಯ ಸಂಗತಿಯಾಗಿತ್ತು. ಈಗ ಯಾರೂ ಅದನ್ನು ಹೇಳಿಕೊಳ್ಳುವುದಕ್ಕೆ ಬಯಸುವುದಿಲ್ಲ. ಅಲ್ಲಲ್ಲಿ ಒಬ್ಬರು ಇಬ್ಬರು ಲಾಲ್ ಸಲಾಂ ಹೇಳುತ್ತಾರೆ. ನಿಜವಾದ ಪ್ರಜಾಪ್ರಭುತ್ವ ತತ್ವಗಳು ಕಮ್ಯೂನಿಸ್ಟ್ ಪಕ್ಷದಲ್ಲಿದೆ ಎಂಬುದಂತೂ ನಿಜ. ಹೀಗಾಗಿ ಚೀನಾ ನಮಗಿಂತ ಹೆಚ್ಚು ಪ್ರಜಪ್ರಭುತ್ವವಾದಿ ಎಂಬುದರಲ್ಲಿ ಎರಡು ಮಾತಿಲ್ಲ. ■

ಆತ ಟ್ರಂಪೇಸಿ–ಈಕೆ ಟ್ರಂಪಮ್ಮ...

ತಾರಾತಿಗಡಿ
ನರಸಿಂಹ ಫುಲಿಹೈದರ್
ಮುಖ್ಯ ವರದಿಗಾರ

ಈಗ ಆ ಮೂಲತೃಣದ ಅಕ್ಕಮ್ಮ ಸೋತು ಸುಣ್ಣವಾಗಿದ್ದೀಯ ರಾಜಿನಾಮೆ ಕೊಡು ಅಂದರೆ ನಾ ಕೊಡಲ್ಲ..ನಾ ಕೊಡಲ್ಲ ನಾ ಕೊಡಲ್ಲ ಎಂದು ಕೋರ್ಟಿನಲ್ಲಿ ಹೇಳುವಂತೆ ಮೂರು ಮೂರು ಬಾರಿ ಹೇಳಿದ್ದಳು. ಆಕೆ ಕೊಟ್ಟರೆ ಇಸಿದುಕೊಳ್ಳಬೇಕು...ಇಲ್ಲದಿದ್ದರೆ ಹಾಗೆ ಬಿಡಬೇಕು ಎಂದು ಅಲ್ಲಲ್ಲಿ ಪೋಸ್ಟರ್ ಅಂಟಿಸಿದ್ದರು. ಇದ್ಯಾಕಾದೀತು ಬಿಡಬೇಡಿ ರಾಜಿನಾಮೆ ಇಸಿದುಕೊಳ್ಳಿ ಎಂದು ಸೋದಿ ಮಾಮಾರು...ಲಮಿತ್ ಸಾ ಕಾಕಾರು ಎಲ್ಲರೂ ಒಂದೇ ಸಮನೆ ಫೋನ್ ಮಾಡಿ ಹೇಳುತ್ತಿದ್ದರೂ ಅವರ ಮಾತನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಕೊನೆಗೆ ಈ ಬುದ್ಧಿ ಆಕೆ ಕಲಿತಿದ್ದಾರೂ ಎಲ್ಲಿಂದ ಎಂದು ಪತ್ತೆ ಮಾಡಿ ವರದಿ ನೀಡಲು ರಷಿಯಾ ಪುಟ್ಯಾನ ನೇತೃತ್ವದಲ್ಲಿ ಸಮಿತಿ ಮಾಡಿದರು. ರಷಿಯಾ ಪುಟ್ಯಾ ಪತ್ತೆ ಹಚ್ಚಿ ವರದಿ ನೀಡಲು ಮುಂದಾದ. ನಂತರ ಆಕೆಯ ಊರಿಗೆ ಹೋಗಿ ಎಲ್ಲೆಡೆ ತಿರುಗಾಡಿ ಮಾಹಿತಿ ಸಂಗ್ರಹಿಸಿದ. ಅಕ್ಕಮ್ಮ ಅಲಿಯಾಸ್ ಟ್ರಂಪಮ್ಮಳು ಮೊದಲಿನಿಂದಲೂ ಟ್ರಂಪೇಸಿ ಫ್ಯಾನು. ಒಂದು ಬಾರಿ ಆತನಿಗೆ ನೀನು ಕೂದಲಿಗೆ ಮೆಹಂದಿ ಹಚ್ಚುತ್ತೀಯಾ? ಅಥವಾ ಕೆಂಪು ಬಣ್ಣ ಹಚ್ಚುತ್ತೀಯಾ? ಎಂದು ಕೇಳಿದ್ದಳು. ಆತ ಏನು ಹೇಳುತ್ತಾನೋ ಅಕ್ಕಮ್ಮನೂ ಅದನ್ನೇ ಮಾಡಿದಳು. ಆಡಳಿತ ನಡೆಸುವಾಗ ಹೇಗೆ ಮಾಡುತ್ತೀರಿ ಎಂದು ಆತನ ಸಜೇಷನ್ ತೆಗೆದುಕೊಂಡು ತಾನೂ ಹಾಗೆ ಮಾಡಿದಳು. ನೀವು ಗುಂಡು ಹೊಡೆಸಿಕೊಂಡ ನಾಟಕ ಹೇಗೆ ಮಾಡಿದಿರಿ? ಆ ಸಂದರ್ಭದಲ್ಲಿ ಮುಖವನ್ನು ಯಾವ ರೀತಿ ಮಾಡಬೇಕು? ಹಾವ–ಭಾವ ಹೇಗಿರಬೇಕು ಎಂದು ಕೇಳಿಕೊಂಡು ಗಾಲಿಕುರ್ಚಿ ಮೇಲೆಯೂ ಬಂದಿದ್ದಳು. ಸಿಕ್ಕವರ ಮುಂದೆ ನಾನು ನಿಜವಾಗಿಯೂ ಟ್ರಂಪೇಸಿ ಫ್ಯಾನು ಎಂದು ಹೇಳುತ್ತಿದ್ದಳು. ಸಣ್ಣೆಂಕಣ್ಣನ ಮುಂದೆ ಹೇಳಿದಾಗ...ನಿನ್ನ ನೋಡಿದರೆನೇ ಗೊತ್ತಾಗುತ್ತದೆ ಎಂದು ಹೇಳಿದಾಗ ಆತನ ಕುಡ ಜಗಳ ತೆಗೆದಳು..ನಾನು ಚಾಷ್ಟಿ ಮಾಡುವುದಕ್ಕೆ ಅಂದೆ ಅಂದರೂ ಆಕೆ ಕೇಳಲಾರದೆ ಜಗಳವಾಡಿದಳು. ಹಿಂದೆ ಟ್ರಂಪೇಸಿ ಸೋತಾಗ ಆತ ನಾ ಕೊಡಲ್ಲ.. ರಾಜಿನಾಮೆ ಕೊಡಲ್ಲ ಅಂತ ಹೇಳಿದ್ದನಲ್ಲ ಈಗ ಈಕೆ ಅದನ್ನು ಹೇಳುತ್ತಿದ್ದಾಳೆ ಎಂದು ಪುಟ್ಯಾ ಸಲ್ಲಿಸಿದ ಸಮಗ್ರ ವರದಿಯಲ್ಲಿ ತಿಳಿಸಿದ್ದಾನೆ. ■



75 ವರ್ಷಗಳ ಹಿಂದೆ.. ಅಮೃತ ಸಮಾಚಾರ 06–05–1951 ರವಿವಾರ

ಕಾಶ್ಮೀರ ಸಮಸ್ಯೆ ಸೌಹಾರ್ದದಿಂದ ಬಗೆಹರಿಯಲಿ

ಹೊಸದಿಲ್ಲಿ 5– ಕಾಶ್ಮೀರ ಸಮಸ್ಯೆಯ ಬಗ್ಗೆ ಭದ್ರತಾ ಮಂಡಳವು ಇತ್ತೀಚೆಗೆ ಅಂಗೀಕರಿಸಿರುವ ಗೊತ್ತುವಳಿಯನ್ನು ಭಾರತ ಸರಕಾರವು ನಿರಾಕರಿಸಿ ಕೈಕೊಂಡಿರುವ ಕ್ರಮವನ್ನು ಅಖಿಲ ಭಾರತ ಕಾಂಗ್ರೆಸ ಸಮಿತಿಯು ಸಂಪೂರ್ಣವಾಗಿ ಅನುಮೋದಿಸುತ್ತದೆ ಎಂಬ ಗೊತ್ತುವಳಿಯನ್ನು ಇಂದು ಇಲ್ಲಿ ಘಟನಾ ಸಮಿತಿ ಭವನದಲ್ಲಿ ಶ್ರೀ ಪುರುಷೋತ್ತಮದಾಸ ತಂಡನ್ನರ ಅಧ್ಯಕ್ಷತೆಯಲ್ಲಿ ಸೇರಿದ್ದ ಅ.ಭಾ. ಕಾಂಗ್ರೆಸ ಸಮಿತಿಯ ಅಧಿವೇಶನವು ಒಮ್ಮತದಿಂದ ಅಂಗೀಕರಿಸಿತು. ಈ ಅಧಿವೇಶನಕ್ಕೆ ಪಂ. ಜವಾಹರಲಾಲರನ್ನು ಮೊದಲು ಮಾಡಿಕೊಂಡು ಎಲ್ಲ ಮಂತ್ರಿಗಳು ಆಗಮಿಸಿದ್ದರು.

ಭಾರತದ ರಾಷ್ಟ್ರೀಯ ಆದಾಯ 8710 ಕೋಟಿ ರೂ.ಗಳು

ಹೊಸದಿಲ್ಲಿ 5– 1948–49ರಲ್ಲಿ ಭಾರತದ ರಾಷ್ಟ್ರೀಯ ಆದಾಯವು 8700 ಕೋಟಿ ರೂ.ಗಳಿತ್ತೆಂದು ರಾಷ್ಟ್ರೀಯ ಆದಾಯ ಸಮಿತಿಯು ತನ್ನ ಮೊದಲನೆ ವರದಿಯಲ್ಲಿ ಹೇಳಿದೆ. ಭಾರತದ ಜನಸಂಖ್ಯೆ 341040000 ಇದ್ದು ಪ್ರತಿಯೊಬ್ಬನ ಆದಾಯ 255 ರೂ.ಗಳಿವೆ.

ಜನಿವಾರ ಕಿತ್ತವರು ಉಡದಾರ ಬಿಟ್ಟಿದ್ದೇಕೆ?

ವಿಶ್ವ-ವಿಶಾಲು
ಎಂ.ಎಸ್.ನರಸಿಂಹಮೂರ್ತಿ

ವಿಶಾಲು ದುಃಖದಲ್ಲಿ ಕುಳಿತಿದ್ದಳು. ಅವಳ ತಮ್ಮ ಗೋಪಿ ಸಿ.ಇ.ಟಿ. ಪರೀಕ್ಷೆ ಮುಗಿಸಿ ಬಂದಿದ್ದ. ಕಾಲೇಜಿನವರು ಗೋಪಿಯ ಜನಿವಾರ ಕಿತ್ತೆಸೆದಿದ್ದರು. ವಿಶಾಲೂ ಬಿಕ್ಕಿದಳು. ವಿಶ್ವ ಮಡದಿಗೆ ಸಮಾಧಾನ ಮಾಡಿದ.

"ಸರ್ಕಾರದ ಕೆಲ್ಸಾನೇ ಕೀಳೋದು! ಅದು ಏನ್ಬೇಕಾದ್ರೂ ಕೀಳುತ್ತೆ. ಟ್ಯಾಕ್ಸ್ ಕೀಳುತ್ತೆ, ನೆಮ್ಮದಿ ಕೀಳುತ್ತೆ, ಸಂತೋಷ ಕೀಳುತ್ತೆ. ಮೂರು ವರ್ಷಗಳಿಂದ ಜನಿವಾರಾನೂ ತಪ್ಪದೆ ಕೀಳ್ತಿದೆ. ಕಿತ್ತ ಮೇಲೆ ಕೀಳೋದು ತಪ್ಪು ಅಂತ ಹೇಳಿಕೇನೂ ಕೊಡ್ತಿದೆ"

"ನಮ್ಮ ಗೋಪಿ ಸಿ.ಇ.ಟಿ. ಪರೀಕ್ಷೆಗೆ ಎಷ್ಟೆಲ್ಲ ತಯಾರಾಗಿದ್ದ ಗೊತ್ತಾ? ಒಂದು ವಾರದ ಹಿಂದೆಯಷ್ಟೇ ಅವನಿಗೆ ಮುಂಜಿ ಆಗಿತ್ತು. ಪ್ರತಿನಿತ್ಯ ಸಂಧ್ಯಾವಂದನೆ ಮಾಡ್ತಾ ಇದ್ದ. ಅಂಥವನು ಪರೀಕ್ಷೆಗೆ ಹೋದ್ರೆ ಬಾಗಿಲಲ್ಲಿ ತಡೆದು ಜನಿವಾರಾನ ಕಿತ್ತೆಳೆದು ನಿರ್ದಯವಾಗಿ ಕತ್ತರಿಸಿ ಕಸದ ಬುಟ್ಟಿಗೆ ಎಸೆದಿದ್ದಾರೆ. ಮನುಷ್ಯರಾ ಅವರು?" ಎಂದು ಕೂಗಾಡಿದಳು.

"ಕೆಲವು ಸ್ಯಾಡಿಸ್ಟ್‌ಗಳಿಗೆ ಹಿಂಸೆ ಮಾಡೋದರಲ್ಲೇ ಮಜಾ ಸಿಗುತ್ತೆ" ಎಂದ ವಿಶ್ವ.

"ಜನಿವಾರ ಅಂದ್ರೆ ಬರೀ ದಾರಾನಾ?" ವಿಶಾಲು ಚಾಲೆಂಜ್ ಎಸೆದಳು.

"ಬರೀ ದಾರ ಖಂಡಿತ ಅಲ್ಲ. ಅದರ ಹಿಂದೆ ಒಂದು ಪವಿತ್ರವಾದ ಅರ್ಥ ಇದೆ. ಅದರಲ್ಲಿ ಇರೋ ಮೂರು ಎಳೆ ಚಾಮುಂಡಿ, ಸರಸ್ವತಿ, ಲಕ್ಷ್ಮೀ ಸಂಕೇತ ಅಂತಾರೆ. ಧರಿಸೋದರಿಂದ ಧೈರ್ಯ, ಜ್ಞಾನ, ಸಂಪತ್ತು ಸಿಗುತ್ತೆ" ಎಂದ ವಿಶ್ವ. ನಾನು ಮುಂದುವರೆಸಿದೆ.

"ಧೈರ್ಯ ಅಂದರೆ ಎಷ್ಟು ಗೊತ್ತಾ? ನಮ್ಮ ತಾತ ಹೇಳ್ತಿದ್ರು. ರಾತ್ರಿ ವೇಳೆ ಹಳ್ಳಿಗಳು ದಾಟೋವಾಗ ಸ್ಮಶಾನದಲ್ಲಿ ನಡ್ಕೊಂಡು ಹೋಗಬೇಕಾಗುತ್ತೆ. ಸ್ಮಶಾನದಲ್ಲಿ ದೆವ್ವ ಇರುತ್ತೆ. ದೆವ್ವದ ಕೂಗು ಭಯಂಕರ. ಮನುಷ್ಯರ ರಕ್ತ ಅಂದ್ರೆ ಅದಕ್ಕೆ ಪಾನಕ! ಸ್ಮಶಾನದ ಬೌಂಡರಿ ದಾಟೋವರೆಗೂ ಜನಿವಾರದ ಬ್ರಹ್ಮಗಂಟು ಹಿಡ್ಕೊಂಡು ಗಾಯತ್ರಿ ಜಪ ಮಾಡ್ತಿದ್ರೆ ಹತ್ತಿರಕ್ಕೆ ದೆವ್ವಾನೂ ಬರೊಲ್ಲ, ಪಿಶಾಚೀನೂ ಬರೊಲ್ಲ ಅಂತ ಹೇಳ್ತಾ ಇದ್ರು"

"ಜನಿವಾರಕ್ಕೆ ಅಷ್ಟು ತಾಖತ್ ಇದೆ ನಿಜ. ಮಾನಸಿಕವಾಗಿ ಒಬ್ಬ ವಿದ್ಯಾರ್ಥೀನ ಸದೆ ಬಡಿಯೋದು ಅಂದ್ರೆ ಜುಟ್ಟು, ಜನಿವಾರ ಕತ್ತರಿಸೋದು. ಜನಿವಾರ ಕತ್ತರಿಸಿದವರು ಉಡಿದಾರ ಯಾಕೆ ಕತ್ತರಿಸ್ಲಿಲ್ಲ?" ಕೇಳಿದಳು ವಿಶಾಲು.

"ಇಲ್ಲಮ್ಮ ವಿಶಾಲೂ, ಅಲ್ಲೆಲ್ಲ ಕೈ ಹಾಕೊಲ್ಲ. ಅವು ಅಪಾಯದ ಜಾಗಗಳು" ಎಂದ ವಿಶ್ವ. "ರೀ, ದಾರ ಅಂದ್ಮೇಲೆ ಎಲ್ಲ ಕಡೆ ಇರೋದು ಒಂದೇ ದಾರ ಅಲ್ವೇನ್ರೀ? ಕೈಗೆ ಕಟ್ಕೊಂಡಿರೋ ಕಾಶಿ ದಾರ ಕಟ್ ಮಾಡ್ತಾರೆ. ಕಳೆದ ವರ್ಷ ಸಿ.ಇ.ಟಿ. ಪರೀಕ್ಷೇಲಿ ಏನಾಗಿತ್ತು? ಹೆಣ್ಣು ಮಕ್ಕಳ ಕಿವಿ ಓಲೆ ತೆಗೆಸಿದ್ರು, ಮದುವೆಯಾದವರ ಮಾಂಗಲ್ಯ ತೆಗೆಸಿದ್ರು" ವಿಶಾಲೂಗೆ ದುಃಖದ ಕಟ್ಟೆ ಒಡೆದಿತ್ತು.

"ಹೌದೌದು, ನೆನಪಿದೆ. ನಾನು ಪೇಪರ್‌ನಲ್ಲಿ ಓದಿದ್ದೀನಿ"

"ಒಬ್ಬಾಕೆಯ ಮೂಗುನತ್ತು ತೆಗೆಯೋಕೆ ಆಗ್ಲೇ ಇಲ್ವಂತೆ. ಬ್ಯಾಂಡೇಜ್ ಪೀಸ್‌ನ ಕಟ್ ಮಾಡಿ ಮೂಗುನತ್ತು ಕಾಣದೇ ಇರೋ ಹಾಗೆ ಪ್ಯಾಚ್ ಹಾಕಿದ್ದಾರೆ. ಒಂದ್ವೇಳೆ ಮೂಗುನತ್ತು ಪರೀಕ್ಷೆ ಕೊಠಡಿಗೆ ಬಿಟ್ಟಿದ್ರೆ ಯಾರಿಗೆ ಏನು ತೊಂದ್ರೆ ಆಗ್ತಾ ಇತ್ತು?" ಎಂದು ಕೇಳಿದಳು.

"ಹಾಗಲ್ಲಮ್ಮ, ಪರೀಕ್ಷಾ ಕೊಠಡಿಗೆ ಯಾವ್ದೇ ಮೆಟಲ್ಲು ತಗೊಂಡು ಹೋಗೋ ಹಾಗಿಲ್ಲ" ಎಂದ ವಿಶ್ವ.

"ಸುಮ್ನಿರೀ, ಸರ್ಕಾರದ ಏಜೆಂಟ್ ಥರ ಮಾತಾಡಬೇಡಿ. ಅಮೆರಿಕಕ್ಕೆ ಹೋಗೋ ಮಹಿಳೆಯರಿಗೆ ವಿಮಾನ ನಿಲ್ದಾಣಗಳಲ್ಲಿ ಸೆಕ್ಯೂರಿಟಿ ಚೆಕ್ ಮಾಡೋವಾಗ ಮಾಂಗಲ್ಯ, ಓಲೆ, ಕಾಲುಂಗುರ ಎಲ್ಲ ಬಿಡ್ತಾರೆ. ಪಿ.ಯು.ಸಿ. ಫೈಲ್ ಆಗಿರೋ ಸೆಕ್ಯೂರಿಟಿ ಮಂದಿಗೆ ಇರೋ ಕಾಮನ್ ಸೆನ್ಸ್ ಸಿ.ಇ.ಟಿ. ನಡೆಸೋವರಿಗೆ ಇಲ್ಲ ಅಂದ್ರೆ ನಾಚಿಕೆಗೇಡು" ಎಂದು ಕೂಗಾಡಿದಳು.



"ಉನ್ನತ ಶಿಕ್ಷಣ ಸಚಿವರ ಜಿಲ್ಲೆಯಲ್ಲೇ ಜನಿವಾರ ಕಟ್ ಮಾಡಿದ್ದಾರೆ. ಪರೀಕ್ಷೆ ಬರೆದ್ಮೇಲೆ ಆ ಹುಡುಗ ಕಸದ ಬುಟ್ಟಿಯಲ್ಲಿ ಬಿದ್ದಿದ್ದ ಜನಿವಾರ ತಗೊಂಡು ಮನೆಗೆ ಬಂದು, 'ಅಮ್ಮಾ, ಇದಕ್ಕೆ ಗಂಟು ಹಾಕ್ಕೊಡು' ಅಂತ ಕೇಳಿದಾಗ ತಾಯಿಯ ಕರುಳು ಕಿತ್ಕೊಂಡು ಬಂತು" ಎಂದು ದಿನಪತ್ರಿಕೆ ಮುಂದಿಟ್ಟೆ.

"ಐದು ಲಕ್ಷ ರೂಪಾಯಿ ಖರ್ಚು ಮಾಡಿ ಮಗನಿಗೆ ಉಪನಯನ ಮಾಡಿದ್ರು. ಈಗ ಮತ್ತೆ ಉಪನಯನ ಮಾಡ್ಬೇಕಾಗುತ್ತಾ?" ಎಂದು ವಿಶಾಲು ರೇಗಿದಳು.

"ಉಪನಯನ ಆಗ್ಲಿ, ವಿವಾಹ ಆಗ್ಲಿ ಒಂದೇ ಸಲ ಮಾಡೋದು. ಎಡವಟ್ಟಾದಾಗ ಸರಿಪಡಿಸೋಕೆ ಶಾರ್ಟ್‌ಕಟ್ ಇವೆ. ಮುಂಜಿ ಮಾಡಿಸಿದ ಪುರೋಹಿತರ ಕೈಲಿ ರಿನ್ಯೂ ಮಂತ್ರ ಹೇಳಿಸಿ ಮತ್ತೊಂದು ಜನಿವಾರ ಹಾಕಿಸಿದ್ರೆ ಆಯ್ತು" ಎಂದ ವಿಶ್ವ.

ಹಿಂದಿನ ವರ್ಷದ ಘಟನೆಗಳು ನೆನಪಾದವು. ಷರ್ಟಿನ ತೋಳು ಉದ್ದ ಇದ್ದವನು ಸಿ.ಇ.ಟಿ. ಪರೀಕ್ಷೆಗೆ ಬಂದಾಗ ತೋಳು ಕತ್ತರಿಸಿ ಗಿಡ್ಡ ತೋಳು ಮಾಡಿದ್ದಾರೆ. ಹೆಣ್ಣು ಮಕ್ಕಳ ಬಳೆಗಳು ತೆಗೆಸಿದ್ದಾರೆ, ಅದೂ ಶುಕ್ರವಾರ! ಬಳೆ, ಓಲೆ ಶುಕ್ರವಾರ ತೆಗೆಯೋದು ಅಪಶಕುನ ಅಲ್ವಾ? ರಾಜಕಾರಣಿಗಳು ತಮ್ಮ ಮಗಳು, ಸೊಸೆಗೆ ಹಾಗೆ ಮಾಡ್ತಾರಾ? ಇದರ ಹಿಂದೆ ಕಾಣದ ಕೈ ಇದೆ. ಯಾರು ಇದನ್ನೆಲ್ಲ ಮಾಡಿಸ್ತಾ ಇದ್ದಾರೆ ಅನ್ನೋದೇ ಬಹಿರಂಗ ಆಗ್ತಿಲ್ಲ ಎನ್ನಿಸಿತು.

"ವಿಶಾಲು ಮೇಡಂ, ಸರ್ಕಾರ ಕಟ್ಟುನಿಟ್ಟಾದ ನಿಯಮ ತರ್ಬೇಕು. ಹುಡುಗನ ಜನಿವಾರ ಆಗ್ಲಿ, ಹೆಣ್ಣಿನ ಮಾಂಗಲ್ಯ ಆಗ್ಲಿ ಮುಟ್ಟೋದು ಅಂದ್ರೆ ಅದು ಅಪರಾಧ. ಅಂಥ ಪ್ರಕರಣ ನಡೆದಾಗ ಜನ ತಿರುಗಿ ಬೀಳ್ಬೇಕು" ಎಂದೆ.

"ಕಳೆದ ವರ್ಷಾನೂ ಇದೇ ತಪ್ಪು ಮಾಡಿದ್ರು. ಪ್ರತಿ ವರ್ಷಾನೂ ಜನಿವಾರಕ್ಕೇ ಕುತ್ತು ಬರ್ತಿದೆ. ಶಿಕ್ಷಣ ಇಲಾಖೆಗೆ ಜ್ಞಾನ ಬೇಡ್ವಾ? ಜನಿವಾರ ಕತ್ತರಿಸಿದವರಿಗೆ ಏನ್ಮಾಡ್ತಾರಂತೆ?"

"ಏನ್ಮಾಡ್ತಾರೆ? ಶಾಲೆಯ ಮಾನ್ಯತೆ ತೆಗೀತಾರೆ. ಮೂರು ತಿಂಗಳಾದ್ಮೇಲೆ ಮತ್ತೆ ಕೊಡ್ತಾರೆ. ಜನಿವಾರ ಕಟ್ ಮಾಡಿದವರ್ನ ಜನಗಳ ಕಣ್ಣೊರೆಸೋಕೆ ಅಂತ ಅಮಾನತ್ ಮಾಡ್ತಾರೆ. ಮೂರು ತಿಂಗಳು ಬಿಟ್ಟು ಮತ್ತೆ ಕೆಲಸಕ್ಕೆ ತಗೋತಾರೆ"

ಭದ್ರತಾ ಲೋಪದೋಷದಿಂದಾಗಿ ವಿಧಾನಸೌಧ ಒಳಗೆ ಏನೇನೋ ತರ್ತಾರೆ, ಸೀರಿಯಲ್ ಲೈಟುಗಳು ತರ್ತಾರೆ, ನಾಯಿಮರಿ ತರ್ತಾರೆ, ಟೈಂಪಾಸ್‌ಗೆ ಲೈಂಗಿಕ ಚಿತ್ರಗಳು ತರ್ತಾರೆ! ಅವರೆಲ್ಲ ನಮ್ಮ ನಾಯಕರು. ಅವರು ಏನೇ ತಂದ್ರೂ ಓಕೆ. ಪರೀಕ್ಷಾ ಕೇಂದ್ರಗಳಿಗೆ ಜನಿವಾರ ತರೋದು ಮಾತ್ರ ಅಪರಾಧ ಎಂದುಕೊಂಡೆ.

"ಮುಂದೆ ಇನ್ನೆಂಥ ಗತಿ ಬರುತ್ತೋ?" ಎಂದಳು ವಿಶಾಲು. ವಿಶ್ವ ಯೋಚಿಸಿ ಹೇಳಿದ.

"ಮುಂದೆ ಸಿ.ಇ.ಟಿ. ಬರೆಯೋವರು ಷರಟು, ಪ್ಯಾಂಟು ಹಾಕ್ಕೊಳ್ಳೋ ಹಾಗಿಲ್ಲ. ಬರೀ ಚೆಡ್ಡಿ, ನೆಟ್ ಬನಿಯನ್‌ನಲ್ಲೇ ಬರೀಬೇಕು. ಅಂಥ ನಿಯಮ ಬಂದ್ರೂ ಬರಬಹುದು. ಪರೀಕ್ಷಾ ಕೊಠಡಿಗೆ ಹೋಗೋ ಮೊದಲು ಬಟ್ಟೆ ಬಿಚ್ಚಿ ಡಾಕ್ಟರ್ ಚೆಕ್‌ಅಪ್‌ಗೆ ಹೋದಾಗ ಮಾಡ್ತಾರಲ್ಲ ಆ ಥರ ಚೆಡ್ಡಿ ಧರಿಸಿ ಪರೀಕ್ಷೆ ಬರೀಬೇಕು. ಆ ದಿನ ದೂರ ಇಲ್ಲ" ಎಂದ ವಿಶ್ವ.

"ನಿನ್ನ ಪ್ರಕಾರ ಚೆಡ್ಡಿಯಾದ್ರೂ ಬಿಡ್ತಾರಲ್ಲ, ಅದು ಸಂತೋಷ" ಎಂದು ನಾನು ಹೇಳಿದಾಗ ವಿಶಾಲೂ ಸಿಟ್ಟು ಮರೆತು ನಗುತ್ತಾ, "ಅದರಿಂದ ಹೆಣ್ಣು ಮಕ್ಕಳಿಗೆ ಇನ್ನೂ ಕಷ್ಟ" ಎಂದಳು. ■

ಖರ್ಗೆ, ದೇವೇಗೌಡರು ಫಿಕ್ಸ್, ಇನ್ನಿಬ್ಬರು ಯಾರು..?

ಮೂರನೇ ಮಹಡಿ
ಸುಭಾಷ್ ಹೂಗಾರ
ಹಿರಿಯ ಪತ್ರಕರ್ತರು
subhash16may@gmail.com

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಈ ತಿಂಗಳು ಎರಡನೇ ವಾರದಲ್ಲಿ ಅಧಿಸೂಚನೆ ಹೊರಡಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಬಿಜೆಪಿಯ ಈರಣ್ಣ ಕಡಾಡಿ ಮತ್ತು ಕೆ.ನಾರಾಯಣ್ ಅವರು ತಮ್ಮ ಆರು ವರ್ಷಗಳ ಅವಧಿ ಪೂರೈಸುತ್ತಿರುವುದರಿಂದ ಈ ಸ್ಥಾನಗಳು ಖಾಲಿಯಾಗಲಿವೆ. ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಮತ್ತು ಕೆಪಿಸಿಸಿ ಗದ್ದುಗೆಗೆ ಪರೋಕ್ಷವಾಗಿ ನಡೆದಿರುವ ಗುದ್ದಾಟದ ಮಧ್ಯೆ ರಾಜ್ಯಸಭೆ ಚುನಾವಣೆ ಕುರಿತಂತೆ ಕಾಂಗ್ರೆಸ್ ಪಕ್ಷದಲ್ಲಿ ಇನ್ನೂ ಚಟುವಟಿಕೆಗಳು ಆರಂಭವಾಗೇ ಇಲ್ಲ ಎಂದು ಮೇಲ್ನೋಟಕ್ಕೆ ಭಾಸವಾಗುತ್ತಿದೆ. ಪಂಚರಾಜ್ಯಗಳ ಚುನಾವಣೆಯ ಫಲಿತಾಂಶಕ್ಕಾಗಿ ಕಾದಿದ್ದ ಪಕ್ಷದ ವರಿಷ್ಠರೂ ಈ ಬಗ್ಗೆ ಗಮನಹರಿಸಿರಲಿಲ್ಲ. ಆದರೆ, ರಾಜ್ಯಸಭೆಯ ಮೇಲೆ ಕಣ್ಣಿಟ್ಟಿರುವ ಆಕಾಂಕ್ಷಿಗಳು ಮಾತ್ರ ಒಳಗೊಳಗೇ ಸಿದ್ಧತೆಗಳನ್ನು ನಡೆಸಿದ್ದು, ಮೇ ಎರಡನೇ ವಾರದ ನಂತರ ಚಟುವಟಿಕೆಗಳು ಗರಿಗೆದರಲಿವೆ. ಸದ್ಯಕ್ಕೆ ವಿಧಾನಸಭೆಯಲ್ಲಿ 135 ಶಾಸಕರ ಬಲ ಹೊಂದಿರುವ ಕಾಂಗ್ರೆಸ್ ಪಕ್ಷ ನಾಲ್ಕರ ಪೈಕಿ ಮೂರು ಸ್ಥಾನಗಳನ್ನು ಗೆಲ್ಲಲು ಅಗತ್ಯವಿರುವಷ್ಟು ಸಂಖ್ಯಾಬಲ ಹೊಂದಿದೆ. ನಾಲ್ಕನೇಯ ಸ್ಥಾನ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಪಾಲಾಗಲಿದೆ. ಕಾಂಗ್ರೆಸ್ ಪಾಲಿನ ಮೂರು ಸ್ಥಾನಗಳ ಪೈಕಿ ಒಂದಂತೂ ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಫಿಕ್ಸ್ ಎನ್ನಲಾಗಿದೆ. ಉಳಿದೆರಡು ಸ್ಥಾನಗಳಿಗೆ ಅಭ್ಯರ್ಥಿಗಳು ಯಾರಾಗಲಿದ್ದಾರೆ ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿ ನಡೆದಿದೆ. 'ನಮ್ಮಲ್ಲಿ ಯಾವುದೇ ಗೊಂದಲವಿಲ್ಲ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಪಕ್ಷದ ವರಿಷ್ಠರು ಸೇರಿ ಸಾಮಾಜಿಕ ನ್ಯಾಯದ ಲೆಕ್ಕಾಚಾರ ಮಾಡಿಯೇ ಒಮ್ಮತದ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ' ಎಂದು ಮುಖಂಡರು ಹೇಳುತ್ತಿದ್ದಾರೆ. ಆದರೆ, ಉಳಿದ ಎರಡು ಸ್ಥಾನಗಳಿಗಾಗಿ ನಾಲ್ಕಾರು ಜನ ಪೈಪೋಟಿ ನಡೆಸಿರುವುದರಿಂದ ಅಂತಿಮವಾಗಿ ಯಾರಿಗೆ ಅದೃಷ್ಟ ಒಲಿಯಲಿದೆ ಎಂಬ ಕುತೂಹಲವಂತೂ ಇದ್ದೇ ಇದೆ.

ಶ್ರೀನಿವಾಸ್, ಕಾತರಕಿ, ಡಾ.ಅಂಜಲಿ:

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಯುಎಇ ಮೇಲಿನ ದಾಳಿಯನ್ನು ನಾನು ಬಲವಾಗಿ ಖಂಡಿಸುತ್ತೇನೆ. ಸಾಮಾನ್ಯ ನಾಗರಿಕರು ಮತ್ತು ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ನಡೆಸುವ ಇಂತಹ ಕೃತ್ಯಗಳು ಸ್ವೀಕಾರಾರ್ಹವಲ್ಲ. ಈ ಸಂಕಷ್ಟದ ಸಮಯದಲ್ಲಿ ಭಾರತವು ಯುಎಇ ಜೊತೆಗೆ ದೃಢವಾಗಿ ನಿಲ್ಲುತ್ತದೆ ಎಂದಿದ್ದಾರೆ.

ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಧಕ್ಕೆ ತರುವ ಇಂತಹ ಹಿಂಸಾಚಾರಗಳನ್ನು ತಕ್ಷಣವೇ ನಿಲ್ಲಿಸಬೇಕು. ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲೆಸಲು ರಾಜತಾಂತ್ರಿಕ ಮಾತುಕತೆಯೇ ಏಕೈಕ ಮಾರ್ಗ ಎಂದು ತಿಳಿಸಿದ್ದಾರೆ. ಗಾಯಾಳು ಭಾರತೀಯರ ಕ್ಷೇಮ ವಿಚಾರಿಸಲು ಮತ್ತು ಅವರಿಗೆ ಅಗತ್ಯ ನೆರವು ನೀಡಲು ಅಬುಧಾಬಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸ್ಥಳೀಯ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದೆ ಎಂದವರು ವಿವರಿಸಿದ್ದಾರೆ.

ಡಚ್ ಹಡಗಿನಲ್ಲಿ ಅಪರೂಪದ ಸೋಂಕಿಗೆ ಮೂವರು ಬಲಿ

ಕೇಪ್ ಟೌನ್: ಡಚ್ ಕ್ರೂಸ್ ಹಡಗಿನಲ್ಲಿ ಮನುಷ್ಯರಿಂದ ಮನುಷ್ಯರಿಗೆ ಹರಡುವ ಅಪರೂಪದ ಹ್ಯಾಂಟವೈರಸ್‌ನಿಂದಾಗಿ ಮೂವರು ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಇದೇ ವೇಳೆ ಎಂವಿ ಹೊಂಡಿಯಸ್ ಹಡಗಿನ ಇಬ್ಬರು ಸಿಬ್ಬಂದಿಗಳಲ್ಲಿ ತೀವ್ರ ಉಸಿರಾಟದ ತೊಂದರೆ ಕಂಡುಬಂದಿರುವುದರಿಂದ ಅವರನ್ನು ವೈದ್ಯಕೀಯ ಚಿಕಿತ್ಸೆಗಾಗಿ ವಿಮಾನ ಮೂಲಕ ನೆದರ್‌ಲ್ಯಾಂಡ್‌ಗೆ ಸಾಗಿಸಲಾಗುತ್ತಿದೆ. ಅಸ್ವಸ್ಥಪೀಡಿತರಲ್ಲಿ ಓರ್ವ ಬ್ರಿಟಿಷ್ ಹಾಗೂ ಮತ್ತೊಬ್ಬ ಡಚ್ ಪ್ರಜೆಯಾಗಿದ್ದಾರೆ. ಈ ಹಡಗು ಒಂದು ತಿಂಗಳ ಹಿಂದೆ ಅರ್ಜೆಂಟೀನಾದಿಂದ ಅಟ್ಲಾಂಟಿಕ್ ಸಾಗರದಲ್ಲಿ ಯಾನ ಮುಂದುವರಿಸಿದ್ದು ಸದ್ಯ ಆಫ್ರಿಕಾದ ಪಶ್ಚಿಮ ಕರಾವಳಿಯ ಕೇಪ್ ವರ್ಡೆ ಬಳಿ ಲಂಗರು ಹಾಕಿದೆ.

ರಷ್ಯಾ ವಿಜಯ ದಿನಕ್ಕೆ ಮುನ್ನ ಜೆಲನ್‌ಸ್ಕಿ, ಪುಟಿನ್ ಕದನ ವಿರಾಮ ಘೋಷಣೆ

ಮಾಸ್ಕೋ: ರಷ್ಯಾದ ವಿಜಯ ದಿನಾಚರಣೆಗೆ ಮೊದಲೇ ಉಕ್ರೇನ್ ಹಾಗೂ ರಷ್ಯಾ ಪ್ರತ್ಯೇಕವಾದ ಕದನವಿರಾಮ ಘೋಷಿಸಿವೆ. ಈ ಕದನವಿರಾಮ ಘೋಷಿಸುವಲ್ಲಿ ಎರಡೂ ದೇಶಗಳ ಮಧ್ಯೆ ಸಮನ್ವಯ ಇರಲಿಲ್ಲ. ಎರಡೂ ದೇಶಗಳು ಏಕಕಾಲದಲ್ಲಿ ಇಂತಹ ಘೋಷಣೆ ಮಾಡಿರುವುದನ್ನು ಗಮನಿಸಿದರೆ ತಾಂತ್ರಿಕವಾಗಿಯಷ್ಟೇ ಅಲ್ಲದೆ, ಉದ್ದೇಶ, ಸಮಯ ಹಾಗೂ ಜಾರಿಯಲ್ಲೂ ವಿಶ್ವಾಸದ ಕೊರತೆ ಇರುವುದು ಗೋಚರಿಸಿದೆ. ಉಕ್ರೇನ್ ಘೋಷಣೆಯನುಸಾರ ಮೇ 5-6ರ ಮಧ್ಯರಾತ್ರಿಯಿಂದ ಕದನವಿರಾಮ ಜಾರಿಗೆ ಬರಲಿದೆ. ಇದೇ ರೀತಿಯಾಗಿ ರಷ್ಯಾವೂ ಕದನವಿರಾಮ ಘೋಷಿಸಿದೆ. ಆದರೆ ಈ ಕದನವಿರಾಮ ಯಾವ ರೀತಿಯಲ್ಲಿ ಜಾರಿಗೆ ಬರುತ್ತದೆ ಎಂಬುದರ ಕುರಿತು ರಷ್ಯಾದಿಂದ ಯಾವುದೇ ಔಪಚಾರಿಕ ಸಂವಹನ ನಡೆದಿಲ್ಲ. ಜೆಲೆನ್ಸ್ಕಿ ಹೇಳುವ ಪ್ರಕಾರ, ಕದನವಿರಾಮ ಘೋಷಣೆ ಕುರಿತು ರಷ್ಯಾದಿಂದ ಇದುವರೆಗೂ ಯಾವುದೇ ಘೋಷಣೆ ಹೊರಬಿದ್ದಿಲ್ಲ.

ವಿಜಯ್ ಸರ್ಕಾರ ರಚನೆಗೆ ಕೈ, ಸಣ್ಣ ಪಕ್ಷಗಳ ಬೆಂಬಲ ಕೋರಿಕೆ?

ಅತಂತ್ರ ವಿಧಾನಸಭೆಯಲ್ಲಿ ಬಹುಮತಕ್ಕೆ 10 ಶಾಸಕರು ಅಗತ್ಯ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ-ರಾಜಕಾರಣಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಚುನಾವಣಾ ತೀರ್ಪು ಅತಂತ್ರ ವಿಧಾನಸಭೆಗೆ ಕಾರಣವಾಗಿದೆ. ಟಿವಿಕೆ ಈಗ ಕಾಂಗ್ರೆಸಿನಿಂದ ಬೆಂಬಲ ಕೋರುವ ಕುರಿತು ಮಾತುಕತೆ ನಡೆಯುತ್ತಿದೆ. ಆದರೂ ಇಲ್ಲಿಯವರೆಗೂ ಔಪಚಾರಿಕ ಮಾತುಕತೆ ನಡೆದಿಲ್ಲ. ವಿಜಯ್ ಈ ಸಣ್ಣ ಪಕ್ಷಗಳನ್ನು ಆಡಳಿತಾರೂಢ ಮಿತ್ರಕೂಟಕ್ಕೆ ಯಶಸ್ವಿಯಾಗಿ ತಂದರೆ, ಸ್ಥಿರ ಆಡಳಿತವನ್ನು ರಚಿಸಲು ಅಗತ್ಯವಾದ ಸಂಖ್ಯೆಗಳನ್ನು ಪಡೆದುಕೊಳ್ಳಬಹುದು.

234 ಸದಸ್ಯರ ಬಲದ ಸದನದಲ್ಲಿ ಯಾವುದೇ ಪಕ್ಷ ಅಥವಾ ಒಕ್ಕೂಟವು ಸರ್ಕಾರ ರಚಿಸಲು 118 ಸ್ಥಾನಗಳ ಸರಳ ಬಹುಮತ ಹೊಂದಿರಬೇಕು. ಆದರೆ ಟಿವಿಕೆ 108 ಸ್ಥಾನಗಳನ್ನು ಮಾತ್ರ ಪಡೆದು ಸರಳ ಬಹುಮತಕ್ಕೆ ಇನ್ನೂ 10 ಸ್ಥಾನಗಳನ್ನು ಹೊಂದಲು ಪರದಾಟ ನಡೆಸುತ್ತಿರುವುದರಿಂದ ಎಲ್ಲರ ಕಣ್ಣು ವಿಜಯ್ ಅವರ ಮೇಲೆ ನೆಟ್ಟಿದೆ. ಸ್ಪಷ್ಟ ಜನಾದೇಶ ಇಲ್ಲದ ಕಾರಣ ತಮಿಳುನಾಡಿನಲ್ಲಿ ಟಿವಿಕೆ ಅಧಿಕಾರದ ಹಿಡಿತವನ್ನು ಹೇಗೆ ಭದ್ರಪಡಿಸಿಕೊಳ್ಳಬಹುದು ಎಂಬುದರ ಸಂಭಾವ್ಯತೆಗಳು ಇಲ್ಲಿವೆ.

> ತಮಿಳುನಾಡಿನ ಜನರು ಟಿವಿಕೆ ಪರ ಜನಾದೇಶ ನೀಡಿರುವುದರಿಂದ ಆ ಪಕ್ಷಕ್ಕೆ ಬೆಂಬಲ ನೀಡುವ ಬಗ್ಗೆ ಕಾಂಗ್ರೆಸ್ ಪರಿಶೀಲನೆ ನಡೆಸುತ್ತಿದೆ. ಒಂದೆರಡು ದಿನಗಳಲ್ಲಿ ಕಾಂಗ್ರೆಸ್ ಈ ವಿಷಯವಾಗಿ ತೀರ್ಮಾನಕ್ಕೆ ಬರಬಹುದು.
>
> ▪ **ಕೆ.ಸಿ.ವೇಣುಗೋಪಾಲ್**, ಕಾಂಗ್ರೆಸ್ ನಾಯಕ

ಸಣ್ಣ ಪಕ್ಷಗಳೊಂದಿಗೆ ಮೈತ್ರಿ

ಚುನಾವಣೋತ್ತರದಲ್ಲಿ ಸಣ್ಣ ಪಕ್ಷಗಳೊಂದಿಗೆ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಟಿವಿಕೆ ಬಹುಮತ ತಲುಪಬಹುದು. ಟಿವಿಕೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದರೂ ಪ್ರಮುಖ ಬಣಗಳಿಂದ ಹೊರಗಿರುವ ಅಥವಾ ಹಿಂದಿನ ಮೈತ್ರಿಗಳಿಂದ ಹೊರಬರಲು ಸಿದ್ಧರಿರುವ ಪಕ್ಷಗಳ ಶಾಸಕರ ಬೆಂಬಲ ಪಡೆಯಬಹುದು. ಕಾಂಗ್ರೆಸ್, ಐಯುಎಂಎಲ್, ಎಡ ಪಕ್ಷಗಳು (ಸಿಪಿಐ, ಸಿಪಿಐ-ಎಂ), ಅಥವಾ ವಿಸಿಕೆಯಂತಹ ಸಣ್ಣ ಪಕ್ಷಗಳು ಈ ಬಹುಮತಕ್ಕೆ ನಿರ್ಣಾಯಕವಾಗಬಹುದು. ಕಾಂಗ್ರೆಸ್ ಐದು ಸ್ಥಾನಗಳನ್ನು ಗೆದ್ದಿದ್ದರೆ, ವಿಸಿಕೆ, ಸಿಪಿಐ(ಎಂ), ಸಿಪಿಐ ಮತ್ತು ಐಯುಎಂಎಲ್ ತಲಾ ಎರಡು ಸ್ಥಾನಗಳನ್ನು ಗೆಲುವು ಸಾಧಿಸಿವೆ.

ಬಾಹ್ಯ ಬೆಂಬಲ ಕೋರುವುದು

ಸೈದ್ಧಾಂತಿಕ ಅಥವಾ ರಾಜಕೀಯ ಹಿತಾಸಕ್ತಿಗಳ ಸಂಘರ್ಷದಿಂದಾಗಿ ಔಪಚಾರಿಕ ಒಕ್ಕೂಟವನ್ನು ಹೆಣೆಯುವುದು ತುಂಬಾ ಜಟಿಲಕರ ಸಂಗತಿ. ಹೀಗಾಗಿ ಟಿವಿಕೆ ಸಣ್ಣ ಪಕ್ಷಗಳಿಂದ ಬಾಹ್ಯ ಬೆಂಬಲ ಪಡೆಯಬಹುದು. ಈ ಸನ್ನಿವೇಶದಲ್ಲಿ ಸಣ್ಣ ಪಕ್ಷಗಳು ಔಪಚಾರಿಕ ಸಚಿವ ಸಂಪುಟದ ಭಾಗವಾಗಿರದೇ ನಿರ್ಣಾಯಕ ವಿಷಯಗಳಲ್ಲಿ ವಿಶೇಷವಾಗಿ ಬಹುಮತ ಪರೀಕ್ಷೆಗಳು, ಬಜೆಟ್ ಅಥವಾ ಅವಿಶ್ವಾಸ ನಿರ್ಣಯಗಳ ಸಮಯದಲ್ಲಿ - ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡುತ್ತವೆ. ವಿರೋಧ ಪಕ್ಷಗಳಿಂದ ಸಂಭಾವ್ಯ ಪಕ್ಷಾಂತರ ಚುನಾವಣಾ ಫಲಿತಾಂಶಗಳ ಅನುಸಾರ ಡಿಎಂಕೆ ಮತ್ತು ಎಐಎಡಿಎಂಕೆ ಮೈತ್ರಿಕೂಟಗಳು ದುರ್ಬಲ ಸ್ಥಿತಿಯಲ್ಲಿವೆ. ಟಿವಿಕೆ ಈಗ ಈ ಮೈತ್ರಿಕೂಟಗಳಲ್ಲಿ ಒಡಕು ಮೂಡಿಸಿದರೆ ಇಂತಹ ಮಿತ್ರಕೂಟದ ನಾಯಕತ್ವ ಕುರಿತು ಅಪಸ್ವರ ಹೊಂದಿರುವ ಅಥವಾ ಅನ್ಯ ಕಾರಣಗಳಿಂದ ಅವುಗಳ ಶಾಸಕರು ಟಿವಿಕೆ ಸರ್ಕಾರವನ್ನು ಬೆಂಬಲಿಸಲು ಪಕ್ಷಾಂತರಗೊಳ್ಳಬಹುದು

ಬಂಗಾಳ ಚುನಾವಣೋತ್ತರ ಹಿಂಸೆ : 2 ಕಾರ್ಯಕರ್ತರ ಬಲಿ

ಟಿಎಂಸಿಯ ಹಲವು ಕಚೇರಿಗಳು ಧ್ವಂಸ

ಕೋಲ್ಕತಾ: ಪಶ್ಚಿಮಬಂಗಾಳದಲ್ಲಿ ಚುನಾವಣಾ ಫಲಿತಾಂಶ ಘೋಷಣೆಯಾದ ಬಳಿಕ ರಾಜಕೀಯ ಪಕ್ಷಗಳ ಕಾರ್ಯಕರ್ತರ ಹಿಂಸಾಚಾರ ತಾರಕಕ್ಕೇರಿದ್ದು ಬಿಜೆಪಿ ಹಾಗೂ ಟಿಎಂಸಿಯ ತಲಾ ಒಬ್ಬೊಬ್ಬ ಕಾರ್ಯಕರ್ತರು ಹತ್ಯೆಗೀಡಾಗಿದ್ದಾರೆ. ಹೌರಾದ

ನಾರಾಯಣಪುರದಲ್ಲಿ ಯಾದವ್ ಬಾರ್(48) ಎನ್ನುವ ಬಿಜೆಪಿ ಕಾರ್ಯಕರ್ತನನ್ನು ತೃಣಮೂಲ ಕಾಂಗ್ರೆಸಿಗರು ಥಳಿಸಿ ಕೊಂದಿದ್ದಾರೆಂದು ಆರೋಪಿಸಲಾಗಿದೆ. ಚುನಾವಣಾ ಫಲಿತಾಂಶ ಹೊರಬಿದ್ದ ನಂತರ ನಡೆದ ವಿಜಯೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದ ಯಾದವ್ ಅವರನ್ನು ಅವರ ಮನೆಯ ಸಮೀಪದಿಂದ ರಾತ್ರಿ 11 ಗಂಟೆ ವೇಳೆ ಟಿಎಂಸಿ ಕಾರ್ಯಕರ್ತರು ಹೊತ್ತೊಯ್ದು ಮಾರಣಾಂತಿಕವಾಗಿ ಥಳಿಸಿ ಕೊಂದು ಹಾಕಿದ್ದಾರೆ ಎನ್ನಲಾಗುತ್ತಿದೆ.

ಇದೇ ವೇಳೆ ಬಿರ್ಭೂಮ್‌ನ ನನೂರ್‌ನಲ್ಲಿ ಅಬೀರ್ ಶೇಖ್ ಎನ್ನುವ ಟಿಎಂಸಿ ಕಾರ್ಯಕರ್ತನನ್ನು ಬಿಜೆಪಿ ಬೆಂಬಲಿಗರು ಕೊಲೆ ಮಾಡಿದ್ದಾರೆ. ಆತ ನನೂರ್‌ನ ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವಾಗ ಬಿಜೆಪಿ ಕಾರ್ಯಕರ್ತರು ಅಡ್ಡಗಟ್ಟಿ ಹರಿತವಾದ ಆಯುಧಗಳಿಂದ ಕೊಂದು ಹಾಕಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ತನ್ಮಧ್ಯೆ ತೃಣಮೂಲ ಕಾಂಗ್ರೆಸಿನ ಹಲವಾರು ಕಚೇರಿಗಳು ಹಾಗೂ ಕಾರ್ಯಕರ್ತರ ಮೇಲೆ ವ್ಯಾಪಕ ದಾಳಿ ನಡೆದಿದೆ. ಟಿಎಂಸಿ ಮೂಲಗಳ ಪ್ರಕಾರ, ಟಾಲಿಗಂಜ್, ಕಸ್ಬಾ, ಬರುಯಿಪುರ್, ಕಮರ್ಹತಿ ಮತ್ತು ಬಾರಾನಗರ ಸೇರಿದಂತೆ ಹೌರಾ ಮತ್ತು ಬೆಹಾರ್ಂಪೋರ್‌ನಂತಹ ಜಿಲ್ಲೆಗಳಲ್ಲಿನ ಪಕ್ಷದ ಕಚೇರಿಗಳನ್ನು ಧ್ವಂಸಗೊಳಿಸಲಾಗಿದೆ.

ಬೆಲೆಘಾಟದಲ್ಲಿ, ಸ್ಥಳೀಯ ಪಕ್ಷದ ಕಚೇರಿಯ ಮೇಲೆ ದಾಳಿ ನಡೆಸಲಾಯಿತು ಮತ್ತು ಬ್ಲಾಕ್ ಅಧ್ಯಕ್ಷ ಪಬಿತ್ರ ಬಿಸ್ವಾಸ್ ಮೇಲೆ ಹಲ್ಲೆ ನಡೆಸಲಾಯಿತು, ಕೌನ್ಸಿಲರ್ ಸುಶಾಂತ ಘೋಷ್ ಅವರ ಕಚೇರಿಗೂ ಹಾನಿಯಾಗಿದೆ.

ಬಂಗಾಳ, ಅಸ್ಸಾಂ: ಗೆದ್ದ ಕಾಂಗ್ರೆಸಿಗರೆಲ್ಲ ಮುಸ್ಲಿಮರು

ಬಿಜೆಪಿ ಎದುರಿಸಲು ಮುಸ್ಲಿರಿಗೆ ಹೆಚ್ಚು ಒತ್ತು

ನವದೆಹಲಿ: ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಸ್ಪರ್ಧಿಸಿದ 390 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಕೇವಲ 21 ಸ್ಥಾನಗಳನ್ನು ಗೆದ್ದಿದೆ. ಆದರೆ 21 ಮಂದಿ ಕಾಂಗ್ರೆಸ್ ವಿಜೇತರಲ್ಲಿ 20 ಮುಸ್ಲಿಂ ಅಭ್ಯರ್ಥಿಗಳಾಗಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ

ಮೈತ್ರಿಕೂಟ ಸರ್ಕಾರ ರಚಿಸಲು ಮುಂದಾದರೂ ಅದರಲ್ಲಿ ಇಂಡಿಯನ್ ಯುನಿಯನ್ ಮುಸ್ಲಿಮ್ ಲೀಗ್ ಪ್ರಮುಖ ಮಿತ್ರಪಕ್ಷವಾಗಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸಿನಲ್ಲಿ ಮುಸ್ಲಿಮ್ ಶಾಸಕರ ಸಂಖ್ಯೆ ಹೆಚ್ಚಾಗುತ್ತಿದೆ. 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಹೀನಾಯ ಸೋಲಿನ ನಂತರ ಸಲ್ಲಿಸಲಾಗಿದ್ದ ಕಾಂಗ್ರೆಸ್‌ನ ಆಂತರಿಕ ವರದಿಯಲ್ಲಿ ಮುಸ್ಲಿಮರು ಪಕ್ಷಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿರುವುದರ ಬಗ್ಗೆ ಉಲ್ಲೇಖವಾಗಿತ್ತು. 2026ರ ವಿಧಾನಸಭಾ ಚುನಾವಣೆಯಲ್ಲಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಎರಡೂ ರಾಜ್ಯಗಳಲ್ಲಿ ಹಿಂದೂ ಮತಗಳ ಕ್ರೋಢೀಕರಣ ಕಂಡುಬಂದಿದೆ. ಆದರೆ ವಿವಿಧ ರೀತಿಯ ಸಿದ್ಧಾಂತಗಳು ಹಾಗೂ ಮತ್ತು ನಾಯಕರನ್ನು ಹೊಂದಿರುವ ಹಳೆಯ ಪಕ್ಷವಾದ ಕಾಂಗ್ರೆಸ್, ಅಲ್ಪಸಂಖ್ಯಾತರೊಂದಿಗೆ ನಿಕಟ ಸಂಬಂಧ ಹೊಂದಿದೆ. ಬಿಜೆಪಿ ಹಿಂದೂ ಮತದಾರರ ಕ್ರೋಢೀಕರಣವನ್ನು ದುಪ್ಪಟ್ಟಾಗಿಸಿದರೆ ಕಾಂಗ್ರೆಸ್ ತನ್ನ ಮಿತ್ರಪಕ್ಷಗಳ ಆಯ್ಕೆ ಮತ್ತು ಉಳಿವಿಗಾಗಿ ಶ್ರಮಿಸುತ್ತಿದೆ. ಹೀಗಾಗಿ ಮುಸ್ಲಿಂ ಮತದಾರರ ಕಡೆಗೆ ಕಾಂಗ್ರೆಸ್ ಹೆಚ್ಚು ಒಲವು ತೋರಿದೆ. ಈ ಕಾರಣದಿಂದ ಕಾಂಗ್ರೆಸ್ ಅಲ್ಪಸಂಖ್ಯಾತರನ್ನು ಮೆಚ್ಚಿಸುವ ಪಕ್ಷವೆಂದು ಬಿಜೆಪಿ ಬಿಂಬಿಸುತ್ತಿರುವುದಲ್ಲದೆ, 2014ರಿಂದಲೇ ಕಾಂಗ್ರೆಸ್ ವಿರುದ್ಧ ಪ್ರತಿ ಧ್ರುವೀಕರಣ ತಂತ್ರ ಅನುಸರಿಸುತ್ತಿದೆ. ಅಸ್ಸಾಂನಲ್ಲಿ ಕಾಂಗ್ರೆಸ್ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡ ನಂತರ 126 ಸ್ಥಾನಗಳ ಪೈಕಿ 99ರಲ್ಲಿ ಸ್ಪರ್ಧಿಸಿತ್ತು, ಆದರೆ ಅದು ಕೇವಲ 19ರಲ್ಲಿ ಮಾತ್ರ ಜಯಗಳಿಸಿತು. ಹಾಗಿದ್ದರೂ ಗೆದ್ದ 18 ಶಾಸಕರು ಮುಸ್ಲಿಮರು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ 292 ಸ್ಥಾನಗಳಲ್ಲಿ ಸ್ಪರ್ಧಿಸಿ ಎರಡರಲ್ಲಿ ಗೆದ್ದರೂ ಅವರಿಬ್ಬರೂ ಮುಸ್ಲಿಮರು.

ಮನೆಗೆಲಸ ಮಾಡ್ತಿದ್ದ ಮಹಿಳೆ ಈಗ ಬಂಗಾಳ ಬಿಜೆಪಿ ಶಾಸಕಿ

ಕೋಲ್ಕತಾ: ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣಾ ಫಲಿತಾಂಶವು ಇಡೀ ದೇಶದ ಗಮನ ಸೆಳೆದಿದೆ. ಈ ಚುನಾವಣೆಯಲ್ಲಿ ಎಲ್ಲಕ್ಕಿಂತ ಹೆಚ್ಚು

ಚರ್ಚೆಯಾಗುತ್ತಿರುವುದು ಕಲಿತಾ ಮಾಝಿ ಎಂಬ ಅಸಾಮಾನ್ಯ ಮಹಿಳೆಯ ಗೆಲುವು. ಕಳೆದ ಎರಡು ದಶಗಕಗಳಿಂದ ತಿಂಗಳಿಗೆ ಕೇವಲ 2,500 ರೂಪಾಯಿ ವೇತನಕ್ಕೆ ನಾಲ್ಕು ಮನೆಗಳಲ್ಲಿ ಪಾತ್ರೆ ತೊಳೆದು, ಕಸ ಗುಡಿಸಿ ಜೀವನ ನಡೆಸುತ್ತಿದ್ದ ಈ ಬಡ ಮಹಿಳೆ, ಈಗ ಶಾಸಕಿಯಾಗಿ ವಿಧಾನಸಭೆ ಪ್ರವೇಶಿಸಿದ್ದಾರೆ. ಬಿಜೆಪಿ ಟಿಕೆಟ್‌ನಿಂದ ಔಸಾಗ್ರಾಂ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಲಿತಾ ಮಾಝಿ, ಟಿಎಂಸಿ ಅಭ್ಯರ್ಥಿ ಶ್ಯಾಮ ಪ್ರಸನ್ನ ಲೋಹರ್ ಅವರ ವಿರುದ್ಧ 12,535 ಮತಗಳ ಭರ್ಜರಿ ಅಂತರದಿಂದ ಜಯಗಳಿಸಿದ್ದಾರೆ. ಕಲಿತಾ ಒಟ್ಟು 1,07,692 ಮತಗಳನ್ನು ಪಡೆದು ಇತಿಹಾಸ ಸೃಷ್ಟಿಸಿದ್ದಾರೆ.

ಸುಪ್ರೀಂ ನ್ಯಾಯಮೂರ್ತಿಗಳ ಸಂಖ್ಯೆ 34 ರಿಂದ 38ಕ್ಕೆ ಏರಿಕೆ

ನವದೆಹಲಿ: ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರ ಪ್ರಮಾಣವನ್ನು 34 ರಿಂದ 38ಕ್ಕೆ ಏರಿಸಲು ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ಹಿಂದೆ 2019ರಲ್ಲಿ ನ್ಯಾಯಾಧೀಶರುಗಳ ಸಂಖ್ಯೆಯನ್ನು (ಮು.ನ್ಯಾ. ಹೊರತು) 30 ರಿಂದ 33ಕ್ಕೆ ಏರಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ 'ಸುಪ್ರೀಂ ಕೋರ್ಟ್ (ನ್ಯಾಯಾಧೀಶರ ಸಂಖ್ಯೆ) ತಿದ್ದುಪಡಿ ಮಸೂದೆ 2026ರಲ್ಲಿ ಸಂಖ್ಯೆಯನ್ನು 4ಕ್ಕೆ ಏರಿಸಲು 1956ರ ಸುಪ್ರೀಂ ಕೋರ್ಟ್ (ನ್ಯಾ. ಸಂಖ್ಯೆ) ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ. ಆ ಪ್ರಕಾರ ಇದೀಗ ನ್ಯಾಯಮೂರ್ತಿಗಳ ಸಂಖ್ಯೆ ಮು.ನ್ಯಾ. ಸೇರಿದಂತೆ 34 ರಿಂದ 38ಕ್ಕೆ ಏರಿಸಲಾಗಿದೆ.

ಪಿಐಲ್ 'ಪೈಸಾ ಇಂಟರೆಸ್ಟ್ ಲಿಟಿಗೇಶನ್' ಆಗಿದೆ: ಸುಪ್ರೀಂ

ನವದೆಹಲಿ: ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ದುರ್ಬಳಕೆ ಆಗುತ್ತಿದ್ದು ಈಗ ಪೈಸಾ ಮತ್ತು ರಾಜಕೀಯ ಹಿತಾಸಕ್ತಿ ಅರ್ಜಿಯಾಗೂ ಮಾರ್ಪಟ್ಟಿದೆ ಎಂದು ಮಂಗಳವಾರ ಸುಪ್ರೀಂಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಶಬರಿಮಲೆ ಮರುಪರಿಶೀಲನಾ ಅರ್ಜಿಗಳಿಗೆ ಸಂಬಂಧಿಸಿದಂತೆ ಸಾಂವಿಧಾನಿಕ ಪೀಠದ ಮುಂದೆ ನಡೆಯುತ್ತಿದ್ದ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳು ಈ ಕಟು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಸಿಜೆಐ ನೇತೃತ್ವದ ಪೀಠದಲ್ಲಿ ನ್ಯಾ. ಬಿ.ವಿ.ನಾಗರತ್ನ ಅವರು ಮಾತನಾಡಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈಗ ಖಾಸಗಿ ಹಿತಾಸಕ್ತಿ, ಪ್ರಚಾರದ ಹಿತಾಸಕ್ತಿ, ಪೈಸಾ ಹಿತಾಸಕ್ತಿ ಮತ್ತು ರಾಜಕೀಯ ಹಿತಾಸಕ್ತಿಯ ಅರ್ಜಿಗಳಾಗಿ ಮಾರ್ಪಟ್ಟಿವೆ. ಇವೆಲ್ಲವನ್ನೂ ಈಗ ಪಿಐಎಲ್ ಎಂದೇ ಕರೆಯಲಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಕೇವಲ ಪತ್ರಿಕಾ ವರದಿಗಳನ್ನು ಆಧರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸುವ ಪ್ರವೃತ್ತಿಯನ್ನು ಸಿಜೆಐ ಸೂರ್ಯ ಕಾಂತ್ ಖಂಡಿಸಿದರು.

ಬಿಜೆಪಿ ಸಿಎಂಗಳ ಆಯ್ಕೆಗೆ ಅಮಿತ್‌ಶಾ, ನಡ್ಡಾ ವೀಕ್ಷಕರು

ನವದೆಹಲಿ: ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ವಿಧಾನಸಭೆಗಳ ಶಾಸಕಾಂಗ ಪಕ್ಷಗಳ ನಾಯಕರ (ಮುಖ್ಯಮಂತ್ರಿಗಳ) ಆಯ್ಕೆ ಪ್ರಕ್ರಿಯೆಗೆ ಕೇಂದ್ರ ವೀಕ್ಷಕರುಗಳನ್ನಾಗಿ ಕ್ರಮವಾಗಿ ಕೇಂದ್ರ ಸಚಿವರುಗಳಾದ ಅಮಿತ್ ಶಾ ಹಾಗೂ ಜಗತ್ ಪ್ರಕಾಶ್ ನಡ್ಡಾರನ್ನು ಭಾರತೀಯ ಜನತಾ ಪಕ್ಷವು ಮಂಗಳವಾರ ನಿಯೋಜನೆ ಮಾಡಿದೆ. ಜೊತೆಗೆ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನು ಅಸ್ಸಾಂಗೆ ಹಾಗೂ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿರನ್ನು ಪಶ್ಚಿಮ ಬಂಗಾಳಕ್ಕೆ ಸಹ ವೀಕ್ಷಕರುಗಳನ್ನಾಗಿ ನಿಯೋಜಿಸಿ ಪಕ್ಷವು ಅಧಿಸೂಚನೆ ಹೊರಡಿಸಿದೆ.

ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರವನ್ನು ಬಿಜೆಪಿ ಕಿತ್ತೊಗೆದಿದೆ. ಅಲ್ಲದೆ ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿದೆ.

ಮೋದಿಗೆ ಟ್ರಂಪ್ ಅಭಿನಂದನೆ

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಅಭಿನಂದನೆ ತಿಳಿಸಿದ್ದಾರೆ. ಬಂಗಾಳದ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಟ್ರಂಪ್, "ನನ್ನ ಆತ್ಮೀಯ ಗೆಳೆಯ ನರೇಂದ್ರ ಮೋದಿ ಅವರಿಗೆ ಅಭಿನಂದನೆಗಳು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಾಧಿಸಿರುವ ಈ ಗೆಲುವು ಅದ್ಭುತವಾದುದು. ಮೋದಿ ಒಬ್ಬ ಶಕ್ತಿಶಾಲಿ ಮತ್ತು ದಕ್ಷ ನಾಯಕ 'ಎಂದು ಹೇಳಿದ್ದಾರೆ.

ಸುದ್ದಿ ಸಮಗ್ರ

ಭರವಸೆಗಳ ಭಾರದಲ್ಲಿ ಟಿ.ವಿ.ಕೆ.

ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವರೇ ವಿಜಯ್?

ತಮಿಳಿಗ ವೆಟ್ರಿ ಕಜ್ಜಗಂ (ಟಿ.ವಿ.ಕೆ.) ತಮಿಳುನಾಡಿನಲ್ಲಿ ಗೆದ್ದು ಬೀಗಿದ್ದಾಯಿತು. ಒಟ್ಟು 234 ಸ್ಥಾನಗಳ ಪೈಕಿ ಅತ್ಯಧಿಕ 107 ಸ್ಥಾನ ಗಳಿಸಿದ ಏಕೈಕ ದೊಡ್ಡ ಪಕ್ಷವಾಗಿ ಅಧಿಕಾರಕ್ಕೇರುವುದೂ ಬಹುತೇಕ ಖಚಿತವಾಗಿದೆ. ಸರ್ಕಾರ ರಚನೆಗೆ ಅಗತ್ಯವಾದ 118 ಸ್ಥಾನಗಳಿಗೆ ಇನ್ನು ಕೇವಲ 11 ಸ್ಥಾನಗಳಷ್ಟೇ ಕೊರತೆ ಇರುವುದರಿಂದ ಆ ಸ್ಥಾನಗಳಿಗಾಗಿ ಇನ್ನೊಂದು ಪಕ್ಷದ ಬೆಂಬಲ ಪಡೆದು ಮೈತ್ರಿ ಸರ್ಕಾರ ರಚನೆಗೇನೋ ಅವಕಾಶವಿದೆ. ಆದರೆ ಚುನಾವಣಾ ಪೂರ್ವದಲ್ಲಿ ಟಿ.ವಿ.ಕೆ. ನಾಯಕ ಹಾಗೂ ಚಿತ್ರ ನಟ ವಿಜಯ್ ತಮ್ಮ ಪ್ರಣಾಳಿಕೆಯಲ್ಲಿ ನಿಬ್ಬೆರಗಾಗುವಂತಹ ಹಾಗೂ ಕೆಲವೊಮ್ಮೆ ಕೇವಲ 'ಆಮಿಷ ಹಾಗೂ ಅಸಜಹ' ಎನಿಸುವಂತಹ ಭರ್ಜರಿ ಭರವಸೆಗಳ ಭಾರ ಹೊತ್ತಿದ್ದಾರೆ. ತಾವು ರಚಿಸುವ ಹೊಸ ಸರ್ಕಾರದಲ್ಲಿ ಅವನ್ನು ನಿಜಕ್ಕೂ ಈಡೇರಿಸುವರೇ ಎಂಬ ಕುತೂಹಲ ಎಲ್ಲರಲ್ಲೂ ಮನೆ ಮಾಡಿದೆ. ಈ ವಿಷಯವಾಗಿ ಒಂದು ಸಮಗ್ರ ನೋಟ ಇಲ್ಲಿದೆ:

ಭರವಸೆಗಳ ಪ್ರಮಾಣ

ವಿಜಯ್ ಒಟ್ಟು 10 ವಲಯಗಳಿಗೆ ಸಂಬಂಧಿಸಿದಂತೆ ಒಟ್ಟಾರೆ 26 ಭರವಸೆಗಳನ್ನು ನೀಡಲಾಗಿದೆ. ಈ ಪೈಕಿ ಮಹಿಳೆಯರಿಗೆ 6, ಮಕ್ಕಳಿಗೆ 2, ಮನೆಗಳಿಗೆ 2, ರೈತರಿಗೆ 3, ಯವಜನ/ವಿದ್ಯಾರ್ಥಿಗಳಿಗೆ 6, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ 4 ಮತ್ತು ಮೀನುಗಾರರಿಗೆ 3 ಆಶ್ವಾಸನೆಗಳನ್ನು ನೀಡಲಾಗಿದೆ.

ಮಹಿಳೆಯರಿಗೆ ವರ್ಷಕ್ಕೆ 6 ಉಚಿತ ಗ್ಯಾಸ್ ಸಿಲಿಂಡರ್!

ಅಡುಗೆ ಅನಿಲ ಪೂರೈಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಆದರೆ ಪೂರೈಸಿದ್ದನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದು ಆಯಾ



ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುತ್ತದೆ. ಸಿಲಿಂಡರ್‌ಗಳಿಗೆ ಕೃತಕ ಅಭಾವ ಉಂಟಾಗದಂತೆ ನೋಡಿಕೊಳ್ಳುವುದು, ಗ್ರಾಹಕರಿಗೆ ಸಮರ್ಪಕ ವಿತರಣೆ ಮಾಡುವುದು, ಕಾಳಸಂತೆ ವ್ಯಾಪಾರ ತಡೆಗಟ್ಟುವುದು ಇತ್ಯಾದಿ ರಾಜ್ಯ ಸರ್ಕಾರದ ಕರ್ತವ್ಯ.ಸದ್ಯಕ್ಕೆ ಪಶ್ಚಿಮ ಏಷ್ಯಾ ಯುದ್ಧದ ಬಿಕ್ಕಟ್ಟಿನ ನಡುವೆ ಭಾರತಕ್ಕೆ ಅಡುಗೆ ಅನಿಲ ಆಮದು ಮಾಡಿಕೊಳ್ಳುವುದೇ ಹರಸಾಹಸವಾಗಿದ್ದು, ಇತರ ದೇಶಗಳಿಗೆ ಹೋಲಿಸಿದರೆ ಭಾರತ ಜಾಗತಿಕವಾಗಿ ತನ್ನ ಪ್ರಭಾವ ಬಳಸಿ ಹೇಗೋ ಅಡುಗೆ ಅನಿಲ ಪೂರೈಕೆ ನಿಯಂತ್ರಿಸಿ, ನಿಭಾಯಿಸುತ್ತಿದೆ.

ಇಂತಹ ಸ್ಥಿತಿಯಲ್ಲಿ ವಿಜಯ್ ಈ ಭರವಸೆಯನ್ನು ಸಮರ್ಪಕವಾಗಿ ಈಡೇರಿಸುವರೇ?

ಕಷ್ಟಸಾಧ್ಯವಾಗಿರುವ ಭರವಸೆಗಳು

ಮದುವೆಗೆ 8 ಗ್ರಾಂ ಚಿನ್ನ ಮತ್ತು ರೇಷ್ಮೆ ಸೀರೆ!

ಜಾಗತಿಕ ವಿದ್ಯಮಾನಗಳಿಂದಾಗಿ ಇತ್ತೀಚೆಗೆ ಕೆಲವು ತಿಂಗಳುಗಳಿಂದ ಚಿನ್ನದ ದರಗಳು ಗಗನ ಮುಟ್ಟಿದೆ.

ಪ್ರಸ್ತುತ 1 ಗ್ರಾಂ ಚಿನ್ನ ಅಂದಾಜು 15 ಸಾವಿರ ಅಂದರೂ 8 ಗ್ರಾಂ ಚಿನ್ನಕ್ಕೆ 1 ಲಕ್ಷ 20 ಸಾವಿರ ರೂ. ಆಗುತ್ತದೆ. ಪ್ರತಿ ವಧುವಿಗೆ ಈ ಪ್ರಮಾಣದ ಚಿನ್ನ ಹಾಗೂ ರೇಷ್ಮೆ ಸೀರೆ ಒದಗಿಸಲು ಸಾಧ್ಯವೆ?

▪ **ಮಕ್ಕಳ ಶಿಕ್ಷಣಕ್ಕೆ ವರ್ಷಕ್ಕೆ 15 ಸಾವಿರ ರೂ. ಸಹಾಯ ಧನ**

▪ **ನವಜಾತ ಶಿಶುವಿಗೆ ಚಿನ್ನದ ಉಂಗುರ**

ಇವರೆಡೂ ಭರವಸೆಗಳೂ ಸಹ ಈಡೇರಿಸುವುದು ಕಷ್ಟಸಾಧ್ಯ. ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ



ಪ್ರವೇಶ ಪಡೆಯುವ ಮಕ್ಕಳು ಎಂಬ ಲೆಕ್ಕ ಇಟ್ಟುಕೊಂಡರೂ ತಮಿಳುನಾಡಿನಾದ್ಯಂತ ಇರುವ ಶಾಲಾ ಮಕ್ಕಳಿಗೆ ಈ ಸೌಲಭ್ಯ ಸಮರ್ಪಕವಾಗಿ ತಲುಪಿಸಲು ಸಾಧ್ಯವೇ? ಅಂತೆಯೇ ಪ್ರತಿ ದಿನ ಜನಿಸುವ ಶಿಶುಗಳಿಗೆ ಚಿನ್ನದ ಉಂಗುರ ಮಾಡಿಸಿಕೊಡುವುದು ಎಷ್ಟು ಕಾರ್ಯಸಾಧು, ಇದನ್ನು ಹೇಗೆ ನಿರ್ವಹಿಸುವರು ಎಂಬುದು ಕುತೂಹಲಕಾರಿ!

ಉಳಿದ ಭರವಸೆಗಳ ಕತೆಯೇನು

ಉಳಿದಂತೆ ಮನೆ ಯಜಮಾನಿಗೆ ಮಾಸಿಕ 2,500 ರೂ. ಸಹಾಯಧನ, ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ, ಪದವೀಧರರಿಗೆ 4 ಸಾವಿರ ರೂ. ನಿರುದ್ಯೋಗ ಭತ್ಯೆ, ವೃದ್ಧರು ಹಾಗೂ ವಿಕಲಚೇತನರಿಗೆ ಮಾಸಿಕ 3 ಸಾವಿರ ರೂ. ಪಿಂಚಣಿ, ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಹಾಗೂ ಉಚಿತ ಕುಡಿಯುವ ನೀರು, ರೈತರ ಬೆಳೆ ಸಾಲದ ಶೇ 50 ಮನ್ನಾ, ಮೀನುಗಾರರಿಗೆ 27 ಸಾವಿರ ಸಹಾಯಧನ ಹಾಗೂ ಖಾಯಂ ವಸತಿ ಇತ್ಯಾದಿಗಳೆಲ್ಲವೂ ನೇರವಾಗಿ ಸರ್ಕಾರದ ಬೊಕ್ಕಸವನ್ನು ಆಧರಿಸಿದ ಭರವಸೆಗಳಾಗಿವೆ.

ಬಜೆಟ್ ಮೀರಿ ಸಾಲ?

ತಮಿಳುನಾಡು 'ರಾಜ್ಯದ ಒಟ್ಟು ದಿನಬಳಕೆ ಉತ್ಪನ್ನಗಳ (ಜಿಎಸ್‌ಡಿಪಿ)' ಪ್ರಮಾಣ 1,06,968 ಕೋಟಿ ರೂ. ಇದ್ದು, ಇದರ ಶೇ. 3 ರಷ್ಟು ಹಣಕಾಸು ಕೊರತೆಯ ಬಜೆಟ್ 2025-26ರಲ್ಲಿ ಮಂಡಿಸಲಾಗಿದೆ. ಇದು ತಮಿಳುನಾಡಿನ ಹಣಕಾಸು ಸ್ಥಿತಿಗತಿಯ ಒಂದು ಸ್ಯಾಂಪಲ್ ಮಾತ್ರ. ಟಿ.ವಿ.ಕೆಯ ಭರವಸೆಗಳನ್ನು ಈಡೇರಿಸಬೇಕೆಂದರೆ ಬಜೆಟ್ ಮೀರಿ ಹೊರಗಿನಿಂದ ಸಾಲ ತರುವುದು ಅನಿವಾರ್ಯವಾಗಲಿದೆ. ಟಿ.ವಿ.ಕೆ ವಿಜಯ್ ತಮ್ಮ ಪ್ರಣಾಳಿಕೆಯ ಭರವಸೆಗಳನ್ನು ಹೇಗೆ ಈಡೇರಿಸುವರು ಕಾದುನೋಡಬೇಕಾಗಿದೆ.

ಸುದ್ದಿ ಮಿಂಚು

ಭ್ರಷ್ಟಾಚಾರ : ಜಿಪಂ, ತಾಪಂ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ರಾಯಚೂರು: ಜಿಲ್ಲಾ ಪಂಚಾಯತ್‌ನಲ್ಲಿ ಯೋಜನಾ ನಿರ್ದೇಶಕ ಶರಣಬಸವ, ಅರಕೇರಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಣ್ಣಾರಾವ್ ಹಾಗೂ ಹೊಂಬಡ್ಸಮನ್‌ಗಳಿಂದ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದ್ದು, ಅಧಿಕಾರ ದುರ್ಬಳಕೆ ಮಾಡಿದ್ದಾರೆ. ಕೂಡಲೇ ಜಿಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದೇವದುರ್ಗ ಭೀಮ್ ಆರ್ಮಿ ಸಂಘಟನೆಯ ತಾಲೂಕಾಧ್ಯಕ್ಷ ವಿಶ್ವನಾಥ ಬಲ್ಲಿದವ್ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಪ್ರಿಲ್ 23ರಂದು ಜಿಪಂ ಸಿಇಒ ಅವರು ಎಲ್ಲ ತಾಲೂಕ ಪಂಚಾಯಿತಿ ಅಧಿಕಾರಿಗಳನ್ನು ಕರೆದು ಭ್ರಷ್ಟಾಚಾರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದರು. 28ರಂದು ನರೇಗಾ ಯೋಜನೆಯಡಿ ಕೆಲಸ ಮಾಡುತ್ತಿದ್ದ ತಾಂತ್ರಿಕ ಸಿಬ್ಬಂದಿ ಹಾಗೂ ಕೆಳಹಂತದ ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವುದು ಸ್ವಾಗತಾರ್ಹವಾಗಿದೆ. ಆದರೆ, ತಮ್ಮ ಅಧೀನದಲ್ಲಿ ಕೆಲಸ ಮಾಡುವ ಕೆಲ ಅಧಿಕಾರಿಗಳ ವಿರುದ್ಧ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿಂದೆ ಯಾದಗಿರಿ ಜಿಲ್ಲಾ ಪಂಚಾಯಿತಿಯಲ್ಲಿ ಉಪ ಕಾರ್ಯದರ್ಶಿಯಾಗಿದ್ದಾಗ ಶರಣಬಸವ ಅವರು ಎರಡು ಕೋಟಿ ರೂಪಾಯಿ ದುರುಪಯೋಗ ಮಾಡಿರುವ ಆರೋಪವಿದೆ. ಪ್ರಸ್ತುತ ರಾಯಚೂರು ಜಿಲ್ಲಾ ಪಂಚಾಯಿತಿಯಲ್ಲಿ ಪಿಡಿಯಾಗಿ ಕಾರ್ಯನಿರ್ವಹಿಸುತ್ತಿರುವ ಅವರು ಸಿಇಒ ಗಮನಕ್ಕೆ ತರದೆ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಆಪಾದಿಸಿದರು.

ಅರಕೇರ ಗ್ರಾಮ ಪಂಚಾಯಿತಿಯಲ್ಲಿ ಪಿಡಿಒ ಆಗಿದ್ದ ಅಣ್ಣಾರಾವ್ 70 ಲಕ್ಷ ರೂಪಾಯಿ ವೆಚ್ಚದಲ್ಲಿ ಖಾಸಗಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿ ಬಿಲ್ ಎತ್ತುವಳಿ ಮಾಡಿರುವುದು ಹಾಗೂ 15 ಲಕ್ಷ ರೂಪಾಯಿ ನಕಲಿ ವರ್ಕ್ ನೋಂದಣಿ ಮಾಡಿ ಹಣ ಅವ್ಯವಹಾರ ನಡೆಸಿರುವ ಬಗ್ಗೆ ಸಾಬೀತುವಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಇದೇ ಪ್ರಕರಣದಲ್ಲಿ 2025ರ ಜೂನ್ 13ರಂದು ರಾಜ್ಯ ಮತ್ತು ಕೇಂದ್ರ ತಾಂತ್ರಿಕ ತಂಡ ನಡೆಸಿದ ತನಿಖೆಯಲ್ಲಿ ಗಂಭೀರ ಲೋಪಗಳು ಕಂಡುಬಂದಿದ್ದು, 16 ಲಕ್ಷ ರೂಪಾಯಿ ವಸೂಲಾತಿ ಮಾಡಿ ಅಣ್ಣಾರಾವ್ ಅವರನ್ನು ಸೇವೆಯಿಂದ ವಜಾಗೊಳಿಸುವಂತೆ ಆರ್‌ಡಿಪಿಆರ್ ಆಯುಕ್ತರು ಆದೇಶಿಸಿದ್ದರು. ಆದರೆ, ಅದಕ್ಕೆ ಸಂಬಂಧಿಸಿದ ಕಡತವನ್ನು 10 ತಿಂಗಳ ಕಾಲ ಸಿಇಒ ಗಮನಕ್ಕೆ ತರದೇ ಮುಚ್ಚಿಡಲಾಗಿದೆ ಎಂಬುದು ಸಂಶಯಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಯಾವುದೇ ಇಲಾಖೆಯ ಅಧಿಕಾರಿ ನಿಯೋಜನೆಗೊಂಡು ಅಧಿಕಾರಿ ಐದು ವರ್ಷಗಳ ನಂತರ ಮಾತೃ ಇಲಾಖೆಗೆ ಹೋಗಬೇಕು ಎಂಬ ಸರ್ಕಾರದ ಸುತ್ತೋಲೆ ಇದೆ. ಆದರೆ, ಶರಣಬಸವ ಅವರು ಕಳೆದ ಸುಮಾರು 15ವರ್ಷಕ್ಕೂ ಅಧಿಕ ಅವಧಿಯಲ್ಲಿ ಜಿಪಂಯಲ್ಲಿ ಮುಂದುವರಿದಿರುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದೇ ಇದ್ದರೆ, ಸಿಇಒ ಅವರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸಂಘಟನೆಯ ಪದಾಧಿಕಾರಿಗಳಾದ ಗುಂಡಪ್ಪ ನಾಯಕ, ಶಿವಗೇನಿ ನಾಯಕ ಹಾಗೂ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ

ರಾಯಚೂರು: ಜಿಲ್ಲಾಧಿಕಾರಿ ನಿತೀಶ್ ಕೆ ಅವರು ವರ್ಗಾವಣೆಗೊಂಡಿದ್ದು, ರಾಯಚೂರು ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ ಎಸ್ ಅವರನ್ನು ವರ್ಗಾವಣೆ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ ಪ್ರಸನ್ನ ಕುಮಾರ ವಿ ಅವರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ನಗರ ಮೂಲಭೂತ ಸೌಕರ್ಯ ಮತ್ತು ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಪೂವಿತಾ ಎಸ್ ಅವರನ್ನು ರಾಯಚೂರು ಜಿಲ್ಲೆಯ ನೂತನ ಜಿಲ್ಲಾಧಿಕಾರಿಗಳಾಗಿ ವರ್ಗಾವಣೆ ಮಾಡಲಾಗಿದೆ. ಅವರ ಸ್ಥಳಕ್ಕೆ ರಾಯಚೂರು ಜಿಲ್ಲಾಧಿಕಾರಿಯಾಗಿದ್ದ ನಿತೀಶ್ ಕೆ ಅವರನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಬಡ್ತಿ:ಸನ್ಮಾನ

ಲಿಂಗಸುಗೂರ ತಾಲೂಕಿನ ಈಚನಾಳ ಗ್ರಾಮದ ಪಿಎಚ್‌ಸಿಯಲ್ಲಿ ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಬಡ್ತಿ ಹೊಂದಿದ ಪ್ರಾಣೇಶ್ ಜೋಶಿ ಅವರಿಗೆ ಗ್ರಾಮಸ್ಥರು ಸನ್ಮಾನಿಸಿದರು.

ಸಂ.ಕ.ಸಮಾಚಾರ ಲಿಂಗಸಗೂರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಣೇಶ್ ಜೋಶಿಯವರಿಗೆ ಇತ್ತೀಚೆಗೆ ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಬಡ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ತಾಲೂಕಿನ ಈಚನಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗ್ರಾಮಸ್ಥರು ಅವರಿಗೆ ಸನ್ಮಾನಿಸಿ ಗೌರವಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ನಾವು ಸಮಾಜದಲ್ಲಿ ಮಾಡುವ ಕೆಲಸ ಕಾರ್ಯಗಳನ್ನು ಜನತೆ ಮೆಚ್ಚಬೇಕು. ಸರಕಾರಿ ಸೇವೆಯಲ್ಲಾಗಲಿ ಅಥವಾ ಸಮಾಜ ಸೇವೆಯಲ್ಲಾಗಲಿ ನಾವು ಮಾಡುತ್ತಿರುವ ಕೆಲಸ ಕಾರ್ಯಗಳು ಪ್ರತಿಯೊಬ್ಬರು ತಮ್ಮ ಉಸಿರು ಹೋದರೂ ಸಹ ಹೆಸರು ಉಳಿಯುವ ಹಾಗೆ ಏನಾದರೊಂದು ಸಮಾಜ ನಮ್ಮನ್ನು ಗುರುತಿಸುವ ರೀತಿಯಲ್ಲಿ ಸೇವೆ ಮಾಡಬೇಕು. ಅಂದಾಗ ಮಾತ್ರ ನಾವು ಸಲ್ಲಿಸಿದ ಸೇವೆಗೆ ನಿಜವಾದ ಒಂದು ಅರ್ಥ ಮತ್ತು ಅದಕ್ಕೊಂದು ಗೌರವದ ಕಳೆ ಬರುತ್ತದೆ.

ಈ ಹಿಂದೆ ನಾನು ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಯಾಗಿದ್ದ ಸಂದರ್ಭದಲ್ಲಿ ನನ್ನ ಸೇವೆಯನ್ನು ತಾವು ತುಂಬಾ ಹತ್ತಿರದಿಂದ ಈ ಹಿಂದಿನಿಂದಲೂ ಗುರುತಿಸಿದ್ದೀರಿ ಈಚನಾಳ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಹಾಗೂ ಈ ಗ್ರಾಮದ ಜನತೆಗೂ ನನಗೂ ಅವಿನಾಭಾವ ಪ್ರೀತಿ ವಿಶ್ವಾಸದ ನಂಟಿದೆ. ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ನಾನು ಬಡ್ತಿ ಹೊಂದಿದರೂ ಸಹ ನನ್ನ ಸೇವೆ ಸದಾಕಾಲ ಹಿಂದಿನಂತೆಯೇ ಮುಂದುವರಿಯುತ್ತಿದೆ. ನಿಮ್ಮ ಪ್ರೀತಿ ವಿಶ್ವಾಸ ಸದಾ ಕಾಲ ನನ್ನ ಮೇಲಿರಲಿ ನಿಮ್ಮ ಪ್ರೀತಿಗೆ ನಾನು ಚಿರಋಣಿಯಾಗಿದ್ದೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಸುರೇಂದ್ರ ಬಾಬು, ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಹಾಗೂ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಗಣೇಶ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ಎಚ್ ದಾಸಪ್ಪನವರ್, ತಾಲೂಕ ಆರೋಗ್ಯ ಅಧಿಕಾರಿ ಅಮರೇಶ್ ಪಾಟೀಲ್, ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಹನುಮಂತ್ ರಾಯ ತಳ್ಳಳ್ಳಿ,ಡಾ. ರಾಜೇಶ್ವರಿ, ಗ್ರಾಮದ ಹಿರಿಯ ಮುಖಂಡರಾದ ಪೀರ್ ಸಾಬ್ ಪಂಚಮ, ಆದಪ್ಪ ಎನ್ ಮೇಟಿ, ಮೈಸನ್‌ಮಿಯಾ ಅಂಗಡಿ, ಹನುಮೇಶ ಮಸೂತಿ, ಆರೋಗ್ಯ ನಿರೀಕ್ಷಣಾಧಿಕಾರಿ ಅಡಿವೆಪ್ಪ, ಶರಣಬಸವ ಪಾಟೀಲ್, ಅಶೋಕ್ ಮಡ್ಡಿಕರ್, ಫಾರ್ಮಸಿ ಮಹಮ್ಮದ್ ಜುಬೇರಾ ಜಾಗೀರ್ದಾರ್, ಬಸವರಾಜ್ ಉಪಸ್ಥಿತರಿದ್ದರು.

ಅಪ್ರಾಪ್ತ ಬಾಲಕಿಗೆ ನೆರವಾದವನ ಕೊಲೆ

ರಾಯಚೂರು:ಅಪ್ರಾಪ್ತ ಬಾಲಕಿಯನ್ನು ಕರೆದುಕೊಂಡು ಹೋಗುತ್ತಿದ್ದ ವೇಳೆಯಲ್ಲಿ ತಡೆಯಲು ಮುಂದಾದ ವ್ಯಕ್ತಿಯನ್ನು ಹಗ್ಗದಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿರುವ ಘಟನೆ ಸೋಮವಾರ ರಾತ್ರಿ ತಾಲ್ಲೂಕಿನ ಯಾಪಲದಿನ್ನಿ ಗ್ರಾಮದಲ್ಲಿ ಘಟನೆ ನಡೆದಿದೆ.

ಕೊಲೆಯಾದ ವ್ಯಕ್ತಿ ಈಶಣ್ಣ(41) ಎಂದು ಗುರುತಿಸಲಾಗಿದೆ. ಈಶಣ್ಣ ಅವರ ತಮ್ಮ ಆಂಜನೇಯನ ಮಗಳನ್ನು ಕರೆದುಕೊಂಡು ಹೋಗುವಾಗ ತಡೆಯಲು ಮುಂದಾದಾಗ ಯಾಪಲದಿನ್ನಿ ನಿವಾಸಿ ಆರೋಪಿಗಳಾದ ಅಸ್ಲಾಂ, ಹುಸೇನ್ ಸಾಬ್ ಎಂಬುವವರು ಕುತ್ತಿಗೆ ಹಗ್ಗದಂತ ವಸ್ತುನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಮೃತನ ಪತ್ನಿ ಭುವನೇಶ್ವರ ಅವರು ನೀಡಿದ ದೂರಿನ್ವಯ ಯಾಪಲದಿನ್ನಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ನಡೆಸಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಡ ಡೈಜೆಸ್ಟ್
ಕಸ್ತೂರಿ
ತಪ್ಪದೆ ಓದಿ

ಬಿಸಿಗಾಳಿಯ ಮುನ್ನೆಚ್ಚರಿಕೆ ಕ್ರಮಗಳು ಅನುಸರಿಸಿ

ಗಣತಿದಾರರಿಗೆ ರಾಜ್ಯ ಜನಗಣತಿ ನೋಡಲ್ ಅಧಿಕಾರಿ ಮನೋಜ್ ಕುಮಾರ್ ಮೀನಾ ಸಲಹೆ

ರಾಯಚೂರು: ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿದ 2026ರ ಬೇಸಿಗೆ ಕಾಲದ (ಏಪ್ರಿಲ್–ಜೂನ್ 2026) ಪರಿಷ್ಕೃತ ಋತು ಮುನ್ನೋಟದ ಪ್ರಕಾರ 2026ರ ಏಪ್ರಿಲ್–ಮೇ ತಿಂಗಳಲ್ಲಿ ಕರ್ನಾಟಕದ ಉತ್ತರ ಒಳನಾಡಿನ ಬಹುಭಾಗಗಳಲ್ಲಿ ಮತ್ತು ರಾಜ್ಯದ ಇತರ ಒಳನಾಡು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ತಾಪಮಾನ ಮುಂದುವರಿಯುವ ಸಾಧ್ಯತೆಯಿದ್ದು, ಜನಗಣತಿ ಕಾರ್ಯಗಳಲ್ಲಿ ತೊಡಗಿರುವ ಗಣತಿದಾರರು ಬಿಸಿಗಾಳಿಯ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು ಎಂದು ಪರಿಹಾರ ಆಯುಕ್ತರು ಮತ್ತು ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ರಾಜ್ಯ ಜನಗಣತಿ ನೋಡಲ್ ಅಧಿಕಾರ ಮನೋಜ್ ಕುಮಾರ್ ಮೀನಾ ಅವರು ಸಲಹೆ ನೀಡಿದ್ದಾರೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 23ನೇ ಏಪ್ರಿಲ್ 2026ರ ಪತ್ರದ ಮೂಲಕ ಎಲ್ಲ ರಾಜ್ಯಗಳಿಗೆ ಬಿಸಿಗಾಳಿಯ ದುಷ್ಪರಿಣಾಮಗಳನ್ನು ಕಡಿಮೆಗೊಳಿಸಲು ಸೂಕ್ತ ಸಿದ್ಧತೆ ಮತ್ತು ಜಾಗೃತಿ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದೆ. ಇದರೊಂದಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 28ನೇ

ಸಂಗ್ರಹಚಿತ್ರ

ಏಪ್ರಿಲ್ 2026ರ ತನ್ನ ಪತ್ರದ ಮೂಲಕ ಬಿಸಿಗಾಳಿ ಸಿದ್ಧತೆ ಮತ್ತು ಪ್ರತಿಕ್ರಿಯೆಯನ್ನು ಬಲಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಿದೆ ಎಂದು ವಿವರಿಸಿದ್ದಾರೆ.

ಪ್ರಸ್ತುತ ಜನಗಣತಿಯ ಮೊದಲ ಹಂತವಾಗಿ ಮನೆಪಟ್ಟಿ ಮತ್ತು ಮನೆ ಗಣತಿಯನ್ನು ರಾಜ್ಯದಾದ್ಯಂತ ಕ್ಷೇತ್ರ ಗಣಕರ ಮೂಲಕ ನಡೆಯುತ್ತಿದೆ. ಈ ಕಾರ್ಯಗಳು ಬೇಸಿಗೆಯ ತೀವ್ರ ಬಿಸಿಗಾಳಿ ಅವಧಿಯಲ್ಲಿ ನಡೆಯುತಿದ್ದು, ದೀರ್ಘಕಾಲ ಹೊರಾಂಗಣದಲ್ಲಿ ಕೆಲಸ ಮಾಡುವುದರಿಂದ ಮತ್ತು ಶಾರೀರಿಕ ಶ್ರಮದಿಂದ ಉಷ್ಣ ಸಂಬಂಧಿತ ಅನಾರೋಗ್ಯದ ಅಪಾಯ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಗಣತಿದಾರರ ಆರೋಗ್ಯ ಕಾಪಾಡಿಕೊಳ್ಳುತ್ತಾ ಜನಗಣತಿ ಕಾರ್ಯವನ್ನು ಸುಗಮವಾಗಿ ನಡೆಸಲು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿದೆ ಎಂದು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಉಷ್ಣ ಸಂಬಂಧಿತ ಅಪಾಯಗಳನ್ನು ತಗ್ಗಿಸಲು ಮತ್ತು ಗಣತಿ ಕಾರ್ಯವನ್ನು ಸುಗಮವಾಗಿ ನಡೆಸಲು ಕೆಳಗಿನ ಮುನ್ನೆಚ್ಚರಿಕಾ ಕ್ರಮಗಳನ್ನು ಎಲ್ಲಾ ಗಣತಿದಾರರು ಪಾಲಿಸಬೇಕು ಎಂದು ಸಲಹೆ ನೀಡಿದ್ದಾರೆ.

ಈ ಬೇಸಿಗೆ ದಿನದ ತಂಪಾದ ಸಮಯಗಳಲ್ಲಿ (ಬೆಳಿಗ್ಗೆ ಬೇಗ ಮತ್ತು ಸಂಜೆ) ಕ್ಷೇತ್ರ ಭೇಟಿಗಳನ್ನು ಯೋಜಿಸಬೇಕು. ವಿಶೇಷವಾಗಿ ಮಧ್ಯಾಹ್ನ 12ರಿಂದ 3:30ರವರೆಗೆ ನೇರ ಸೂರ್ಯಕಿರಣಕ್ಕೆ ದೀರ್ಘಕಾಲ ಒಳಗಾಗುವುದನ್ನು ತಪ್ಪಿಸಬೇಕು. ನೆರಳು ಅಥವಾ ತಂಪಾದ ಸ್ಥಳಗಳಲ್ಲಿ ಕಾಲಕಾಲಕ್ಕೆ ವಿಶ್ರಾಂತಿ ತೆಗೆದುಕೊಳ್ಳಬೇಕು.

ದೇಹದ ನೀರಿನ ಪ್ರಮಾಣ ಕಾಪಾಡಿಕೊಳ್ಳಿ: ಯಾವಾಗಲೂ ಸಮರ್ಪಕವಾಗಿ ನೀರಿನ ಸೇವನೆ ಮಾಡಬೇಕು. ದಾಹವಾಗದಿದ್ದರೂ ಪ್ರತಿ 20–30 ನಿಮಿಷಕ್ಕೊಮ್ಮೆ ನೀರು ಕುಡಿಯಬೇಕು. ಕ್ಷೇತ್ರ ಭೇಟಿಗಳ ಸಮಯದಲ್ಲಿ ಕುಡಿಯುವ ನೀರನ್ನು ಕೊಂಡೊಯ್ಯಬೇಕು. ಸಾಧ್ಯವಾದಲ್ಲಿ ಮಜ್ಜಿಗೆ, ನಿಂಬೆ ಷರಬತ್ತು, ಎಳೆನೀರು ಸೇವಿಸಬೇಕು. ದೇಹದ ನೀರಿನ ಕೊರತೆಯನ್ನು ಹೆಚ್ಚಿಸುವ ಕ್ಯಾಫಿನ್ ಮತ್ತು ಸಕ್ಕರೆ ಪಾನೀಯಗಳನ್ನು ತಪ್ಪಿಸಬೇಕು

> **ಎಚ್ಚರಿಕೆ**
>
> ತಲೆಸುತ್ತು, ದಣಿವು, ತಲೆನೋವು, ವಾಂತಿ, ಅತಿಯಾದ ಬೆವರು ಅಥವಾ ಗೊಂದಲ ಮುಂತಾದ ಉಷ್ಣ ಸಂಬಂಧಿತ ಲಕ್ಷಣಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಇಂತಹ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ನೆರಳು ಅಥವಾ ತಂಪಾದ ಸ್ಥಳಕ್ಕೆ ಹೋಗಿ, ಸಮರ್ಪಕವಾಗಿ ನೀರು ಸೇವಿಸಿ ಮತ್ತು ತಕ್ಷಣ ವೈದ್ಯಕೀಯ ಸಹಾಯ ಪಡೆಯಬೇಕು. ಮೊದಲಿನಿಂದ ಆರೋಗ್ಯ ಸಮಸ್ಯೆ ಇರುವವರು ಹೆಚ್ಚುವರಿ ಮುನ್ನೆಚ್ಚರಿಕೆ ವಹಿಸಬೇಕು. ಕ್ಷೇತ್ರ ಕರ್ತವ್ಯದ ವೇಳೆ ಸಮೀಪದ ಆರೋಗ್ಯ ಕೇಂದ್ರಗಳ ವಿವರಗಳು ಮತ್ತು ತುರ್ತು ಸಂಪರ್ಕ ದೂರವಾಣಿ ಸಂಖ್ಯೆಗಳನ್ನು ಹೊಂದಿರಬೇಕು.

ಪರಿಷತ್ತು ಕನ್ನಡ ನಾಡಿನ ಸ್ವಾಭಿಮಾನದ ಸಂಕೇತ

ದೇವದುರ್ಗ: ಕನ್ನಡ ನಾಡಿನ ಹೆಮ್ಮೆ ಸಂಸ್ಥೆಯಾದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಸಮಸ್ತ ಕನ್ನಡ ನಾಡಿನ ಸ್ವಾಭಿಮಾನದ ಸಂಕೇತವಾಗಿದ್ದು, ನಮ್ಮೆಲ್ಲರ ಅಸ್ಮಿತೆ ಆಗಿದೆ. ಕನ್ನಡ ನಾಡು ನುಡಿ ಭಾಷೆ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು ಎಂದು ದೇವದುರ್ಗ ಪ್ರಾದೇಶಿಕ ವಲಯ ಉಪ ಅರಣ್ಯ ಅಧಿಕಾರಿಗಳಾದ ಬಸವರಾಜ್ ಗೌಡ ಹೇಳಿದರು. ಪಟ್ಟಣದ ಬಸವ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಕಸಾಪ ತಾಲೂಕ ಘಟಕದಿಂದ ಏರ್ಪಡಿಸಿದ್ದ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯಅತಿಥಿಗಳಾಗಿ ಆಗಮಿಸಿದ್ದ ದಕ್ಷಿಣ ಭಾರತ ಚೆನ್ನೈ ವಿಶ್ವವಿದ್ಯಾಲಯದ ಭಾರತ ಕಲಾರತ್ನ ಪ್ರಶಸ್ತಿ ವಿಜೇತ ಹನುಮಂತಪ್ಪ ಮನ್ನಾಪೂರಿ ಹಾಗೂ ಹಿರಿಯ ವಕೀಲರಾದ ವೇಣುಗೋಪಾಲಗೌಡ ಎಚ್ ಪಾಟೀಲ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತನ್ನು

ಮೈಸೂರು ಸಂಸ್ಥಾನದ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರು 1915ರಲ್ಲಿ ಸ್ಥಾಪಿಸಿದ ಈ ಕನ್ನಡ ಸಂಸ್ಥೆ ಕನ್ನಡ ನುಡಿ ಭಾಷೆಗಳನ್ನು ರಕ್ಷಿಸಿ, ಸಾಹಿತ್ಯಗಳನ್ನು ಗುರುತಿಸುತ್ತಾ ಅನೇಕ ಪತ್ರಪುಸ್ತಕಗಳು ಯುವ ಬರಹಗಾರರನ್ನು ಪರಿಚಯಿಸಿ ದತ್ತಿ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದ್ದು, ಕಲೆ ಸಾಹಿತ್ಯ ಸಂಗೀತ ಸಾಂಸ್ಕೃತಿಕ ರಾಯಭಾರಿ ಎಂದರೆ ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ತಪ್ಪಾಗಲಾರದು ಎಂದು ಹೇಳಿದರು.

ಸರ್ಕಾರ ಇಂಗ್ಲಿಷ್ ವ್ಯಾಮೋಹವನ್ನು ಬಿಟ್ಟು ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಪ್ರೌಢ ಶಾಲೆಗಳನ್ನು ಸ್ಥಾಪಿಸಿ ಶೈಕ್ಷಣಿಕ ಅನುದಾನ ನೀಡಿ ಶಿಕ್ಷಕರ ನೇಮಕಾತಿ ಮಾಡಿ ಕನ್ನಡವನ್ನು ಉಳಿಸುವ ಬೆಳೆಸುವ ಕೆಲಸ ಸರ್ಕಾರ ಮುಂದಾಗಬೇಕು ಎಂದು ತಿಳಿಸಿದರು. ಹಂಪಿ ವಿಶ್ವವಿದ್ಯಾಲಯದ ಮಾಜಿ ಸಿಂಡಿಕೇಟ್ ಸದಸ್ಯರಾದ ಬಸವರಾಜ್ ಕೊಪ್ಪರ್ ಮಾತನಾಡಿ, ಭಾಷಾವಾರು ಪ್ರಾಂತ್ಯಗಳ ಮೂಲಕ ರಾಜ್ಯಗಳನ್ನು ಪುನರ್ ಸಂಘಟನೆ ಮಾಡಿ ಕನ್ನಡ ನಾಡು ನುಡಿಗೆ ಕುವೆಂಪು ದ.ರಾ ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಗಿರೀಶ್ ಕಾರ್ನಾಡ್ ಸಾಹಿತ್ಯ ಲೋಕದ ಅನೇಕ ದಿಗ್ಗಜರು ಕನ್ನಡ ಭಾಷೆ ಸಾಹಿತ್ಯವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಅದರ ಗೌರವ ಘನತೆಯನ್ನು ಹೆಚ್ಚಿಸಿದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯರಾದ ಶಾಮಸುಂದರ್ ಮಾತನಾಡಿದರು.

ಕಸಾಪ ತಾಲ್ಲೂಕು ಅಧ್ಯಕ್ಷ ಎಚ್.ಶಿವರಾಜ ಪ್ರಾಸ್ತಾವಿಕವಾಗಿ ಮಾತನಾಡಿದರು. ಹತ್ತನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕಗಳನ್ನು ಪಡೆದ ವಿವಿಧ ಶಾಲೆಯ ವಿದ್ಯಾರ್ಥಿಗಳನ್ನು ಈ ಸಂದರ್ಭದಲ್ಲಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಮಾಣ ಪತ್ರ ಪದಕ ನೀಡಿ ಗೌರವಿಸಿ ಕರವೇ ಅಧ್ಯಕ್ಷರಾದ ಡಿ ಶ್ರೀನಿವಾಸ್ ಬಸವರಾಜ್ ಶಿಕ್ಷಕರು ಹನುಮಯ್ಯ ಪಿಲಿಗುಂಡ ಸಂಗೀತ ಶಿಕ್ಷಕರು ಮಾನಶಯ್ಯ ಹಾಗೂ ಮತ್ತಿತರರಿದ್ದರು. ಉಪನ್ಯಾಸಕ ಮಹೇಂದ್ರ ಮ್ಯಾತ್ರಿ ನಿರೂಪಿಸಿದರು. ಆಕಾಶ ಎನ್ ವಂದಿಸಿದರು.

ರಾಯಚೂರಿನ ಅಂಬೇಡ್ಕರ್ ವೃತ್ತದಲ್ಲಿ ಸೋಮವಾರ ಸಂಜೆ ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಣೆ ಮಾಡಿದರು.

ಬಿಜೆಪಿ ಕಾರ್ಯಕರ್ತರಿಂದ ವಿಜಯೋತ್ಸವ

ರಾಯಚೂರು: ಪಶ್ಚಿಮ ಬಂಗಾಳ ಮತ್ತು ಆಸ್ಸಾಂ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಸೋಮವಾರ ನಗರದ ಡಾ. ಬಿ. ಆರ್. ಅಂಬೇಡ್ಕರ್ ವೃತ್ತ ದಲ್ಲಿ ಬಿಜೆಪಿ ಪಕ್ಷದ ವತಿಯಿಂದ ವಿಜಯೋತ್ಸವ ಮಾಡಿ ಸಿಹಿಹಂಚಿ ಸಂಭ್ರಮಾಚರಣೆಯನ್ನು ಮಾಡಲಾಯಿತು.

ವಿಧಾನ ಪರಿಷತ್ ಮಾಜಿ ಸದಸ್ಯ ಎನ್.ಶಂಕರಪ್ಪ ವಕೀಲ್, ಆರ್‌ಡಿಎ ಮಾಜಿ ಅಧ್ಯಕ್ಷ ರಾಜಕುಮಾರ, ಶಿವಬಸಪ್ಪ ಮಾಲಿಪಾಟೀಲ್, ಜಿಲ್ಲಾ ಉಪಾಧ್ಯಕ್ಷ ಬಿ.ಗೋವಿಂದ, ಶಂಕರರೆಡ್ಡಿ, ಪ್ರಧಾನ ಕಾರ್ಯದರ್ಶಿ ರವೀಂದ್ರ ಜಲ್ದಾರ್, ನಗರ ಘಟಕದ ಅಧ್ಯಕ್ಷ ಉಟ್ಕೂರು ರಾಘವೇಂದ್ರ, ಪ್ರದೀಪ ಸಾನಬಾಳ್, ಸುಲೋಚನಾ ಬಸವರಾಜಸ್ವಾಮಿ ಆಲ್ಕೂರು, ರಾಮು ಕಡಗೋಲ್,ಎ.ಚಂದ್ರಶೇಖರ, ಶಿವಕುಮಾರ ಸಿದ್ಧನಗೌಡ ನೆಲಹಾಳ, ಅಶ್ವಿನಿ, ನರಸಿಂಹರೆಡ್ಡಿ, ಮಹೇಂದ್ರರೆಡ್ಡಿ, ಸಯ್ಯದ್ ಮುಕ್ತಿಯಾರ್ ಸೇರಿದಂತೆ ಅನೇಕರು ವಿಜಯೋತ್ಸವದಲ್ಲಿ ಪಾಲ್ಗೊಂಡಿದ್ದರು.

ಉಚಿತ ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತ : ಶಾಸಕ ವಜ್ಜಲ್

ಶಾಸಕರಿಂದ ವಿವಿಧ ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿಗೆ ಭೂಮಿಪೂಜೆ

ಹಟ್ಟಿಚಿನ್ನದಗಣಿ : ರಾಜ್ಯ ಸರ್ಕಾರದ ಉಚಿತ ಗ್ಯಾರಂಟಿಗಳಿಂದ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿವೆ ಎಂದು ಶಾಸಕ ಮಾನಪ್ಪ ವಜ್ಜಲ್ ಗಂಭೀರ ಆರೋಪ ಮಾಡಿದರು.

ಹಟ್ಟಿಯಿಂದ ಬಂಡೇಭಾವಿ–ಗೌಡೂರು ಗ್ರಾಮದವರೆಗೆ ರಸ್ತೆ ಅಭಿವೃದ್ಧಿಗೆ ಮಂಜೂರಾದ 2025–26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದ 2.5 ಕೋಟಿ ರೂ, ರಾಜ್ಯಹೆದ್ದಾರಿಯಿಂದ ಯಲಗಟ್ಟಾ–ಪೈದೊಡ್ಡಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿಗೆ ಮಂಜೂರಾದ 4 ಕೋಟಿ ರೂ ಹಾಗೂ ಗುರುಗುಂಟಾದಿಂದ ಗೌಡೂರು–ಮಾಚನೂರು ಗ್ರಾಮದವರೆಗೆ ರಸ್ತೆ ಅಭಿವೃದ್ಧಿಗೆ ಮಂಜೂರಾದ 6 ಕೋಟಿ ರೂ. ಅನುದಾನಗಳ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ರವಿವಾರ ಭೂಮಿಪೂಜೆ ನಂತರ ಯಲಗಟ್ಟಾ ಮತ್ತು ಮಾಚನೂರು ಗ್ರಾಮಗಳಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಕ್ಷೇತ್ರದಲ್ಲಿನ ರಸ್ತೆ ಅಭಿವೃದ್ಧಿಗಾಗಿ ಹಾಗೂ ಹಟ್ಟಿ ಪಟ್ಟಣ, ಮುದಗಲ್ ಪಟ್ಟಣ ಹಾಗೂ ಲಿಂಗಸಗೂರು

ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದಡಿ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಮಾನಪ್ಪ ವಜ್ಜಲ್ ಭೂಮಿ ಪೂಜೆ ನೆರವೇರಿಸಿದರು.

ಪಟ್ಟಣ ಸೇರಿದಂತೆ ತಾಲೂಕಿನಲ್ಲಿರುವ ನೀರಿನ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸರಕಾರಕ್ಕೆ ಸಾಕಷ್ಟು ಸಲ ಪ್ರಸ್ತಾವನೆಗಳನ್ನು, ಮನವಿ ಪತ್ರಗಳನ್ನು ಸಲ್ಲಿಸಿದರೂ ಸರಕಾರ ರಸ್ತೆ, ಕುಡಿಯುವ ನೀರಿಗಾಗಿ ಹಾಗೂ ಶಿಕ್ಷಣಕ್ಕೆ ಸರಿಯಾದ ಅನುದಾನ ನೀಡುವಲ್ಲಿ ಮೀನಾಮೇಷ ಮಾಡುತ್ತಿದೆ ಆದರೆ ಗ್ಯಾರಂಟಿಗಳ ಯೋಜನೆಗೆ ಕೋಟಿ ಕೋಟಿ ಹಣವನ್ನು ಖರ್ಚು ಮಾಡುತ್ತಿದೆ ಅದು ನಮ್ಮಿಂದ ಕಿತ್ತಿಕೊಂಡು ನಮಗೆ ನೀಡುತ್ತಿದ್ದು ಇದರಿಂದಾಗಿ ಕ್ಷೇತ್ರಗಳ ಅಭಿವೃದ್ಧಿಗಳು ಕುಂಠಿತಕೊಂಡಿವೆಂದು ದೂರಿದರು. ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನವನ್ನು ಪಡೆಯಲು ನಿರಂತರ ಹೋರಾಟ ಪ್ರಯತ್ನ ಮಾಡಲಾಗುವದು ಎಂದರು. ಮುಖಂಡರಾದ ಗಿರಿಮಲ್ಲನಗೌಡ ಪಾಟೀಲ್, ಪಿಡಬ್ಲೂಡಿ ಜೆಇ ಯಲಗೂರೇಶ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ರೋಡಲಬಂಡಾ(ತ) ಗ್ರಾ.ಪಂ ಅಧ್ಯಕ್ಷ ಲಕ್ಷ್ಮಣ ಯಲಗಟ್ಟಾ, ಮುಖಂಡರಾದ ಭೀಮಣ್ಣ ಕಸಬಾಲಿಂಗಸಗೂರು ಗ್ರಾಮದ ಮುಖಂಡರಾದ ಶಿವುಕುಮಾರ, ರಾಘವೇಂದ್ರ, ರಾಜು ನಾಯಕ, ಅಣ್ಣಯ್ಯ ಸೇರಿದಂತೆ ಬಂಡೇಭಾವಿ, ಯಲಗಟ್ಟಾ, ಮಾಚನೂರು ಗ್ರಾಮಗಳ ಮುಖಂಡರು ಹಾಗೂ ಗ್ರಾಮಸ್ಥರು ಇತರರಿದ್ದರು.

ಸಿಲೆಂಡರ್ ಕೊರತೆ : ಇಂದಿರಾ ಕ್ಯಾಂಟಿನ್‌ನಲ್ಲಿ ಅನ್ನ, ಸಾಂಬಾರ್

ಸಂ.ಕ. ಸಮಾಚಾರ, ಮುದಗಲ್ಲ: ಪಟ್ಟಣದ ಇಂದಿರಾ ಕ್ಯಾಂಟೀನ್‌ನಲ್ಲಿ ಸಿಲಿಂಡರ್ ಕೊರತೆಯ ನೆಪದಲ್ಲಿ ಕೇವಲ ಅನ್ನ, ಸಾಂಬರ್ ನೀಡುತ್ತಿರುವದು ಗ್ರಾಹಕರು ಅಸಮಧಾನಕ್ಕೆ ಕಾರಣವಾಗಿದೆ.

ಸರಕಾರ ಹಸಿದವರಗೆ, ಬಡವರಿಗೆ ಅನೂಕೂಲವಾಗಲೆಂದು 10 ರೂ ದರದಲ್ಲಿ ಚಪಾತಿ, ಅನ್ನ, ಸಾಂಬಾರ್, ಉಪಹಾರ ನೀಡಲಾಗುತ್ತಿದೆ. ಆದರೆ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಕಳೆದ ಮೂರ್‍ನಾಲ್ಕು ದಿನಗಳಿಂದ ಇಂದಿರಾ ಕ್ಯಾಂಟೀನ್‌ನಲ್ಲಿ ಕೇವಲ ಅನ್ನ, ಸಾಂಬಾರ ನೀಡುತ್ತಿದ್ದಾರೆ. ಇದನ್ನು ಕೇಳಿದರೆ ಗ್ಯಾಸ್ ಕೊರತೆಯಿದೆ. ಇದರಿಂದ ಚಪಾತಿ ಮಾಡಲು ತೊಂದರೆಯಾಗುತ್ತಿದೆ ಎಂದು ಹಾರಿಕೆ ಉತ್ತರ ನೀಡುತ್ತಿದ್ದಾರೆ. ಹಸಿದ ಹೊಟ್ಟೆಗೆ ಅನ್ನ ಸಾಂಬಾರ ಆದರೂ ಕೊಡುತ್ತಿದ್ದಾರೆ ಎನ್ನುವ ಅಸಮಾಧಾನದಿಂದ ಅದನ್ನೆ ಊಟ ಮಾಡಿಕೊಂಡು ಅಸಮಾಧಾನದಿಂದ ನಾಗರಿಕರು ಹೋಗುತ್ತಿದ್ದಾರೆ.

ಮುದಗಲ್ಲ ಇಂದಿರಾ ಕ್ಯಾಂಟೀನ್ ನಲ್ಲಿ ಸಿಲಿಂಡರ್ ಗ್ಯಾಸ್ ಕೊರತೆಯ ನೆಪದಲ್ಲಿ ಗ್ರಾಹಕರು ಅನ್ನ, ಸಾಂಬಾರು ಸವಿಯುತ್ತಿರುವುದು.

ಸ್ಥಳೀಯವಾಗಿ ಅಧಿಕಾರಿಗಳು ಕೂಡ ಅದನ್ನು ಪರಿಶೀಲಿಸದೇ ಇರುವದು ಕೂಡ ಸಾರ್ವಜನಿಕರಲ್ಲಿ ಸಂಶಯಕ್ಕೆಡೆ ಮಾಡಿಕೊಟ್ಟಿದೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ವಿದ್ಯುತ್ ಸ್ಪರ್ಶ : ಬಣವಿಗಳ ನಾಶ

ಸಂ.ಕ. ಸಮಾಚಾರ, ಮುದಗಲ್ಲ: ಸಮೀಪದ ಬನ್ನಿಗೋಳ ಗ್ರಾಮದ ವಿದ್ಯುತ್ ಪರಿವರ್ತಕದ ಬದಿಯಲ್ಲಿರುವ 11 ಬಣವಿಗಳು ವಿದ್ಯುತ್ ಸ್ಪರ್ಶಕ್ಕೆ ಆಹುತಿಯಾಗಿರುವ ಘಟನೆ ಮಂಗಳವಾರ ಜರುಗಿದೆ.

ಗ್ರಾಮದ ರೈತರಾದ ನಾಗಪ್ಪ ಪೂಜಾರಿ, ಬೀರಪ್ಪ ಪೂಜಾರಿ, ದೊಡ್ಡಬಸವ ಹೂವಿನಬಾವಿ, ಗ್ಯಾನಪ್ಪ, ಹುಸೇನಪ್ಪ ಎಂಬುವರಿಗೆ ಸೇರಿದ ಬಣವಿಗಳು ಬೆಂಕಿ ತಗುಲಿ ಸುಟ್ಟು ಕರಕಲಾಗಿವೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿಗಳು ಆಗಮಿಸಿ ಬೆಂಕಿ

ನಂದಿಸಿದರೂ ಪ್ರಯೋಜನವಾಗಿಲ್ಲ. ರೈತಾಪಿ ಜನರು ವರ್ಷಾನು ಗಟ್ಟಲೇ ಜಾನುವಾರಗಳಿಗೆ ತಿನ್ನಲು ಮೇವಿನ ಬಣವಿಗಳನ್ನು ಸಂಗ್ರಹಿಸಿದ್ದರು. ಆದರೆ, ವಿದ್ಯುತ್ ಪರಿವರ್ತಕ ದಲ್ಲಿ ವಿದ್ಯುತ್ ಸ್ಪರ್ಶಿಸಿ ಬೆಂಕಿಯ ಕೆನ್ನಾಲಿಗೆ ಆಹುತಿಯಾಗಿರುವುದು ರೈತರನ್ನು ಸಂಕಷ್ಟಕ್ಕೀಡು ಮಾಡಿದೆ. ಅಧಿಕಾರಿಗಳು ರೈತರಿಗೆ ಮೇವಿನ ವ್ಯವಸ್ಥೆ ಮಾಡಿ, ಪರಿಹಾರ ನೀಡಬೇಕೆಂದು ರೈತರು ಒತ್ತಾಯಿಸಿದ್ದಾರೆ. ಈ ರೀತಿ ವಿದ್ಯುತ್ ಶಾರ್ಟ ಸರ್ಕ್ಯೂಟ್‌ಗೆ ಜೆಸ್ಕಂ ಇಲಾಖೆಯ ಅಧಿಕಾರಿಗಳ ನಿರ್ಲಕ್ಷವೇ ಕಾರಣವೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಬೇಸಿಗೆಯಲ್ಲಿ ಆರೋಗ್ಯದ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ

ರಾಯಚೂರು: ಜಿಲ್ಲೆಯಾದ್ಯಂತ ಪ್ರಸ್ತುತ ದಿನಗಳಲ್ಲಿ ಬಿಸಿಲಿನ ಪ್ರಕರತೆ ಮತ್ತು ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು, ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಹಾಗೂ ವಯೋವೃದ್ದರು ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ಆರೋಗ್ಯದ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

ಜಿಲ್ಲೆಯ ದೇವದುರ್ಗ ಪಟ್ಟಣದ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೋಮವಾರ ಬೇಸಿಗೆ ಶಾಖಾಘಾತ ನಿರ್ವಹಣೆಯ ವಾರ್ಡ್, ಹಾಗೂ ಇತರೆ ವಾರ್ಡ್‌ಗೆ ಭೇಟಿ ನೀಡಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪ್ರತಿದಿನ ಮಧ್ಯಾಹ್ನದಲ್ಲಿ ಬಿಸಿಲು 40 ಡಿಗ್ರಿ ಮೇಲ್ಪಟ್ಟು ಹಾಗೂ ಪ್ರಖರವಾಗಿರುವ ಹಿನ್ನೆಲೆಯಲ್ಲಿ ಮನೆಯಿಂದ ಹೊರಗೆ ಹೋಗುವಾಗ ಆದಷ್ಟು ಹತ್ತಿ ಬಟ್ಟೆ ಉಡುಗೆ ಜೊತೆಯಲ್ಲಿ ಕುಡಿಯುವ ನೀರು, ಛತ್ರಿ ಬಳಸಲು ಆದ್ಯತೆ ನೀಡಿ, ಆದಷ್ಟು ದ್ರವ ಆಹಾರ ಸೇವನೆ ಮತ್ತು ಮನೆಯಲ್ಲಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ದೀರ್ಘಕಾಲಿನ ಚಿಕಿತ್ಸೆಗೆ ಒಳಪಟ್ಟವರು, ವಯೊವೃದ್ದರ ಕಾಳಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಬ್ಬರೂ ಮನೆಯಲ್ಲಿ ಓಆರ್‌ಎಸ್ ಜೀವಜಲ ಬಳಕೆಗೆ ಆದ್ಯತೆ ನೀಡುವ ಮೂಲಕ ನಿರ್ಜಲೀಕರಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವ ಜಲ ಪ್ಯಾಕೆಟ್ ಸದಾ ಮನೆಯಲ್ಲಿರಲಿ ಅಲ್ಲದೆ ಒಂದು

ರಾಯಚೂರು ಜಿಲ್ಲೆಯ ದೇವದುರ್ಗ ಪಟ್ಟಣದ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಸೋಮವಾರ ಡಿಎಚ್‌ಒ ಡಾ.ಸುರೇಂದ್ರ ಬಾಬು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲೀಟರ್ ನೀರಿಗೆ ಪ್ಯಾಕೇಟ್‌ನಲ್ಲಿಯ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ, ಗಂಜಿ, ಆಹಾರದಲ್ಲಿ ಬೇಳೆ ತಿಳಿ ಬಳಸಬೇಕು.

ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಬೇಕು. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ. ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಇರಬೇಕು. ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೋಗದಿರಲು ಯೋಚಿಸಿ, ದೈನಂದಿನವಾಗಿ ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು ಎಂದು ಹೇಳಿದರು. ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ. ನವಜಾತ ಶಿಶುವಿನ ಬಗ್ಗೆ ಕಾಳಜಿ ಇರಲಿ: ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿಸುವ ಮೂಲಕ ಶಿಶುವಿನಲ್ಲಾಗುವ ನಿರ್ಜಲೀಕರಣ ತಡೆಯಲು ಸಹಕಾರಿಯಾಗುವುದು. ಯಾವುದೇ ಕಾರಣಕ್ಕೂ 6 ತಿಂಗಳೊಳಗಿನ ಮಗುವಿಗೆ ತಾಯಿ ಹಾಲು ಮಾತ್ರ ಕುಡಿಸಬೇಕು. ಅಲ್ಲದೆ ರೋಗ ನಿರೋಧಕ ಶಕ್ತಿ ವೃದ್ದಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು ಎಂದು ತಿಳಿಸಿದರು.

ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಡಾ.ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿ ಎಲ್ಲ ಆಸ್ಪತ್ರೆಯ ಬರುವ ಜನತೆಗೆ ಗ್ರಾಮಗಳಲ್ಲಿ ಹತ್ತಿ ಉಡುಪು ಬಳಕೆ, ಛತ್ರಿ, ಜೊತೆಯಲ್ಲಿ ನೀರು ಇರುವಂತೆ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ ಕೆ., ತಾಲೂಕಾ ಆರೋಗ್ಯಾಧಿಕಾರಿ ಡಾ.ಬನದೇಶ್ವರ, ಸಾರ್ವಜನಿಕ ಆಸ್ಪತ್ರೆಯ ವೈದ್ಯರಾದ ಡಾ.ಗಂಗಾಧರ್, ಡಾ.ಶಿವಕುಮಾರ್, ಡಾ.ನಾಗರಾಜ ಮಲ್ಲಾಪೂರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಪ್ಪ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸೋಮಪ್ಪ ಹಾಗೂ ಮತ್ತಿತರರಿದ್ದರು.

ಸುದ್ದಿ ಮಿಂಚು

ಸಿಎನ್‌ಜಿಗಾಗಿ ದಿನವಿಡಿ ವಾಹನಗಳ ಕ್ಯೂ

ಔರಾದ್: ಪಟ್ಟಣದಲ್ಲಿ ಸಿಎನ್‌ಜಿ ತುಂಬಿಕೊಳ್ಳಲು ವಾಹನಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ಸಾಲುಗಟ್ಟಿ ನಿಂತಿವೆ. ರಾಜ್ಯದ ಗಡಿ ತೆಲಂಗಾಣ, ಮಹಾರಾಷ್ಟ್ರ ಅಲ್ಲದೆ ಸ್ಥಳಿಯ ವಾಹನಗಳು ಗ್ಯಾಸ್ ಕೊರತೆಯಿಂದ ಸೋಮವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 10 ಗಂಟೆಯವರೆಗೆ ಆಟೋ ಕಾರುಗಳು ಗ್ಯಾಸ್ ಪಂಪಿನಲ್ಲಿ ಪ್ರಯಾಣಿಕರು ಬಿಡು ಬಿಟ್ಟಿದ್ದು, ಊಟ ತಿಂಡಿ ಬಿಟ್ಟು ಕಾಯಬೇಕಾಯಿತು. ಔರಾದ್ ಪಟ್ಟಣದಿಂದ ಸುತ್ತಲು ಕನಿಷ್ಠ 40 ಕಿಮೀ ದೂರದವರೆಗೆ ಸಿಎನ್‌ಜಿ ಸಿಗುವುದಿಲ್ಲ ಹೀಗಾಗಿ ದೂರದಿಂದ ಬಂದ ವಾಹನಗಳ ಸವಾರರು ಪಕ್ಕದ ಸಾಯಿ ಮಂದಿರದಲ್ಲಿ ಅನೇಕರು ಮಕ್ಕಳೊಂದಿಗೆ ದಿನ ಕಳೆದು ಸಂಜೆ ಹೊತ್ತಿಗೆ ಬಂದ ಸಿಎನ್‌ಜಿ ಸ್ಟಾಕ್ ಬಂದಮೇಲೆ ತುಂಬಿಕೊಂಡು ಹೋಗಿದ್ದಾರೆ. ನೆರೆ ರಾಜ್ಯದ ಮಹಾರಾಷ್ಟ್ರದ ಉದಗೀರದಿಂದ ಬಂದ ಆಟೋ ಚಾಲಕರು ಸಂಜೆ ವರೆಗೆ ನಿತ್ಯ ಕಾಯಕ ಬಿಟ್ಟು ಸಿಎನ್‌ಜಿಗಾಗಿ ಕಾದು ಮರಳಿದರು.

3 ರಾಜ್ಯಗಳಲ್ಲಿ ಬಿಜೆಪಿ ಗೆಲುವಿಗೆ ಸಂಭ್ರಮ

ಕಮಲನಗರ : ಪಂಚ ರಾಜ್ಯಗಳ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಅಭೂತಪೂರ್ವ ಸಾಧನೆ ಮಾಡಿರುವ ಹಿನ್ನಲೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಪಟ್ಟಣದಲ್ಲಿ ಸಂಭ್ರಮಾಚರಣೆ ನಡೆಸಿದರು. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಪಟ್ಟಣದ ಅಲ್ಲಮಪ್ರಭು ವೃತ್ತದ ಬಳಿ ಸೋಮವಾರ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು. ಮುಖಂಡ ಬಾಲಾಜಿ ತೇಲಂಗ ಮಾತನಾಡಿ, ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಪುದುಚೇರಿ, ಆಸ್ಸಾಂ ರಾಜ್ಯಗಳಲ್ಲಿ ಬಿಜೆಪಿಯು ಐತಿಹಾಸಿಕ ಗೆಲುವು ಸಾಧಿಸಿದೆ. ದೇಶದ ಜನ ಪ್ರಧಾನಿ ಮೋದಿಯವರ ಆಡಳಿತ ಮೆಚ್ಚಿ ಮತ ನೀಡಿದ್ದಾರೆ ಎಂದು ಹೇಳಿದರು.

ಮುಖಂಡರಾದ ಶಿವಾನಂದ ವಡ್ಡೆ, ಶಿವಕುಮಾರ ಝುಲ್ಪೆ, ಚಂದ್ರಕಾಂತ ಸಂಗಮೆ, ನಾಗೇಶ ಪತ್ರೆ, ಸತೀಶ ಮಿರ್ಚೆ, ಅವಿನಾಶ ಶಿವಣಕರ್, ಸಂಜು ತಲವಾಡೆ, ಸಂಜು ನಿಟ್ಟೂರೆ, ರಂಗರಾವ ಜಾಧವ, ಅಮರ ಶಿವಣಕರ್, ಧನರಾಜ ಭವರಾ, ಶಿವು ಸಂಗಮೆ, ಎಸ್.ಎನ್ ಶಿವಣಕರ್, ರಾಜಕುಮಾರ ಗಾಯಕವಾಡ, ಬಾಲಾಜಿ, ರಾಜಕುಮಾರ, ಸುಭಾಷ ಗಾಯಕವಾಡ, ವೈಜಿನಾಥ ಗುಡ್ಡಾ, ರಾಜಹಂಸ ಶೇಟಕಾರ್ ಹಾಗೂ ಪ್ರಮುಖರು ಪಾಲ್ಗೊಂಡಿದ್ದರು.

ಮೋದಿ ನಾಯಕತ್ವಕ್ಕೆ ಜನಾದೇಶ

ಬಸವಕಲ್ಯಾಣ: ಪಂಚ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಗಳಿಸಿದೆ. ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವಕ್ಕೆ ದೊರಕಿದ ಜನಾದೇಶವಾಗಿದೆ ಎಂದು ಬಿಜೆಪಿ ಮುಖಂಡ ಪ್ರದೀಪ ವಾತಡೆ ಅಭಿಪ್ರಾಯಪಟ್ಟಿದ್ದಾರೆ. ಬಂಗಾಳದಲ್ಲಿ ಗೆಲುವು ರಾಷ್ಟ್ರದ ಗೆಲುವಾಗಿದೆ. ಬಿಜೆಪಿ, ಸಂಘ ಪರಿವಾರದ ಅಸಂಖ್ಯಾತ ಕಾರ್ಯಕರ್ತರ ತ್ಯಾಗ, ಬಲಿದಾನದ ಪ್ರತಿಫಲ ಇದಾಗಿದೆ. ಪಕ್ಷದ ಸಂಸ್ಥಾಪಕರಲ್ಲೊಬ್ಬರಾದ ಡಾ.ಶ್ಯಾಮಪ್ರಸಾದ ಮುಖರ್ಜಿ ಅವರು ಕಂಡ ಕನಸು ಸಹ ಇಂದು ನನಸುಗೊಂಡಿದೆ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳದ ಬಿಜೆಪಿ ಅಭೂತಪೂರ್ವ ಗೆಲುವು ದೇಶದ ಆಂತರಿಕ ಸುರಕ್ಷತೆಗೆ ದೊಡ್ಡ ಶಕ್ತಿ ಕೊಟ್ಟಂತಾಗಿದೆ. ಮಮತಾ ಬ್ಯಾನರ್ಜಿ ಆಡಳಿತದ ಭ್ರಷ್ಟಾಚಾರ, ಹಿಂದು ವಿರೋಧಿ ನೀತಿ, ದೌರ್ಜನ್ಯ, ದಬ್ಬಾಳಿಕೆ, ಅಲ್ಪಸಂಖ್ಯಾತರ ಅತಿಯಾದ ತುಷ್ಟೀಕರಣ, ಬಾಂಗ್ಲಾ ನುಸುಳುಕೋರರಿಗೆ ಮನ್ನಣೆಯಿಂದ ಇಡೀ ವ್ಯವಸ್ಥೆಯೇ ಹಾಳಾಗಿತ್ತು. ದೇಶ ವಿರೋಧಿ ಶಕ್ತಿಗಳಿಗೆ ಬಂಗಾಳದ ಜನರು ಮತಾಸ್ತ್ರದ ಮೂಲಕ ತಕ್ಕ ಪಾಠ ಕಲಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಬಿಜೆಪಿ ಎಲ್ಲ ಚುನಾವಣೆಗಳಲ್ಲಿ ಭರ್ಜರಿ ಜಯ ದಾಖಲಿಸುತ್ತಿದ್ದು, ಮುಂದೆ ಕರ್ನಾಟಕದಲ್ಲಿ ಕಮಲ ಅರಳಿ ಮತ್ತೆ ಅಧಿಕಾರಕ್ಕೇರುವುದು ನಿಶ್ಚಿತವಾಗಿದೆ ಎಂದು ಹೇಳಿದ್ದಾರೆ.

ಬೈಕ್ ಡಿಕ್ಕಿಯಲ್ಲಿ ಓರ್ವ ಸಾವು

ಔರಾದ್: ಪಟ್ಟಣದ ಉಪ ಬಂಧಿಖಾನೆ ಬಳಿ ಮಂಗಳವಾರ ಬೆಳಿಗ್ಗೆ ಎರಡು ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ಓರ್ವ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಔರಾದ್ ತಾಲೂಕಿನ ವಡಗಾಂವ(ದೇ) ಗ್ರಾಮದ ಮಹಾದೇವ ಖಳೂರೆ (50) ಮೃತ ಸವಾರು. ಇವರು ಔರಾದ್ ಪಟ್ಟಣದ ಭಾಲ್ಕಿ ಹಿರೇಮಠ ಸಂಸ್ಥಾನದ ಅಧೀನದ ಅನುಭವ ಮಂಟಪ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ ಕ್ಯಾಶಿಯರ್ ಇದ್ದರು. ಸ್ವಗ್ರಾಮ ವಡಗಾಂವನಿಂದ ಕರ್ತವ್ಯಕ್ಕೆ ತೆರಳುತ್ತಿದ್ದಾಗ ಎದುರಿನಿಂದ ಬಂದ ಬೈಕ್‌ನೊಂದಿಗೆ ಡಿಕ್ಕಿಯಾಗಿದೆ. ಡಿಕ್ಕಿಯಿಂದ ಜೋರಾಗೆ ಹೆದ್ದಾರಿ ಮೇಲೆ ಬಿದ್ದಿದ್ದ ಇವರ ತಲೆಗೆ ಗಂಭೀರ ಪೆಟ್ಟಾಗಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಜಹೀರಾಬಾದ್ ಮೂಲದ ಇನ್ನೊರ್ವ ಬೈಕ್ ಸವಾರನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮಹಾದೇವ ಅವರು ಹೆಲ್ಮೆಟ್ ಧರಿಸಿದ್ದರೆ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಡಿಕ್ಕಿ ಬಳಿಕ ಇವರು ನೆಲಕ್ಕೆ ಬಿದ್ದಾಗ ತಲೆಗೆ ಮಾತ್ರ ಪೆಟ್ಟಾಗಿ ಅಸುನೀಗಿದ್ದಾರೆ. ಔರಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹತ್ತು ಸಾವಿರ ಪಾಲ್ಗೊಳ್ಳುವ ನಿರೀಕ್ಷೆ

ಸೂಗೂರೇಶ್ವರ ಶಿವಾಚಾರ್ಯರರ ಹೇಳಿಕೆ | 18ರಂದು ಬಸವಾದಿ ಶರಣರ ಹಿಂದೂ ಬೃಹತ್ ಸಮಾವೇಶ

ಶಹಾಪುರದಲ್ಲಿ ಬಸವಾದಿ ಶರಣರ ಹಿಂದೂ ಬೃಹತ್ ಸಮಾವೇಶ ಪ್ರಯುಕ್ತ ಸುದ್ದಿಗೋಷ್ಠಿ ಜರುಗಿತು.

ಸಂ.ಕ. ಸಮಾಚಾರ ಶಹಾಪುರ: ನಗರದ ಸಿಪಿಎಸ್ ಶಾಲಾ ಮೈದಾನದಲ್ಲಿ ಜಿಲ್ಲಾ ಮಟ್ಟದ ಬಸವಾದಿ ಶರಣರ ಹಿಂದೂ ಬೃಹತ್ ಸಮಾವೇಶ ದಿ. 18ರಂದು ಆಯೋಜಿಸಲಾಗಿದ್ದು, ಸಮಾವೇಶದ ನೇತೃತ್ವ ಕಾಡಸಿದ್ಧೇಶ್ವರ ಮಠದ ಕನ್ನೇರಿ ಶ್ರೀಗಳು ವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಮೂಲಕ ಯಶಸ್ವಿಗೊಳಿಸಬೇಕೆಂದು ಸೂಗೂರೇಶ್ವರ ಶಿವಾಚಾರ್ಯರು ಮನವಿ ಮಾಡಿದರು. ನಗರದ ಕುಂಬಾರ ಓಣಿ ಹಿರೇಮಠದಲ್ಲಿ ಬಸವಾದಿ ಶರಣರ ಹಿಂದೂ ಬೃಹತ್ ಸಮಾವೇಶ ನಿಮಿತ್ಯ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಸುಮಾರು 200ಕ್ಕೂ ಹೆಚ್ಚು ವಿವಿಧ ಮಠಾಧೀಶರು ಉಪಸ್ಥಿತಿ ಇರಲಿದ್ದಾರೆ. ಸಮಾವೇಶ ಪಕ್ಷಾತೀತವಾಗಿದ್ದು, ಅಂದು ರೈತಾಪಿ ವರ್ಗ ಸೇರಿದಂತೆ ಸಮಾಜದ ಜಾಗೃತಿ ಕುರಿತು ಕನ್ನೇರಿಶ್ರೀಗಳು ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಅಲ್ಲದೆ ದೇಶದ ಪರಂಪರೆ, ಸಂಸ್ಕೃತಿ, ಈ ನೆಲದ ಐತಿಹಾಸಿಕತೆ ಕುರಿತು ದೇಶಾಭಿಮಾನ ಬೆಳೆಸುವ ನಿಟ್ಟಿನಲ್ಲಿ ಮಾತನಾಡಲಿದ್ದಾರೆ. ಕಾರ್ಯಕ್ರಮಕ್ಕೂ ಮುಂಚೆ ನಗರದ ಗುಗ್ಗಳ ಬಸವೇಶ್ವರ ದೇವಸ್ಥಾನದಿಂದ ಗಾಂಧಿಚೌಕ, ಮೋಚಿಗಡ್ಡಾ, ಬಸವೇಶ್ವರ ವೃತ್ತ, ಹಳೆ ಬಸ್ ನಿಲ್ದಾಣ ಮೂಲಕ ಸಿಪಿಎಸ್ ಶಾಲಾ ಮೈದಾನದ ವೇದಿಕೆ ವರೆಗೆ ಮೆರವಣಿಗೆ ನಡೆಯಲಿದೆ. ಮೆರವಣಿಗೆಯಲ್ಲಿ ಮಹಿಳೆಯರು ಕುಂಭ ಹೊರಲಿದ್ದು, ವಿವಿಧ ವಾದ್ಯಗಳೊಂದಿಗೆ ಸಾರೋಟದಲ್ಲಿ ಬಸವಣ್ಣಆದಿಯಾಗಿ ಎಲ್ಲಾ ಶಿವಶರಣರ ಭಾವಚಿತ್ರಗಳೊಂದಿಗೆ ಮೆರವಣಿಗೆ ನಡೆಯಲಿದೆ ಸಂಜೆ 4ಕ್ಕೆ ಆರಂಭವಾಗುವ ಮೆರವಣಿಗೆ ಸುಮಾರು 6-30 ರವರೆಗೆ ವೇದಿಕೆ ತಲುಪಲಿದೆ. ಅಂದಾಜು 10 ಸಾವಿರ ಜನಸಂಖ್ಯೆ ಸೇರುವ ನಿರೀಕ್ಷೆ ಇದೆ. ಕಾರ್ಯಕ್ರಮ ಜೊತೆಗೆ ಪ್ರಸಾದ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಕನ್ನೇರಿ ಶ್ರೀಗಳು ಬಹುಗಟ್ಟಿ ಧ್ವನಿ ಎತ್ತುವ ಮೂಲಕ ನಮ್ಮ ಧರ್ಮ ಉಳಿಸುವ ಕೆಲಸ ಮಾಡಿದ್ದಾರೆ. ಆ ನಿಟ್ಟಿನಲ್ಲಿ ನಾವೆಲ್ಲರೊಂದಿಗೆ ಹಿಂದೂಧರ್ಮದ ಯುವ ಸಮೂಹಕ್ಕೆ ಸನ್ಮಾರ್ಗ ತೋರುವ ಅಗತ್ಯತೆ ಕಂಡುಕೊಂಡು ಇಂತಹ ಕಾರ್ಯಕ್ರಮಗಳ ಮೂಲಕ ದೇಶದ ಐತಿಹಾಸಿಕತೆ, ನಮ್ಮ ನೆಲ ಧರ್ಮ ಕುರಿತು ಜಾಗೃತಿ ಮೂಡಿಸಲು ನಿರ್ಧರಿಸಲಾಗಿದ್ದು, ಸುಭದ್ರ ದೇಶ ಉತ್ತಮ ಸಮಾಜ ನಿರ್ಮಾಣಕ್ಕೆ ದಾರಿದೀಪವಾಗುವಂಥ ಕೆಲಸ ಮಾಡಲು ನಾವೆಲ್ಲ ಮಠಾಧೀಶರು ಸೇರಿ ಬೃಹತ್ ಸಮಾವೇಶ ಯಶಸ್ವಿಗೆ ಶ್ರಮಿಸುತ್ತಿದ್ದೇವೆ ಎಂದರು.

ಕಡಕೋಳ ಮಠದ ಡಾ. ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಹಿಂದೂಸ್ಥಾನದಲ್ಲಿ ವಾಸಿಸುವರೆಲ್ಲರೂ ಹಿಂದೂಗಳೇ ಆಗಿದ್ದು, ಈ ಸಮಾವೇಶ ಯುವಕರಿಗೆ ಸನ್ಮಾರ್ಗ ತೋರುವದು ದೇಶದ ಉಳಿವಿಗೆ ಹಿಂದೂ ಸಮಾಜದ ಉನ್ನತಿಗೆ ಮತ್ತು ದೇಶದ ಸಂಸ್ಕೃತಿಗೆ ನಮ್ಮ ಪೂರ್ವಜರು ನಡೆದುಕೊಂಡು ಬಂದ ಪದ್ಧತಿ ಅನುಸರಿಬೇಕಿದೆ ಅದರಲ್ಲಿರುವ ವೈಜ್ಞಾನಿಕ ತತ್ವ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಮಾಡುತ್ತಿದ್ದು, ಇದು ಪಕ್ಷಾತೀತ ಕಾರ್ಯಕ್ರಮವಾಗಿದೆ. ಯಾರದೇ ವಿರುದ್ಧ ಪರ ಅಲ್ಲ ಇದೊಂದು ಸಾತ್ವಿಕ ನೆಲೆಗಟ್ಟಿನಲ್ಲಿ ನಮ್ಮ ಧರ್ಮನಿಷ್ಠೆಯಿಂದ ಅದರ ರಕ್ಷಣೆಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಗುಂಬಳಾಪುರ ಮಠದ ಸಿದ್ದೇಶ್ವರ ಶಿವಾಚಾರ್ಯರು, ದೋರನಹಳ್ಳಿ ಶಿವಲಿಂಗರಾಜೇಂದ್ರ ಶಿವಚಾರ್ಯರು, ಮದ್ರಿಕಿ ಶಿವತೇಶ ಶಿವಾಚಾರ್ಯರು, ಹತ್ತಿಗೂಡೂರ ಗಿರಿಮಲ್ಲೇಶ್ವರ. ಶಿವಾಚಾರ್ಯರು, ಕೆಂಭಾವಿಯ ಚನ್ನಬಸವ ಶಿವಾಚಾರ್ಯರು, ಇಟಗಿಯ ಚಂದ್ರಶೇಖರ ದೇವರು, ನಾಗನಟಗಿ ಸಿದ್ರಾಮಯ್ಯ ಸ್ವಾಮೀಗಳು, ದಿಗ್ಗಿಯ ದೇವಯ್ಯ ಸ್ವಾಮಿಗಳು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯದ ಅಸ್ಮಿತೆ ಗಟ್ಟಿ

ಸಾಹಿತಿ ಡಾ. ಭೀಮರಾಯ ಹೇಳಿಕೆ | ಕಸಾಪ ಸಂಸ್ಥಾಪನಾ ದಿನಾಚರಣೆ

ಯಾದಗಿರಿ ಜಿಲ್ಲಾ ಕಸಾಪ ಸಭಾಂಗಣದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಡಾ. ಸಿದ್ದಪ್ಪ ಹೊಟ್ಟಿ, ಸಾಹಿತಿಗಳು, ಪದಾಧಿಕಾರಿಗಳು ಇದ್ದರು.

ಸಂ.ಕ. ಸಮಾಚಾರ ಯಾದಗಿರಿ: ನಾಡು-ನುಡಿ, ನೆಲ-ಜಲ ಮತ್ತು ಕನ್ನಡದ ಸಂಸ್ಕೃತಿಯನ್ನು ಕಟ್ಟಿ ಬೆಳೆಸಲು ಸ್ಥಾಪಿತವಾದ ಸಂಸ್ಥೆಯೇ ಕನ್ನಡ ಸಾಹಿತ್ಯ ಪರಿಷತ್ತು ಈ ಪರಷತ್ತು ಕನ್ನಡ ಸಾಹಿತ್ಯದ ಅಸ್ಮಿತೆಯನ್ನು ಗಟ್ಟಿಗೊಳಿಸಿದೆ ಎಂದು ಡಾ. ಭೀಮರಾಯ ಲಿಂಗೇರಿ ಹೇಳಿದರು. ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಚಾರ ಮತ್ತು ಪ್ರಸಾರ ಉದ್ದೇಶದಿಂದ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಅಸ್ಮಿತೆ ಗಟ್ಟಿಗೊಳಿಸಿದೆ ಎಂದರು.

ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಷತ್ತಿನ ಸ್ಥಾಪನೆಗೆ ಚಾಲನೆ ನೀಡಿದರು. ಅಂದಿನ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಹಾಗೂ ಹೆಚ್‌ವಿ ನಂಜುಂಡಯ್ಯ, ಬಿಎಂ. ಶ್ರೀಕಂಠಯ್ಯ ಮೊದಲಾದವರ ದೂರ ದೃಷ್ಟಿಯಿಂದ 1915 ಮೇ 5 ರಂದು ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡಿತ್ತು ಮುಂದೆ 1935ರಲ್ಲಿ ಈ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿಸಿದರು. ಇದು ಕನ್ನಡ ಪುಸ್ತಕ ಪ್ರಕಟಣೆ, ಕನ್ನಡ ನಾಡು-ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆಗಾಗಿ ಶ್ರಮಿಸಲು ಕಟ್ಟಲಾಗಿರುವ ಸಂಸ್ಥೆ. ಈ ಸಂಸ್ಥೆ ಕರ್ನಾಟಕದಾದ್ಯಂತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸುತ್ತದೆ. ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆ ಮೂಲೆಗಳಲ್ಲಿ ಹಬ್ಬಿಸಲು ಜಿಲ್ಲಾ ಮತ್ತು ತಾಲೂಕ. ವಲಯ ಘಟಕಗಳನ್ನು ಹೊಂದಿದೆ ಎಂದು ತಿಳಿಸಿದರು.ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿದ್ದಪ್ಪ ಹೊಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗೌರವ ಉಪಸ್ಥಿತಿಯನ್ನು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವೆಂಕಟೇಶ ಕಲಕಂಭ ವಹಿಸಿದ್ದರು. ಆರ್. ಮಹದೇವಪ್ಪಗೌಡ ಅಬ್ಬೆತುಮಕೂರ, ಡಾ. ಸಿದ್ದರಾಜರೆಡ್ಡಿ, ಡಾ. ಎಸ್ಎಸ್ ನಾಯಕ, ಬಸವಂತ್ರಾಯಗೌಡ ಮಾಲಿ ಪಾಟೀಲ, ಸೂರ್ಯಕಾಂತ ಕರದಳ್ಳಿ, ನಾಗಪ್ಪ ಸಜ್ಜನ, ನೂರಂದಪ್ಪ ಲೇವಡಿ, ಚೆನ್ನಪ್ಪ ಸಾಹು ಠಾಣಗುಂದಿ, ಶರಣಪ್ಪ ಗುಳಗಿ, ಸ್ವಾಮಿದೇವ ದಾಸನಕೇರಿ, ಲಕ್ಷ್ಮೀನಾರಾಯಣ ಗುಂಡನೂರ, ಸುಭಾಶರೆಡ್ಡಿ ಪಾಟೀಲ, ರಮೇಶ ಈಟೆ, ಶರಣು ಇಡ್ಲೂರ, ಗುರುರಾಜ ತಳವಾರ, ನಿಂಗಪ್ಪ, ಸೋಪಣ್ಣ ಭಾಗವಹಿಸಿದ್ದರು.

ಎಸ್‌ಬಿಆರ್‌ನಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನ

ಬಸವಕಲ್ಯಾಣ ಎಸ್‌ಬಿಆರ್ ಪಬ್ಲಿಕ್ ಸ್ಕೂಲ್‌ನಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಅಗ್ರಶ್ರೇಣಿಯಲ್ಲಿ ಪಾಶದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಡಾ.ಬಸವರಾಜ ಎವಲೆ ಪ್ರಾಚಾರ್ಯ ಡಾ. ವಿದ್ಯಾಧರ್ ಡಿ, ರಾಜಕುಮಾರ್ ಮಾಡಗೆ ಉಪಸ್ಥಿತರಿದ್ದರು

ಸಂ.ಕ.ಸಮಾಚಾರ ಬಸವಕಲ್ಯಾಣ ವಿದ್ಯಾರ್ಥಿಗಳು ಯಶಸ್ಸು ಕಾಣಲು ನಿಯಮಿತ ಅಭ್ಯಾಸ, ಪರಿಶ್ರಮ ಹಾಗೂ ಶಿಕ್ಷಕರ ಸೂಕ್ತ ಮಾರ್ಗದರ್ಶನ ಅವಶ್ಯಕ ಎಂದು ಎಸ್‌ಎಸ್‌ಕೆಬಿ ಕಾಲೇಜು ಕ್ಯಾಂಪಸ್ ನಿರ್ದೇಶಕ ಡಾ.ಬಸವರಾಜ ಎವಲೆ ಹೇಳಿದರು.

ಕಲಬುರಗಿಯ ಶರಣಬಸವೇಶ್ವರ ವಿದ್ಯಾವರ್ದಕ ಸಂಘದ ಅಡಿ ನಗರದಲ್ಲಿ ನಡೆಯುವ ಎಸ್‌ಬಿಆರ್ ಪಬ್ಲಿಕ್ ಸ್ಕೂಲ್‌ನಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಅಗ್ರಶ್ರೇಣಿಯಲ್ಲಿ ಪಾಶದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶ್ರಮ ವಹಿಸಿ ಅಭ್ಯಾಸ ಮಾಡುತ ಟಗಟಇ ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಜತೆಗೆ ಸಮಾಜಕ್ಕೆ ಕೊಡುಗೆ ನೀಡಬೇಕು ಎಮದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ ಎಸ್‌ಬಿಆರ್ ಪ್ರಾಚಾರ್ಯ ಡಾ. ವಿದ್ಯಾಧರ್ ಡಿ ಮಾತನಾಡಿ, ವಿದ್ಯಾರ್ಥಿಗಳ ಶ್ರಮ ಮತ್ತು ಶಿಕ್ಷಕರ ಪ್ರಯತ್ನದಿಂದಾಗಿ ಉತ್ತಮ ಫಲಿತಾಂಶ ಬಂದಿದೆ. ಸಾಧನೆಗೆ ಮನಸ್ಸು ಮತ್ತು ಪ್ರಯತ್ನ ಮುಖ್ಯ. ಸಮಯ ಸೌಲಭ್ಯ ಬಳಸಿಕೊಂಡು ವಿದ್ಯಾಥಿಗಳು ಶ್ರಮ ವಹಿಸಿ ಅಭ್ಯಾಸ ಮಾಡಬೇಕು. ಅಂದಾಗ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು. ಪತ್ರಕರ್ತ ಜೋಶಿ ಮಾತನಾಡಿದರು ಪ್ರಾಚಾರ್ಯ ರಾಜಕುಮಾರ್ ಮಾಡಗೆ,. ಚಂದ್ರಕಾಂತ ಸ್ವಾಮಿ, ಅಕ್ಷತಾ ಮಠಪತಿ, ನಿರ್ಮಲಾ ಘೋಡವಾಡೆ, ಶಾಂತಮ್ಮ ಬಿರಾದಾರ, ಶಿವಾನಂದ ಬಿರಾದಾರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕರು ಭಾಗವಹಿಸಿದ್ದರು. ಅಕ್ಷತಾ ಮಠಪತಿ ಹಾಗೂ ನಿರ್ಮಲಾ ಘೋಡವಾಡೆ ಸ್ವಾಗತಿಸಿ, ನಿರೂಪಣೆ ಮಾಡಿದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಟ್ರಾನ್ಸ್ ಜೆಂಡರ್ ತಿದ್ದುಪಡಿ ಮಸೂದೆ ವಾಪಸ್ಸಿಗೆ ಆಗ್ರಹ

ಯಾದಗಿರಿಯ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೃಷ್ಟಿರಾಜ್ ಮಾತನಾಡಿದರು.

ಯಾದಗಿರಿ: ಕಳೆದ ವರ್ಷ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರವು ಪ್ರಾಸ್ತಾಪಿಸಿದ ಟ್ರಾನ್ಸ್ ಜೆಂಡರ್ ವ್ಯಕ್ತಿಗಳ ತಿದ್ದುಪಡಿ ಮಸೂದೆಯನ್ನು ಬಲವಾಗಿ ವಿರೋಧಿಸಿರುವ ಸಿಎಸ್‌ಜಿಎಂಆರ್ ಕೋಯಿಲೇಷನ್ ಮತ್ತು ಸಾರಥ್ಯ ಕರ್ನಾಟಕ ರಾಜ್ಯ ಮಟ್ಟದ ಸಮುದಾಯ ಸಂಘಟನೆ ಪದಾಧಿಕಾರಿಗಳು ಕೂಡಲೇ ಈ ಮಸೂದೆಯನ್ನು ವಾಪಸ್ ಪಡೆಯಬೇಕು ಮತ್ತು ಎಲ್ಲೆಂದರಲ್ಲಿ ನಿಂತು ಭೀಕ್ಷಾಟನೆ ಮಾಡಬಾರದೆಂದು ಜಿಲ್ಲಾಡಳಿತ ಹೊರಡಿಸಿರುವ ಆದೇಶವೂ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು.

ಇಲ್ಲಿಯ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಾನ್ಸ್ ಜೆಂಡರ್ ಎಂಬ ಪದಕ್ಕೆ ಸೀಮಿತ ಮತ್ತು ತಪ್ಪಾದ ವ್ಯಾಖ್ಯಾನ ನೀಡಲಾಗಿದೆ. ಹಲವಾರು ಲಿಂಗ ವೈವಿಧ್ಯತೆಯ ಗುರುತುಗಳನ್ನು ಹೊರತುಪಡಿಸಲಾಗಿದೆ. ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸುವ ಮೂಲಕ ಮಾನವ ಹಕ್ಕುಗಳ ಉಲ್ಲಂಘನೆ ಮಾಡಲಾಗಿದೆ ಎಂದು ಅವರು ದೂರಿದರು. ಟ್ರಾನ್ಸ್ ಜೆಂಡರ್ ವ್ಯಕ್ತಿಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡಲು ಹೊರಟಿರುವುದು ಖಂಡಿಸುವುದಾಗಿ ಹೇಳಿದರು. ಯಾವುದೇ ನೀತಿ ರೂಪಿಸುವ ಎಲ್ಲ ಹಂತಗಳಲ್ಲಿ ಸಮುದಾಯದೊಂದಿಗೆ ಸಾರ್ಥಕ ಸಮಾಲೋಚನೆ ನಡೆಸಬೇಕು. ಕಾನೂನುಗಳು ಸಂವಿಧಾನ ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕು ಮಾನದಂಡಗಳಿಗೆ ಅನುಗುಣವಾಗಿರಬೇಕು. ಸಂವಿಧಾನ ಮೌಲ್ಯಗಳನ್ನು ಕಾಪಾಡಬೇಕು ಎಂದು ಆಗ್ರಹಿಸಿದರು.ಸಾರಥ್ಯ ಸಂಘಟನೆ ಪದಾಧಿಕಾರಿ ಚಾಂದಿನಿ, ತ್ರಿಮೂರ್ತಿ, ಆಶಾಕಿರಣ ಸಾಮಾಜಿಕ ಸೇವಾ ಸಂಸ್ಥೆಯ ಪದಾಧಿಕಾರಿಗಳಾದ ಮಾಯಾ ನಾಯಕ, ಪ್ರಿಯಾಂಕಾ, ಅಂಕಿತಾ, ಮಂಜುಳಾ, ಪುಂಡಲಿಕ್ ಹಾಗೂ ಇನ್ನಿತರರಿದ್ದರು. ನಂತರ ನೇತಾಜಿ ವೃತ್ತದಲ್ಲಿ ಬೇಡಿಕೆಗಳಿಗೆ ಆಗ್ರಹಿಸಿ ಮೌನ ಪ್ರತಿಭಟನೆ ನಡೆಸಿದ ಅವರು ಜಿಲ್ಲಾಧಿಕಾರಿ ಕಚೇರಿ ತೆರಳಿ ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಅವರಿಗೆ ಮನವಿ ಸಲ್ಲಿಸಿದರು.

ಟ್ರಾನ್ಸ್ ಜೆಂಡರ್‌ಗಳು ಎಲ್ಲೆಂದರಲ್ಲಿ ನಿಂತು, ಹೋಗಿ ಭೀಕ್ಷೆ ಬೇಡುವುದನ್ನು ನಿಲ್ಲಿಸಬೇಕೆಂದು ಕಾನೂನು ಕ್ರಮ ಜರುಗಿಸುವುದಾಗಿ ತಮಗೆ ನೋಟಿಸ್ ನೀಡಿದ್ದನ್ನು ಖಂಡಿಸಿರುವ ಆಶಾ ಕಿರಣ ಸೇವಾ ಸಂಸ್ಥೆಯ ಪದಾಧಿಕಾರಿಗಳು ಜಿಲ್ಲಾಡಳಿತ ತಮಗೆ ಸೂಕ್ತ ಕೆಲಸ ನೀಡಿದರೇ ಆ ಕೆಲಸ ಬಿಡುತ್ತೇವೆ. ನಾವೆಲ್ಲರೂ ಹತ್ತನೆ ತರಗತಿಯಿಂದ ಸ್ನಾತಕೊತ್ತರ ಪದವಿಯವರೆಗೂ ಶಿಕ್ಷಣ ಪಡೆದಿದ್ದೇವೆ. ನಮ್ಮ ಶಿಕ್ಷಣಕ್ಕೆ ತಕ್ಕಂತೆ ಕೆಲಸ ನೀಡಿದರೆ ನಾವೇಕೆ ಭೀಕ್ಷೆ ಬೇಡುತ್ತೇವೆ. ಮೊದಲು ನಮ್ಮ ಸ್ಥಿತಿ, ಗತಿ ಅರ್ಥ ಮಾಡಿಕೊಳ್ಳಬೇಕು. ನಂತರ ಇಂತಹ ಪತ್ರ, ನೋಟಿಸ್ ನೀಡಿದರೆ ಅದಕ್ಕೊಂದು ಅರ್ಥ ಬರುತ್ತದೆ ಎಂದು ಹೇಳಿದ್ದಾರೆ.

ಅಭಿಮಾನೋತ್ಸವಕ್ಕೆ ತಯಾರಿ

ಸಂ.ಕ.ಸಮಾಚಾರ ಬೀದರ್: ಇದೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಜೆಪಿ ಹಿರಿಯ ಮುತ್ಸದ್ಧಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯ ಜನರಿಗೆ ಸೇರಿಸುವ ನಿಟ್ಟಿನಲ್ಲಿ ಕೇಸರಿ ಪಡೆ ಬೀದರ್ ಜಿಲ್ಲೆಯಲ್ಲೂ ಭರ್ಜರಿ ಸಿದ್ಧತೆ ನಡೆಸಿದೆ. ಅಭಿಮಾನೋತ್ಸವ ಜಿಲ್ಲಾ ಉಸ್ತುವಾರಿಯೂ ಆಗಿರುವ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಅವರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ. ಜಿಲ್ಲೆಯ ಪ್ರತಿ ವಿಧಾನಸಭೆ ಕ್ಷೇತ್ರಗಳಿಂದ 1500ರಂತೆ ಒಟ್ಟು ಆರು ಕ್ಷೇತ್ರಗಳಿಂದ 9 ಸಾವಿರ ಕಾರ್ಯಕರ್ತರಿಗೆ ಕಾರ್ಯಕ್ರಮಕ್ಕೆ ಒಯ್ಯಲು ತಯಾರಿಗಳು ನಡೆದಿವೆ. ಜಿಲ್ಲೆಯ ಪ್ರಮುಖ ಮಠಾಧೀಶರಿಗೂ ಕಾರ್ಯಕ್ರಮದ ಸಾನಿಧ್ಯ ವಹಿಸಿ, ಹಿರಿಯ ಜೀವಿಗೆ ಆಶೀರ್ವದಿಸಲು ಆಹ್ವಾನಿಸಲಾಗುತ್ತಿದೆ. ಅಭಿಮಾನೋತ್ಸವ ಸಂಬಂಧ ಮಂಗಳವಾರ ಇಲ್ಲಿ ಬೀದರ್ ದಕ್ಷಿಣ ಮಂಡಲದ ಪ್ರಮುಖರ ಸಭೆ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ನೇತೃತ್ವದಲ್ಲಿ ನಡೆಯಿತು. ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50 ವರ್ಷಗಳ ಸಾರ್ಥಕ ಪಯಣದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಅಭಿಮಾನೋತ್ಸವ ನಡೆಯುತ್ತಿದೆ. ನಾಡಿನ ಎಲ್ಲೆಡೆಯಿಂದ ಲಕ್ಷಾಂತರು ಜನರು ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ. ಬೀದರ್ ಜಿಲ್ಲೆಯಿಂದಲೂ ಹೆಚ್ಚಿನ ಕಾರ್ಯಕರ್ತರು ಆಗಮಿಸಬೇಕು ಎಂದರು.

ದಕ್ಷಿಣ ಕ್ಷೇತ್ರದ ಉಸ್ತುವಾರಿ, ಬಿಜೆಪಿ ಯುವ ಮುಖಂಡ ಸೂರ್ಯಕಾಂತ ಚಿಲ್ಲಾಬಟ್ಟೆ ಮಾತನಾಡಿ, ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿ, ಬೆಳೆಸಿದ ಮತ್ತು ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದ ಮೂಲಕ ಬಿಜೆಪಿಗೆ ಅಧಿಕಾರ ತಂದುಕೊಟ್ಟ ಶ್ರೇಯ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಅವರ ಸಿಎಂ ಅವಧಿಯಲ್ಲಿ ಅನೇಕ ಚರಿತ್ರಾರ್ಹ ಕೆಲಸಗಳು ಮಾಡಿದ್ದಾರೆ. ನಾಡಿಗೆ ಅವರ ಕೊಡುಗೆ ಅಪಾರ, ಅವಿಸ್ಮರಣೀಯವಿದೆ. ಇಂಥ ಕಾರ್ಯಕ್ರಮ ಕಣ್ತುಂಬಿಕೊಳ್ಳುತ್ತಿರುವುದೇ ನಮ್ಮೆಲ್ಲದ ಸುದೈವ ಎಂದು ಹೇಳಿದರು.ದಕ್ಷಿಣ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರಾ ಬಗದಲ್ ಅಧ್ಯಕ್ಷತೆ ವಹಿಸಿದ್ದರು. ಸಹ ಉಸ್ತುವಾರಿ ರಾಜಕುಮಾರ ನೆಮತಾಬಾದೆ, ಪ್ರಮುಖರಾದ ಚಂದ್ರಯ್ಯ ಸ್ವಾಮಿ, ಸಂಜುಕುಮಾರ ಕೋಳಿ, ರಾಜರೆಡ್ಡಿ ಶಾಬಾದ್, ಹೇಮಾ ತುಕ್ಕಾರೆಡ್ಡಿ, ಮಾಣಿಕಪ್ಪ ಖಾಶೆಂಪುರ, ಇತರರಿದ್ದರು. ಈ ವೇಳೆ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಎಂಎಲ್ಸಿ ಚುನಾವಣೆ ಪೂರ್ವಸಿದ್ಧತೆ ಪರಿಶೀಲನೆಯೂ ನಡೆಯಿತು.

ಪಿಡಿಒಗಳಿಗೆ ಅತೀವ ಒತ್ತಡ ಸಲ್ಲದು

ಕೊತಬಾಳ ಪಿಡಿಒ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣ ಸಮಗ್ರ ತನಿಖೆಗೆ ಒತ್ತಾಯ

ಗದಗ ಜಿಲ್ಲೆಯ ಕೊತಬಾಳ ಗ್ರಾಪಂ ಪಿಡಿಒ ಮುಕ್ತಂಹುಸೇನ್ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣದ ಸಮಗ್ರ ತನಿಖೆಗೆ ಆಗ್ರಹಿಸಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಬೀದರ್ ಜಿಪಂ ಸಿಇಒ ಮೂಲಕ ಮಂಗಳವಾರ ಪಂಚಾಯತ್ ರಾಜ್ ಸಚಿವರಿಗೆ ಮನವಿಪತ್ರ ರವಾನಿಸಿತು. ಶರತಕುಮಾರ ಅಭಿಮಾನ್, ದೇವಪ್ಪ ಇತರರಿದ್ದರು.

ಸಂ.ಕ.ಸಮಾಚಾರ ಬೀದರ್: ಗದಗ ಜಿಲ್ಲೆಯ ರೋಣ ತಾಲೂಕಿನ ಕೊತಬಾಳ ಗ್ರಾಪಂ ಪಿಡಿಒ ಮುಕ್ತಂಹುಸೇನ್ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣ ಬಗ್ಗೆ ಸಮಗ್ರ ತನಿಖೆಯಾಗಿ ಅವರಿಗೆ ನ್ಯಾಯ ಒದಗಿಸಲು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

ಶರತಕುಮಾರ ಅಭಿಮಾನ್ ನೇತೃತ್ವದಲ್ಲಿ ಸಂಘದ ಪ್ರಮುಖರು ಮಂಗಳವಾರ ಜಿಪಂ ಸಿಇಒ ಮುಖಾಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಮನವಿ ಪತ್ರವನ್ನು ರವಾನಿಸಿ, ಈ ಪ್ರಕರಣ ಕೇವಲ ಕೊತಬಾಳ ಪಿಡಿಒ ದುರಂತವಲ್ಲ. ಇದು ಇಡೀ ರಾಜ್ಯದಲ್ಲಿರುವ ಪಿಡಿಒಗಳು ಎದುರಿಸುತ್ತಿರುವ ನೈಜ ಮತ್ತು ಭೀಕರ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಗ್ರಾಮೀಣಾಭಿವೃದ್ಧಿಯ ಆಧಾರಸ್ತಂಭವಾಗಿರುವ ಪಿಡಿಒಗಳು ಇಂದು ತೀವ್ರವಾದ ಕೆಲಸದ ಒತ್ತಡದಲ್ಲಿ ನಲುಗಿ ಜೀವಕ್ಕೆ ವಿದಾಯ ಹೇಳುತ್ತಿರುವುದು ದುರದೃಷ್ಟಕರ ಸಂಗತಿ ಎಂದಿದ್ದಾರೆ.

ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ನೌಕರರ ಮೇಲೆ ನಡೆಯುತ್ತಿರುವ ನಿರಂತರ ಒತ್ತಡಗಳು ಹಾಗೂ ಸಂಭವಿಸುತ್ತಿರುವ ಅಕಾಲಿಕ ಸಾವುಗಳ ಕುರಿತು ಅಧ್ಯಯನ ಮಾಡಲು ಕೆಳದ ಒಂದು ವರ್ಷದ ಹಿಂದೆ ಮೀನಾಕ್ಷಿ ಸುಂದರಂ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತು. ಆದರೆ ಈ ಸಮಿತಿಯು ಇದುವರೆಗೂ ಸರ್ಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ. ನೌಕರರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಇಂತಹ ವ್ಯವಸ್ಥಿತ ಒತ್ತಡಗಳನ್ನು ತಡೆಯಲು ಈ ವರದಿ ಅತ್ಯಂತ ಅವಶ್ಯಕವಾಗಿದೆ ಎಂದು ಹೇಳಿದ್ದಾರೆ.

ಒತ್ತಡ ರಹಿತ ಕೆಲಸದ ವಾತಾವರಣ, ಹಿರಿಯ ಅಧಿಕಾರಿಗಳಿಂದ ಸಹಕಾರ, ಕ್ಷುಲ್ಲಕ ಕಾರಣಗಳಿಗೆ ಪಿಡಿಒಗಳ ಅಮಾನತ್ತು ನಿಲ್ಲಬೇಕು. ಕಾಲಮಿತಿಯೊಳಗೆ ತನಿಖೆ ಹಾಗೂ ಅಮಾನತ್ತು ತೆರವು, ಮೀನಾಕ್ಷಿ ಸುಂದರಂ ಸಮಿತಿ ವರದಿ ಪಡೆಯಬೇಕು. ದಾಖಲೆ ರಹಿತ ಮತ್ತು ಆನ್‌ಲೈನ್ ಎಂಐಎಸ್ ವರದಿಗಳ ಆಧಾರದ ಮೇಲೆ ಬರುವ ದೂರುಗಳನ್ನು ತನಿಖೆ ಮಾಡುವುದು, ಇಲಾಖಾ ವಿಚಾರಣೆ ಮಾಡುವುದನ್ನು ನಿಲ್ಲಿಸಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಸಲು ಒತ್ತಾಯಿಸಲಾಗಿದೆ.

ವಿಜಿ ರಾಮ್ ಜೀ ರದ್ದತಿಗೆ ಆಗ್ರಹ



ಹುಮನಾಬಾದ್ ವಿಜಿ ರಾಮ್‌ಜೀ ಯೋಜನೆ ರದ್ದುಗೊಳಿಸುವುದು ಮತ್ತು ಕಾರ್ಮಿಕರಿಗೆ ಸಮರ್ಪಕ ಉದ್ಯೋಗ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದಿಂದ ತಾ.ಪಂ ಕಚೇರಿ ಪ್ರಾಂಗಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂ.ಕ.ಸಮಾಚಾರ ಹುಮನಾಬಾದ್ : ವಿಜಿ ರಾಮ್ ಜೀ ಯೋಜನೆ ರದ್ದುಗೊಳಿಸುವಂತೆ ಆಗ್ರಹಿಸಿ, ನಗರದ ತಾಲೂಕು ಪಂಚಾಯಿತಿ ಕಚೇರಿ ಪಾಂಗಣದಲ್ಲಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಇಸಾಮುದ್ದಿನ್ ಮೀರಾಸಾಬ್ ಮಾತನಾಡಿ, ಕಾರ್ಮಿಕರಿಗೆ ಉದ್ಯೋಗ ಕೇಳಿದರೇ ಹಾರಿಕೆ ಉತ್ತರ ನೀಡುವ ಅಧಿಕಾರಿಗಳು ಉದ್ಯೋಗ ಖಾತ್ರಿ ನೆಪದಲ್ಲಿ ಮನಮಾನಿ ಮಾಡುತ್ತಿರುವ ಕುರಿತು ನಮ್ಮ ಸಂಘಟನೆಗಳಿಗೆ ಇಂಚಿಂಚೂ ಮಾಹಿತಿ ಇದೆ. ಸಮಸ್ಯೆ ಶೀಘ್ರ ಬಗೆಹರಿಸಿ, ಕಾರ್ಮಿಕರಿಗೆ ಉದ್ಯೋಗ ಕಲ್ಪಿಸದಿದ್ದರೇ ಉಗ್ರ ಹೋರಾಟ ನಡೆಸಲಾಗುವುದು ಆ ನಿಟ್ಟಿನಲ್ಲಿ ಇಂದಿನ ಪ್ರತಿಭಟನೆ ಕೇವಲ ಶಾಂಪಲ್ ಎಂದರು.

ಜಿಲ್ಲಾ ಮುಖ್ಯಸ್ಥೆ ಅಂಬುಬಾಯಿ ಮಾಳಗೆ ಮಾತನಾಡಿ, ಕಚೇರಿಗೆ ಬರುವ ಮೇಟ್‌ಗಳೊಂದಿಗೆ ಪಿಡಿಒಗಳು ಕೇವಲ ಮಾತನಾಡಿ ಅವಮಾನಿಸುತಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರೆದರೇ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಮಾಳಗೆ ಮಾತನಾಡಿ, ಕಾರ್ಮಿಕರ ಜೊತೆಗೆ ಅಸಭ್ಯವಾಗಿ ವರ್ತಿಸಿದರೇ ಅಧಿಕಾರಿಗಳಿಗೆ ಅವರ ಶಾಪ್ ತಟ್ಟುತ್ತದೆ ಈ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕೆಂದು ಸಲಹೆ ನೀಡಿದರು.

ತಾಲೂಕಾಧ್ಯಕ್ಷ ದೇವಾನಂದ ಗಾಯಕವಾಡ ಮಾತನಾಡಿ, ಕೆಲಸ ಕೇಳಲು ಬರುವ ಕಾರ್ಮಿಕರನ್ನು ಕಡೆಗಣಿಸಲಾಗುತ್ತಿದೆ ಇದನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು. ಕಾರ್ಮಿಕರನ್ನು ಮತ್ತು ಮೇಟ್‌ಗಳನ್ನು ಗೌರವದಿಂದ ಕಾಣದಿದ್ದರೇ ನಾವು ಅಗೌರವದಿಂದ ನಡೆದುಕೊಳ್ಳುವುದು ಅನಿವಾರ್ಯ ಆಗುತ್ತದೆ ಎಂದು ಎಚ್ಚರಿಸಿದರು.

ಉಪಾಧ್ಯಕ್ಷ ಸೂರ್ಯಕಾಂತ, ಪ್ರಧಾನ ಕಾರ್ಯದರ್ಶಿ ಸಿದ್ರಾಮ ಡಾಂಗೆ, ಶಶಿಕಾಂತ ಡಾಂಗೆ ಸೇರಿದಂತೆ ಇನ್ನೂ ಅನೇಕರು ತಮ್ಮ ಆಕ್ರೋಶಭರಿತ ನುಡಿಗಳನ್ನು ಹೊರಹಾಕಿದರು. ಬಳಿಕ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದೀಪಿಕಾ ನಾಯ್ಕರ್ ಅವರಿಗೆ ಮನವಿಪತ್ರ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ದೀಪಿಕಾ ನಾಯ್ಕರ್ ಹೊಸ ಯೋಜನೆ ಮಾರ್ಗಸೂಚಿ ಇನ್ನೂ ಬಂದಿಲ್ಲ. ಸದ್ಯ ಫಾರ್ಮ 6ಯಾರು ಕೊಡ್ತಾರೊ ಅವುಗಳನ್ನು ಪರಿಶೀಲಿಸಿ, ಹಿಂದಿನ ಉದ್ಯೋಗ ಖಾತ್ರಿ ಯೋಜನೆ ಅಡಿ ಉದ್ಯೋಗ ನೀಡಲಾಗುವುದು ಎಂದು ಭರವಸೆ ನೀಡಿದರು. ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ಜಗನ್ನಾಥ ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿ ಪಿಡಿಒಗಳು ಹಾಜರಿದ್ದರು.

CMYK

ಎಕ್ಸ್‌ಟ್ರಾ ಕವರ್

ಆರ್‌ಸಿಬಿಯ ಫಿಸಿಯೋ ನಿವೃತ್ತಿ: ಇವಾನ್‌ಗೆ ಕೊಹ್ಲಿ ಬೀಳ್ಕೊಡುಗೆ



ಲಖನೌ: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದೊಂದಿಗೆ 18 ವರ್ಷಗಳ ಸುದೀರ್ಘ ಪಯಣ ಮುಗಿಸಿದ ಫಿಸಿಯೋ ಇವಾನ್ ಸ್ಪೀಚ್ಲಿಗೆ ವಿರಾಟ್ ಕೊಹ್ಲಿ ಭಾವನಾತ್ಮಕ ವಿದಾಯ ಕೋರಿದ್ದಾರೆ. 2008 ರಿಂದ ತಂಡದ ಭಾಗವಾಗಿದ್ದ ಇವಾನ್ ಅವರನ್ನು ಕೊಹ್ಲಿ 'ಒರಿಜಿನಲ್ ಗ್ಯಾಂಗ್‌ಸ್ಟರ್' ಎಂದು ಬಣ್ಣಿಸಿದ್ದಾರೆ. "ತಂಡದಲ್ಲಿ ನಾನು ಅತಿ ಹೆಚ್ಚು ಸಮಯ ಕಳೆದಿದ್ದು ನಿಮ್ಮೊಂದಿಗೆ. ನಿಮ್ಮ ಪ್ರಾಮಾಣಿಕತೆ ಮತ್ತು ಕಾಳಜಿ ಸದಾ ನೆನಪಿನಲ್ಲಿರುತ್ತದೆ" ಎಂದು ಕೊಹ್ಲಿ ಗುಣಗಾನ ಮಾಡಿದರು.

15ರಿಂದ ಆಸ್ಟ್ರೇಲಿಯಾ ವಿರುದ್ಧ ಭಾರತ ಕಿರಿಯರ ಹಾಕಿ ಸರಣಿ

ಭೋಪಾಲ್: ಮುಂಬರುವ ಏಷ್ಯಾ ಕಪ್‌ಗೆ ಸಿದ್ಧತೆ ನಡೆಸುವ ದೃಷ್ಟಿಯಿಂದ ಭಾರತದ 18 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಹಾಕಿ ತಂಡಗಳು ಆಸ್ಟ್ರೇಲಿಯಾ ವಿರುದ್ಧ ನಾಲ್ಕು ಪಂದ್ಯಗಳ ಸರಣಿಯನ್ನು ಆಡಲಿವೆ. ಈ ರೋಚಕ ಪಂದ್ಯಗಳು ಮೇ 15 ರಿಂದ 20 ರವರೆಗೆ ಭೋಪಾಲ್‌ನ ಉದ್ಧವ್ ದಾಸ್ ಮೆಹ್ತಾ ಕ್ರೀಡಾಂಗಣದಲ್ಲಿ ನಡೆಯಲಿವೆ.

277 ಐಪಿಎಲ್ ಪಂದ್ಯ ಆಡಿ ದಾಖಲೆ ಮುರಿದ ರೋಹಿತ್

ಮುಂಬೈ: ಐಪಿಎಲ್ ಇತಿಹಾಸದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ.

ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ರೋಹಿತ್, ವಿರಾಟ್ ಕೊಹ್ಲಿ (276 ಪಂದ್ಯ) ಅವರ ದಾಖಲೆಯನ್ನು ಹಿಂದಿಕ್ಕಿ ಅತಿ ಹೆಚ್ಚು ಪಂದ್ಯಗಳನ್ನಾಡಿದ ಎರಡನೇ ಆಟಗಾರ ಎನಿಸಿಕೊಂಡರು. ರೋಹಿತ್ ಶರ್ಮಾ ಸದ್ಯ 277 ಪಂದ್ಯಗಳನ್ನಾಡಿದ್ದು, ಎಂ.ಎಸ್. ಧೋನಿ ಅವರ ಸಾರ್ವಕಾಲಿಕ ದಾಖಲೆಯತ್ತ ಕಣ್ಣಿಟ್ಟಿದ್ದಾರೆ.

ಸಂಜು ಆಟಕ್ಕೆ ಡೆಲ್ಲಿ ನಜ್ಜುಗುಜ್ಜು

ಚೆನ್ನೈ 8 ವಿಕೆಟ್‌ಗಳ ಜಯ | ಕ್ಯಾಪಿಟಲ್ಸ್‌ಗೆ ಹೀನಾಯ ಸೋಲು

ನವದೆಹಲಿ: ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ 2026ರ 48ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಹೀನಾಯವಾಗಿ ಸೋತಿದೆ. ಕೇವಲ 156 ರನ್‌ಗಳನ್ನು ಗುರಿಯಾಗಿ ಪಡೆದ ಸಿಎಸ್‌ಕೆ 17.3 ಓವರ್‌ಗಳಲ್ಲೇ 8 ವಿಕೆಟ್ ಉಳಿಸಿಕೊಂಡು ಗೆಲುವು ಸಾಧಿಸಿತು. ಸಂಜು ಸ್ಯಾಮ್ಸನ್‌ನ 87(52) ರನ್‌ಗಳ ಕಾಣಿಕೆ ಡೆಲ್ಲಿ ಸೋಲಿಗೆ ಕಾರಣವಾಯಿತು.

ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಆರಂಭದಲ್ಲೇ ಆಘಾತ ಎದುರಾಯಿತು. ಸ್ಟಾರ್ ಬ್ಯಾಟರ್ ಕೆ.ಎಲ್. ರಾಹುಲ್ (12) ಮತ್ತು ಪಥುಮ್ ನಿಸ್ಸಾಂಕ (19) ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾದರು. ನಾಯಕ ಅಕ್ಷರ್ ಪಟೇಲ್ ಕೇವಲ 2 ರನ್ ಗಳಿಸಿ ಔಟಾಗುವ ಮೂಲಕ ತಂಡವನ್ನು ಸಂಕಷ್ಟಕ್ಕೆ ತಳ್ಳಿದರು. ನಿರಂತರವಾಗಿ ವಿಕೆಟ್ ಕಳೆದುಕೊಂಡ ಡೆಲ್ಲಿ ಒಂದು ಹಂತದಲ್ಲಿ 69 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ತತ್ತರಿಸಿತ್ತು.

ತಂಡದ ಬ್ಯಾಟಿಂಗ್ ಕುಸಿತದ ವೇಳೆ ಟ್ರಿಸ್ಟಾನ್ ಸ್ಟಬ್ಸ್ ಜವಾಬ್ದಾರಿಯುತ ಆಟವಾಡಿದರು. ಅವರು 31 ಎಸೆತಗಳಲ್ಲಿ 1 ಬೌಂಡರಿ ಹಾಗೂ 2 ಸಿಕ್ಸರ್‌ಗಳ ನೆರವಿನಿಂದ 38 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಇವರಿಗೆ ಉತ್ತಮ ಸಾಥ್

ನೀಡಿದ ಇಂಪ್ಯಾಕ್ಟ್ ಪ್ಲೇಯರ್ ಸಮೀರ್ ರಿಜ್ವಿ, ಅಬ್ಬರದ ಬ್ಯಾಟಿಂಗ್ ನಡೆಸಿ 24 ಎಸೆತಗಳಲ್ಲಿ 4 ಸಿಕ್ಸರ್‌ಗಳ ಸಹಿತ 40 ರನ್ ಚಚ್ಚಿದರು. ಈ ಇಬ್ಬರ ಹೋರಾಟದಿಂದಾಗಿ ಡೆಲ್ಲಿ ತಂಡವು 150ರ ಗಡಿ ದಾಟಲು ಸಾಧ್ಯವಾಯಿತು.

ಚೆನ್ನೈ ಬೌಲರ್‌ಗಳ ಶಿಸ್ತಿನ ದಾಳಿ: ಚೆನ್ನೈ ಸೂಪರ್ ಕಿಂಗ್ಸ್ ಪರ ಬೌಲರ್‌ಗಳು ಅತ್ಯಂತ ಶಿಸ್ತಿನ ದಾಳಿ ಸಂಘಟಿಸಿದರು. ನೂರ್ ಅಹ್ಮದ್ 22 ರನ್‌ಗಳಿಗೆ 2 ಪ್ರಮುಖ ವಿಕೆಟ್ ಪಡೆದು ಮಿಂಚಿದರು.

ಜೇಮಿ ಓವರ್‌ಟನ್, ಮುಖೇಶ್ ಚೌಧರಿ ಮತ್ತು ಎಕೀಲ್ ಹೊಸೈನ್ ತಲಾ ಒಂದು ವಿಕೆಟ್ ಪಡೆಯುವ ಮೂಲಕ ಡೆಲ್ಲಿ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು. ಅಂತಿಮವಾಗಿ ಡೆಲ್ಲಿ 20 ಓವರ್‌ಗಳಲ್ಲಿ 155/7 ರನ್‌ಗಳಿಗೆ ತನ್ನ ಇನಿಂಗ್ಸ್ ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ಡೆಲ್ಲಿ ಕ್ಯಾಪಿಟಲ್ಸ್ 155/7. ಸಮೀರ್ ರಿಜ್ವಿ 40, ಟ್ರಿಸ್ಟಾನ್ ಸ್ಟಬ್ಸ್ 38. ಚೆನ್ನೈಸೂಪರ್ ಕಿಂಗ್ಸ್ 17.3 ಓವರ್‌ಗಳಲ್ಲಿ 2 ವಿಕೆಟ್‌ಗೆ 159 ರನ್.

ಇಂದಿನ ಪಂದ್ಯ	
ಹೈದರಾಬಾದ್ – ಪಂಜಾಬ್	ರಾತ್ರಿ. 7.30ಕ್ಕೆ

ಐಪಿಎಲ್ 2026

ನಂ	ತಂಡ	ಪಂದ್ಯ	ಜಯ	ಸೋಲು	ಅಂಕ
01	ಪಂಜಾಬ್	09	06	02	13
02	ಆರ್‌ಸಿಬಿ	09	06	03	12
03	ಹೈದ್ರಾಬಾದ್	10	06	04	12
04	ರಾಜಸ್ಥಾನ	10	06	04	12
05	ಗುಜರಾತ್	10	06	04	12
06	ಚೆನ್ನೈ	10	05	05	10
07	ಡೆಲ್ಲಿ	10	04	06	08
08	ಕೆಕೆಆರ್	09	03	05	07
09	ಮುಂಬೈ	10	03	07	06
10	ಲಖನೌ	09	02	07	04

ಬೆಂಗಳೂರಿನಲ್ಲಿ ಸತತ 2 ಎಟಿಪಿ ಚಾಲೆಂಜರ್ ಟೆನಿಸ್ ಪಂದ್ಯಾವಳಿ

f. ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು "ಇನ್‌ಕ್ರಿಮೆಂಟ್ ಕಾಂಬೊ" (ಕನಿಷ್ಠ 1 ಆಯ್ಕೆಮಾಡಿ) ಕಾಲಂ ಅಡಿಯಲ್ಲಿ ಉಲ್ಲೇಖಿಸಲಾದ ಕ್ರ ರೂ.**25,000/-** (ಹೆಚ್ಚಳ ಮೊತ್ತ/ಬೆಲೆ) ದ ಗುಣಕಗಳಲ್ಲಿ ಸುಧಾರಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ಸಮಯದಲ್ಲಿ (ಮೀಸಲು ಬೆಲೆಗಿಂತ ಹೆಚ್ಚಿನ) ಅತ್ಯಧಿಕ ಬಿಡ್ ಸಲ್ಲಿಸಿದ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ನಿರ್ದಿಷ್ಟ ಆಸ್ತಿಯ ಮೇಲೆ ಇಎಂಡಿ ಸಲ್ಲಿಸಿದ ಒಬ್ಬ ಬಿಡ್ಡರ್ ಮಾತ್ರ ಇದ್ದರೂ ಸಹ, ಯಶಸ್ವಿ ಎಚ್–1 ಬಿಡ್ಡರ್ ಆಗಲು ಹೇಳಲಾದ ಬಿಡ್ಡರ್ ಮೀಸಲು ಬೆಲೆಗಿಂತ ಕನಿಷ್ಠ ಒಂದು ಇಂಕ್ರಿಮೆಂಟ್ ಅನ್ನು ಬಿಡ್ ಮಾಡಬೇಕು. ಇ–ಹರಾಜು ಪ್ರಕ್ರಿಯೆಯ ಮುಕ್ತಾಯದ ಸಮಯದಲ್ಲಿ ಅತ್ಯಧಿಕ ಬಿಡ್ ಸಲ್ಲಿಸಿದ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ ಮತ್ತು ಆ ಕುರಿತು ಸಂವಹನವನ್ನು ನೀಡಲಾಗುತ್ತದೆ, ಅದು ಅಧಿಕೃತ ಅಧಿಕಾರಿ/ಸೆಕ್ಯೂರ್ಡ್ ಕ್ರೆಡಿಟ್‌ದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.

g. ಪ್ರತಿ ವಿಸ್ತರಣೆಯ ಸಮಯದಲ್ಲಿ ಹೆಚ್ಚುತ್ತಿರುವ ಮೊತ್ತ/ಬೆಲೆ ರೂ.**25,000/-** (ಹೆಚ್ಚುತ್ತಿರುವ ಬೆಲೆ) ಆಗಿರುತ್ತದೆ ಮತ್ತು ಕೊನೆಯ ನಿಮಿಷಗಳಲ್ಲಿ ಮಾನ್ಯ ಬಿಡ್ ಸ್ವೀಕರಿಸಿದಾಗ ಸಮಯವನ್ನು 5 (ನಿಮಿಷಗಳಿಗೆ) ವಿಸ್ತರಿಸಲಾಗುತ್ತದೆ.

h. ಯಶಸ್ವಿ ಬಿಡ್ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಆದರೆ ಸುರಕ್ಷಿತ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

i. ಯಶಸ್ವಿ ಬಿಡ್ದಾರರು ಮಾರಾಟ ಬೆಲೆಯ 25% (ಈಗಾಗಲೇ ಪಾವತಿಸಿದ ಇಎಂಡಿ ಸೇರಿದಂತೆ) ವನ್ನು ಅದೇ ದಿನ ತಕ್ಷಣವೇ ಮತ್ತು ಮುಂದಿನ ಕೆಲಸದ ದಿನದ ನಂತರ ಠೇವಣಿ ಇಡಬೇಕು ಮತ್ತು ಉಳಿದ 75% ಮೊತ್ತವನ್ನು ಸುರಕ್ಷಿತ ಸಾಲಗಾರರು ಮಾರಾಟವನ್ನು ದೃಢೀಕರಿಸಿದ ದಿನಾಂಕದಿಂದ 15 ದಿನಗಳ ಒಳಗೆ ಠೇವಣಿ ಇಡಬೇಕು. ಯಶಸ್ವಿ ಬಿಡ್ದಾರರು ಮೇಲೆ ತಿಳಿಸಿದ ಅವಧಿಯೊಳಗೆ ಮಾರಾಟ ಬೆಲೆಯನ್ನು ಪಾವತಿಸಲು ವಿಫಲವಾದರೆ, ಅವರು ಮಾಡಿದ ಠೇವಣಿಯನ್ನು ಅಧಿಕೃತ ಅಧಿಕಾರಿ ಯಾವುದೇ ಸೂಚನೆ ಇಲ್ಲದೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಮತ್ತು ಆಸ್ತಿಯನ್ನು ತಕ್ಷಣವೇ ಮತ್ತೆ ಮಾರಾಟಕ್ಕೆ ಇಡಲಾಗುತ್ತದೆ.

j. ಮೇಲೆ ತಿಳಿಸಿದ ಬಾಕಿ ಮಾರಾಟ ಬೆಲೆಯನ್ನು (ಇಎಂಡಿ ಮೊತ್ತವನ್ನು ಹೊರತುಪಡಿಸಿ) ಯಶಸ್ವಿ ಬಿಡ್ದಾರರು ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಕೆನರಾ ಬ್ಯಾಂಕ್, ವಿಶೇಷ ARM ಶಾಖೆ ವಿಜಯಪುರ (7910), ಐಎಫ್‌ಎಸ್‌ಸಿ ಕೋಡ್ CNRB0007910 ನ ಖಾತೆ ಸಂಖ್ಯೆ 209272434 ಗೆ ಪಾವತಿಸಬೇಕು.

k. ಅನ್ವಯವಾಗುವ ಸಾಗಣೆ ಶುಲ್ಕ, ಮುದ್ರಾಂಕ ಶುಲ್ಕ ಮತ್ತು ನೋಂದಣಿ, ಜಿಎಸ್‌ಟಿ ಇತ್ಯಾದಿಗಳನ್ನು ಯಶಸ್ವಿ ಬಿಡ್ದಾರರು ಮಾತ್ರ ಭರಿಸುತ್ತಾರೆ.

l. ರೂ. 50.00 ಲಕ್ಷ (ಐವತ್ತು ಲಕ್ಷ ರೂಪಾಯಿ) ಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕೆ, ಮಾರಾಟ ಮೊತ್ತದ 1% ದರದಲ್ಲಿ ಟಿಡಿಎಸ್ ಪಾವತಿಸಬೇಕಾಗುತ್ತದೆ, ಇದನ್ನು ಯಶಸ್ವಿ ಖರೀದಿದಾರರು ಪ್ರತ್ಯೇಕವಾಗಿ ಪಾವತಿಸಬೇಕು. ಜಿಎಸ್‌ಟಿ ಅನ್ವಯವಾಗುವಲ್ಲೆಲ್ಲಾ, ಸರ್ಕಾರಿ ಮಾರ್ಗಸೂಚಿಗಳ ಪ್ರಕಾರ ಯಶಸ್ವಿ ಖರೀದಿದಾರರು ಅದನ್ನು ಪಾವತಿಸಬೇಕು.

m. ಅಧಿಕೃತ ಅಧಿಕಾರಿಯ ಅತ್ಯುತ್ತಮ ಜ್ಞಾನ ಮತ್ತು ಮಾಹಿತಿಯ ಪ್ರಕಾರ, ಭದ್ರತಾ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಆಸ್ತಿಯ ಮೇಲೆ ಯಾವುದೇ ಹೊರೆ ಇರುವುದಿಲ್ಲ. ಆದಾಗ್ಯೂ, ಉದ್ದೇಶಿತ ಬಿಡ್ಡರ್‌ಗಳು ತಮ್ಮ ಬಿಡ್ ಅನ್ನು ಸಲ್ಲಿಸುವ ಮೊದಲು, ಹರಾಜಿನಲ್ಲಿ ಇಡಲಾದ ಆಸ್ತಿಯ ಶೀರ್ಷಿಕೆ ಮತ್ತು ಆಸ್ತಿಯ ಮೇಲೆ ಪರಿಣಾಮ ಬೀರುವ ಹಕ್ಕುಗಳು / ಹಕ್ಕುಗಳು / ಬಾಕಿಗಳ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆಗಳನ್ನು / ಶ್ರದ್ಧೆಯನ್ನು ಮಾಡಿಕೊಳ್ಳಬೇಕು. ಇ–ಹರಾಜು ಜಾಹೀರಾತು ಬ್ಯಾಂಕಿನ ಯಾವುದೇ ಬದ್ಧತೆ ಅಥವಾ ಪ್ರಾತಿನಿಧ್ಯವನ್ನು ರೂಪಿಸುವುದಿಲ್ಲ ಮತ್ತು ರೂಪಿಸುತ್ತದೆ ಎಂದು ಪರಿಗಣಿಸಲಾಗುವುದಿಲ್ಲ. ಬ್ಯಾಂಕಿಗೆ ತಿಳಿದಿರುವ ಅಥವಾ ತಿಳಿದಿಲ್ಲದ ಎಲ್ಲಾ ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಹೊರೆಗಳೊಂದಿಗೆ ಆಸ್ತಿಯನ್ನು ಮಾರಾಟ ಮಾಡಲಾಗುತ್ತಿದೆ. ಯಾವುದೇ ಮೂರನೇ ವ್ಯಕ್ತಿಯ ಹಕ್ಕುಗಳು / ಹಕ್ಕುಗಳು / ಬಾಕಿಗಳಿಗೆ ಅಧಿಕೃತ ಅಧಿಕಾರಿ / ಸುರಕ್ಷಿತ ಸಾಲಗಾರರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

n. ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಸೂಕ್ತ ಶ್ರದ್ಧೆ ಮತ್ತು ಭೌತಿಕ ಪರಿಶೀಲನೆ ಮತ್ತು ಆಸ್ತಿ/ಅವುಗಳ ನಿರ್ದಿಷ್ಟತೆಯ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳುವುದು ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

o. ಯಾವುದೇ ಕಾರಣ ನೀಡದೆ ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದುಗೊಳಿಸುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿದ್ದಾರೆ.

p. ಹೆಚ್ಚಿನ ವಿವರಗಳಿಗಾಗಿ ಶ್ರೀ ಕೆ ವಿ ಎನ್ ಶ್ರೀ ರಾಮಚಂದ್ರ ಮೂರ್ತಿ ಕೆನರಾ ಬ್ಯಾಂಕ್, ವಿಶೇಷ ARM ಶಾಖೆ ವಿಜಯಪುರ (7910)ಮೊಬೈಲ್ ಸಂ.91636697 5034, email: cb7910@canarabank.com ಅವರನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸೇವಾ ಪೂರೈಕೆದಾರ ಬ್ಯಾಂಕ್ನೆಟ್ (ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈ. ಲಿಮಿಟೆಡ್), (ಸಂಪರ್ಕ ಸಂಖ್ಯೆ 8291220220, ಇಮೇಲ್: support.BAANKNET@psballiance.com./ support.BAANKNET@procure247.com).

ದಿನಾಂಕ:05.05.2026, ಸ್ಥಳ:ವಿಜಯಪುರ — ಸಹಿ/– ಅಧಿಕೃತ ಅಧಿಕಾರಿಗಳು, ಕೆನರಾ ಬ್ಯಾಂಕ್

केनरा बैंक Canara Bank — भारत सरकार का उपक्रम — A Government of India Undertaking — ಸಿಂಡಿಕೇಟ್ सिंडिकेट Syndicate

ಕೆನರಾ ಬ್ಯಾಂಕ್

ವಿಶೇಷ ಆಸ್ತಿ ಮರುಪಡೆಯುವಿಕೆ ನಿರ್ವಹಣೆ (ಎ.ಆರ್.ಎಂ) ಶಾಖೆ –ವಿಜಯಪುರ
ಸಂಪರ್ಕ ಸಂಖ್ಯೆ:916366975034

ಇ–ಹರಾಜು ದಿ.25.05.2026

ಸರ್ಫೆಸಿ ಕಾಯ್ದೆಯ 2002ರ ಅಡಿಯಲ್ಲಿ ಅಡಮಾನ ಮಾಡಿರುವ ಆಸ್ತಿಯ ಮಾರಾಟ ಕೆಳಸಹಿದಾರರು, ಕೆನರಾ ಬ್ಯಾಂಕ್ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಪ್ರಕರಣ 8 (6)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಗೆ ಸೂಚಿಸಿರುವ ಅನುಸೂಚಿತ ಆಸ್ತಿಯನ್ನು ಕೆನರಾ ಬ್ಯಾಂಕ್ ವಿಶೇಷ ಆಸ್ತಿ ಮರುಪಡೆಯುವಿಕೆ ನಿರ್ವಹಣೆ ಶಾಖೆ–ವಿಜಯಪುರ **ಸ್ವಾಧೀನಕ್ಕೆ** ತೆಗೆದುಕೊಂಡು, ಕೆಳಗೆ ಉಲ್ಲೇಖಿಸಲಾದ ಸಾಲಗಾರರು, ಇವರಿಂದ ಮುಂದಿನ ಬಡ್ಡಿ, ಖರ್ಚು, ವೆಚ್ಚ ಇನ್ನಿತರೆ ವಸೂಲಿ ಮಾಡಲು "ಎಲ್ಲಿ ಇದೆಯೋ ಅಲ್ಲಿ", "ಎಲ್ಲಿ ಹೇಗಿದೆಯೊ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಆಧಾರದ ಮೇಲೆ ಅಡಮಾನವಿಟ್ಟ ಆಸ್ತಿಯನ್ನು ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಕ್ರ ಸಂ.	ಸಾಲಗಾರರು/ ಜಾಮೀನುದಾರರ: ಹೆಸರು	ಸ್ಥಿರಾಸ್ತಿಯ ವಿವರಣೆ	ಬರಬೇಕಾದ ಬಾಕಿ ಒಟ್ಟು ಮೊತ್ತ/ +ಮುಂದಿನ ಬಡ್ಡಿ, ಖರ್ಚು, ವೆಚ್ಚ ಕಾಯ್ದಿರಿಸಿದ ಮೊತ್ತ/ಇ.ಎಂ.ಡಿ ಮೊತ್ತ
		ಆದಿತ್ಯನಗರ ಮಾಲ್ಖೇಡ್ ಶಾಖೆ (2718)	
1	1.)ಶ್ರೀ. ಮಹಮ್ಮದ್ ಅಲಿ ಸಾಬ ತಂದೆ ಮಹಮ್ಮದ್ ಸಾಬ, (ಸಾಲಗಾರರು) ವಿಳಾಸ: ಮನೆ ನಂ. 4/1/5, ಕೆ.ಇ.ಬಿ ಕಾಲೋನಿ, ಸೇಡಂ, ಕಲಬುರಗಿ, ಕರ್ನಾಟಕ–585222 2)ಶ್ರೀ. ಮಹಮ್ಮದ್ ಅಯ್ಯುಬ್ ಪಾಷಾ (ಸಹ–ಸಾಲಗಾರರು) ವಿಳಾಸ: ಮನೆ ನಂ. 378, ಮುಖ್ಯ ರಸ್ತೆ, ಕೆ.ಸಿ.ಬಿ ಕಾಲೋನಿ, ಸೇಡಂ, ಕಲಬುರಗಿ, ಕರ್ನಾಟಕ–585222 3)ಶ್ರೀ. ಮಹಮ್ಮದ್ ಚಾಂದ್ ಪಾಷಾ ತಂದೆ ಮಹಮ್ಮದ್ ಅಲಿ (ಜಾಮೀನುದಾರರು) ವಿಳಾಸ: ಮನೆ ನಂ. 4 1 5, ಕೆ.ಇ.ಬಿ ಕಾಲೋನಿ, ಸೇಡಂ, ಕಲಬುರಗಿ, ಕರ್ನಾಟಕ–585222	ಆಸ್ತಿ ಸರ್ವೆ ನಂ. 99/1ಎ2 ರಲ್ಲಿನ ನಿವೇಶನ ಸಂಖ್ಯೆ 48 ಮತ್ತು 49 ರಲ್ಲಿ ನಿರ್ಮಿಸಲಾದ, ಟಿ.ಎಂ.ಸಿ. ನಂ. 9–1–48ಎ ರ ವಾಸದ ಕಟ್ಟಡದ ಎಲ್ಲಾ ಭಾಗಗಳು, ಅಳತೆ 243 ಚದರ ಮೀಟರ್, ಗುಲ್ಬರ್ಗಾ ರಸ್ತೆ, ಸೇಡಂ ತಾಲೂಕು, ಕಲಬುರಗಿ ಜಿಲ್ಲೆ, ಕರ್ನಾಟಕ. ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 99/1ಬಿ, ಪಶ್ಚಿಮಕ್ಕೆ: 9.00 ಮೀಟರ್ ಅಗಲದ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ. 47, ದಕ್ಷಿಣಕ್ಕೆ: 9.00 ಮೀಟರ್ ಅಗಲದ ರಸ್ತೆ. CERSAI ID-400036248266 400058778802	**ಒಟ್ಟು ಬಾಕಿ ಮೊತ್ತ: ರೂ.60,31,365.95 ದಿನಾಂಕ:**05.05.2026 **ರಂತೆ ಕಾಯ್ದಿರಿಸಿದ ಮೊತ್ತ: ರೂ. 47,76,000/- ಇ.ಎಂ.ಡಿ. ಮೊತ್ತ: ರೂ.4,76,000/-**

ಇ–ಹರಾಜು ದಿನಾಂಕ ಮತ್ತು ಸಮಯ25/05/2026, 11.30 a.m. ರಿಂದ 1.30 p.m. (ಮಾರಾಟ ಮುಕ್ತಾಯದವರೆಗೆ 5 ನಿಮಿಷಗಳ ಅವಧಿಯ ಅನಿಯಮಿತ ವಿಸ್ತರಣೆಯೊಂದಿಗೆ)

a. ಆಸ್ತಿಯನ್ನು "ಇರುವಂತೆಯೇ" ಸ್ಥಿತಿಯಲ್ಲಿ ಮಾರಾಟ ಮಾಡಲಾಗುತ್ತದೆ, ಯಾವುದಾದರೂ ಋಣಭಾರಗಳಿದ್ದರೆ ಸೇರಿದಂತೆ. (ಬ್ಯಾಂಕಿಗೆ ತಿಳಿದಿರುವಂತೆ ಯಾವುದೇ ಋಣಭಾರಗಳಿಲ್ಲ. ಋಣಭಾರದ ವಿವರಗಳಿಗಾಗಿ, ಕೆಳಗಿನ 9(e) ರಲ್ಲಿ ಉಲ್ಲೇಖಿಸಲಾದ ಅರ್ನೆಸ್ಟ್ ಮನಿ ಠೇವಣಿ (EMD) ಠೇವಣಿ ಮಾಡುವ ಮೊದಲು ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಿ).

b. ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ.

c. 11.05.2026 ರಿಂದ 22.05.2026ರ ನಡುವಿನ 10.00 A.M ರಿಂದ 04.00 P.M ಸಮಯದೊಳಗೆ ಬ್ಯಾಂಕಿನ ಕೆಲಸದ ದಿನಗಳಲ್ಲಿ ಆಸ್ತಿಯನ್ನು ಪರಿಶೀಲಿಸಬಹುದು.

d. ಉದ್ದೇಶಿತ ಬಿಡ್ದಾರರು https://baanknet.com/ ವೆಬ್‌ಸೈಟ್‌ಗೆ ಭೇಟಿ ನೀಡಿ ಇ–ಹರಾಜು ವೇದಿಕೆಯಲ್ಲಿ ನೋಂದಾಯಿಸಿಕೊಳ್ಳುವಂತೆ ಮತ್ತು ಪ್ಯಾನ್ ಕಾರ್ಡ್ ಮತ್ತು ಆಧಾರ್‌ನಂತಹ ಮಾನ್ಯ ಕೆವೈಸಿ ದಾಖಲೆಗಳನ್ನು ಇತ್ತೀಚಿನ ಮೊಬೈಲ್ ಸಂಖ್ಯೆಯೊಂದಿಗೆ ಲಿಂಕ್ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವಂತೆ ಮತ್ತು ಡಿಜಿ ಲಾಕರ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಸೂಚಿಸಲಾಗಿದೆ. ಮೇಲಿನ ಇ–ಹರಾಜಿನಲ್ಲಿ Baanknet.com ಪೋರ್ಟಲ್ (ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈ. ಲಿಮಿಟೆಡ್) ನಿಂದ ಬಿಡ್ಡಿಂಗ್‌ಗಾಗಿ, ನೀವು ಬ್ಯಾಂಕ್‌ನೆಟ್‌ನ ಸಹಾಯವಾಣಿಯನ್ನು ಸಂಪರ್ಕಿಸಬಹುದು (ಸಂಪರ್ಕ ಸಂ.8291220220), ಇಮೇಲ್: support.BAANKNET@psballiance.com.

e. ಉದ್ದೇಶಿತ ಬಿಡ್ದಾರರು **22.05.2026**ರಂದು ಅಥವಾ ಅದಕ್ಕೂ ಮೊದಲು **5.00** PM ಕ್ಕೆ DD/RTGS/NEFT ಮೂಲಕ ಕೆನರಾ ಬ್ಯಾಂಕ್‌ನ ಅಧಿಕೃತ ಅಧಿಕಾರಿ ಶಾಖೆಗಳ ಮೂಲಕ ಮೀಸಲು ಬೆಲೆಯ 10% ರೂಪಾಯಿಗಳ ಅರ್ನೆಸ್ಟ್ ಮನಿ ಠೇವಣಿ (EMD)ಠೇವಣಿ ಇಡಬೇಕು. ಯಶಸ್ವಿ ಬಿಡ್ಡರ್ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಆದರೆ ಸುರಕ್ಷಿತ ಸಾಲದಾತರು ದೃಢೀಕರಿಸಿದರೆ ಮಾತ್ರ.

f. ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು "ಇನ್‌ಕ್ರಿಮೆಂಟ್ ಕಾಂಬೊ" (ಕನಿಷ್ಠ 1 ಆಯ್ಕೆಮಾಡಿ) ಕಾಲಂ ಅಡಿಯಲ್ಲಿ ಉಲ್ಲೇಖಿಸಲಾದ ಕ್ರ ರೂ.**50000/-** (ಹೆಚ್ಚಳ ಮೊತ್ತ/ಬೆಲೆ) ದ ಗುಣಕಗಳಲ್ಲಿ ಸುಧಾರಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ಸಮಯದಲ್ಲಿ (ಮೀಸಲು ಬೆಲೆಗಿಂತ ಹೆಚ್ಚಿನ) ಅತ್ಯಧಿಕ ಬಿಡ್ ಸಲ್ಲಿಸಿದ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ನಿರ್ದಿಷ್ಟ ಆಸ್ತಿಯ ಮೇಲೆ ಇಎಂಡಿ ಸಲ್ಲಿಸಿದ ಒಬ್ಬ ಬಿಡ್ಡರ್ ಮಾತ್ರ ಇದ್ದರೂ ಸಹ, ಯಶಸ್ವಿ ಎಚ್–1 ಬಿಡ್ಡರ್ ಆಗಲು ಹೇಳಲಾದ ಬಿಡ್ಡರ್ ಮೀಸಲು ಬೆಲೆಗಿಂತ ಕನಿಷ್ಠ ಒಂದು ಇಂಕ್ರಿಮೆಂಟ್ ಅನ್ನು ಬಿಡ್ ಮಾಡಬೇಕು. ಇ–ಹರಾಜು ಪ್ರಕ್ರಿಯೆಯ ಮುಕ್ತಾಯದ ಸಮಯದಲ್ಲಿ ಅತ್ಯಧಿಕ ಬಿಡ್ ಸಲ್ಲಿಸಿದ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ ಮತ್ತು ಆ ಕುರಿತು ಸಂವಹನವನ್ನು ನೀಡಲಾಗುತ್ತದೆ, ಅದು ಅಧಿಕೃತ ಅಧಿಕಾರಿ/ಸೆಕ್ಯೂರ್ಡ್ ಕ್ರೆಡಿಟ್‌ದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.

g. ಪ್ರತಿ ವಿಸ್ತರಣೆಯ ಸಮಯದಲ್ಲಿ ಹೆಚ್ಚುತ್ತಿರುವ ಮೊತ್ತ/ಬೆಲೆ ರೂ.**50000/-** (ಹೆಚ್ಚುತ್ತಿರುವ ಬೆಲೆ) ಆಗಿರುತ್ತದೆ ಮತ್ತು ಕೊನೆಯ ನಿಮಿಷಗಳಲ್ಲಿ ಮಾನ್ಯ ಬಿಡ್ ಸ್ವೀಕರಿಸಿದಾಗ ಸಮಯವನ್ನು 5 (ನಿಮಿಷಗಳಿಗೆ) ವಿಸ್ತರಿಸಲಾಗುತ್ತದೆ.

h. ಯಶಸ್ವಿ ಬಿಡ್ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಆದರೆ ಸುರಕ್ಷಿತ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

i. ಯಶಸ್ವಿ ಬಿಡ್ದಾರರು ಮಾರಾಟ ಬೆಲೆಯ 25% (ಈಗಾಗಲೇ ಪಾವತಿಸಿದ ಇಎಂಡಿ ಸೇರಿದಂತೆ) ವನ್ನು ಅದೇ ದಿನ ತಕ್ಷಣವೇ ಮತ್ತು ಮುಂದಿನ ಕೆಲಸದ ದಿನದ ನಂತರ ಠೇವಣಿ ಇಡಬೇಕು ಮತ್ತು ಉಳಿದ 75% ಮೊತ್ತವನ್ನು ಸುರಕ್ಷಿತ ಸಾಲಗಾರರು ಮಾರಾಟವನ್ನು ದೃಢೀಕರಿಸಿದ ದಿನಾಂಕದಿಂದ 15 ದಿನಗಳ ಒಳಗೆ ಠೇವಣಿ ಇಡಬೇಕು. ಯಶಸ್ವಿ ಬಿಡ್ದಾರರು ಮೇಲೆ ತಿಳಿಸಿದ ಅವಧಿಯೊಳಗೆ ಮಾರಾಟ ಬೆಲೆಯನ್ನು ಪಾವತಿಸಲು ವಿಫಲವಾದರೆ, ಅವರು ಮಾಡಿದ ಠೇವಣಿಯನ್ನು ಅಧಿಕೃತ ಅಧಿಕಾರಿ ಯಾವುದೇ ಸೂಚನೆ ಇಲ್ಲದೆ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಮತ್ತು ಆಸ್ತಿಯನ್ನು ತಕ್ಷಣವೇ ಮತ್ತೆ ಮಾರಾಟಕ್ಕೆ ಇಡಲಾಗುತ್ತದೆ.

j. ಮೇಲೆ ತಿಳಿಸಿದ ಬಾಕಿ ಮಾರಾಟ ಬೆಲೆಯನ್ನು (ಇಎಂಡಿ ಮೊತ್ತವನ್ನು ಹೊರತುಪಡಿಸಿ) ಯಶಸ್ವಿ ಬಿಡ್ದಾರರು ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಕೆನರಾ ಬ್ಯಾಂಕ್, ವಿಶೇಷ ARM ಶಾಖೆ ವಿಜಯಪುರ (7910), ಐಎಫ್‌ಎಸ್‌ಸಿ ಕೋಡ್ CNRB0007910 ನ ಖಾತೆ ಸಂಖ್ಯೆ 209272434 ಗೆ ಪಾವತಿಸಬೇಕು.

k. ಅನ್ವಯವಾಗುವ ಸಾಗಣೆ ಶುಲ್ಕ, ಮುದ್ರಾಂಕ ಶುಲ್ಕ ಮತ್ತು ನೋಂದಣಿ, ಜಿಎಸ್‌ಟಿ ಇತ್ಯಾದಿಗಳನ್ನು ಯಶಸ್ವಿ ಬಿಡ್ದಾರರು ಮಾತ್ರ ಭರಿಸುತ್ತಾರೆ.

l. ರೂ. 50.00 ಲಕ್ಷ (ಐವತ್ತು ಲಕ್ಷ ರೂಪಾಯಿ) ಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕೆ, ಮಾರಾಟ ಮೊತ್ತದ 1% ದರದಲ್ಲಿ ಟಿಡಿಎಸ್ ಪಾವತಿಸಬೇಕಾಗುತ್ತದೆ, ಇದನ್ನು ಯಶಸ್ವಿ ಖರೀದಿದಾರರು ಪ್ರತ್ಯೇಕವಾಗಿ ಪಾವತಿಸಬೇಕು. ಜಿಎಸ್‌ಟಿ ಅನ್ವಯವಾಗುವಲ್ಲೆಲ್ಲಾ, ಸರ್ಕಾರಿ ಮಾರ್ಗಸೂಚಿಗಳ ಪ್ರಕಾರ ಯಶಸ್ವಿ ಖರೀದಿದಾರರು ಅದನ್ನು ಪಾವತಿಸಬೇಕು.

m. ಅಧಿಕೃತ ಅಧಿಕಾರಿಯ ಅತ್ಯುತ್ತಮ ಜ್ಞಾನ ಮತ್ತು ಮಾಹಿತಿಯ ಪ್ರಕಾರ, ಭದ್ರತಾ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಆಸ್ತಿಯ ಮೇಲೆ ಯಾವುದೇ ಹೊರೆ ಇರುವುದಿಲ್ಲ. ಆದಾಗ್ಯೂ, ಉದ್ದೇಶಿತ ಬಿಡ್ಡರ್‌ಗಳು ತಮ್ಮ ಬಿಡ್ ಅನ್ನು ಸಲ್ಲಿಸುವ ಮೊದಲು, ಹರಾಜಿನಲ್ಲಿ ಇಡಲಾದ ಆಸ್ತಿಯ ಶೀರ್ಷಿಕೆ ಮತ್ತು ಆಸ್ತಿಯ ಮೇಲೆ ಪರಿಣಾಮ ಬೀರುವ ಹಕ್ಕುಗಳು / ಹಕ್ಕುಗಳು / ಬಾಕಿಗಳ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆಗಳನ್ನು / ಶ್ರದ್ಧೆಯನ್ನು ಮಾಡಿಕೊಳ್ಳಬೇಕು. ಇ–ಹರಾಜು ಜಾಹೀರಾತು ಬ್ಯಾಂಕಿನ ಯಾವುದೇ ಬದ್ಧತೆ ಅಥವಾ ಪ್ರಾತಿನಿಧ್ಯವನ್ನು ರೂಪಿಸುವುದಿಲ್ಲ ಮತ್ತು ರೂಪಿಸುತ್ತದೆ ಎಂದು ಪರಿಗಣಿಸಲಾಗುವುದಿಲ್ಲ. ಬ್ಯಾಂಕಿಗೆ ತಿಳಿದಿರುವ ಅಥವಾ ತಿಳಿದಿಲ್ಲದ ಎಲ್ಲಾ ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಹೊರೆಗಳೊಂದಿಗೆ ಆಸ್ತಿಯನ್ನು ಮಾರಾಟ ಮಾಡಲಾಗುತ್ತಿದೆ. ಯಾವುದೇ ಮೂರನೇ ವ್ಯಕ್ತಿಯ ಹಕ್ಕುಗಳು / ಹಕ್ಕುಗಳು / ಬಾಕಿಗಳಿಗೆ ಅಧಿಕೃತ ಅಧಿಕಾರಿ / ಸುರಕ್ಷಿತ ಸಾಲಗಾರರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

n. ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಸೂಕ್ತ ಶ್ರದ್ಧೆ ಮತ್ತು ಭೌತಿಕ ಪರಿಶೀಲನೆ ಮತ್ತು ಆಸ್ತಿ/ಅವುಗಳ ನಿರ್ದಿಷ್ಟತೆಯ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳುವುದು ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

o. ಯಾವುದೇ ಕಾರಣ ನೀಡದೆ ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದುಗೊಳಿಸುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿದ್ದಾರೆ.

p. ಹೆಚ್ಚಿನ ವಿವರಗಳಿಗಾಗಿ ಶ್ರೀ ಕೆ ವಿ ಎನ್ ಶ್ರೀ ರಾಮಚಂದ್ರ ಮೂರ್ತಿ ಕೆನರಾ ಬ್ಯಾಂಕ್, ವಿಶೇಷ ARM ಶಾಖೆ ವಿಜಯಪುರ (7910)ಮೊಬೈಲ್ ಸಂ.916366975034, email: cb7910@canarabank.com ಅವರನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸೇವಾ ಪೂರೈಕೆದಾರ ಬ್ಯಾಂಕ್ನೆಟ್ (ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈ. ಲಿಮಿಟೆಡ್), (ಸಂಪರ್ಕ ಸಂಖ್ಯೆ 8291220220, ಇಮೇಲ್: support.BAANKNET@psballiance.com./ support.BAANKNET@procure247.com).

ದಿನಾಂಕ:05.05.2026
ಸ್ಥಳ:ವಿಜಯಪುರ

ಸಹಿ/– ಅಧಿಕೃತ ಅಧಿಕಾರಿಗಳು,
ಕೆನರಾ ಬ್ಯಾಂಕ್

CMYK

ಸುದ್ದಿ ಮಿಂಚು

ನಾದಸ್ವರ ಸಾಂಸ್ಕೃತಿಕ ಕಲಾ ಸಂಭ್ರಮ

ಕಲಬುರಗಿ : ಇಲ್ಲಿನ ನಾದಸ್ವರ ಸಂಗೀತ ಪಾಠಶಾಲೆಯ ಸಂಗೀತ ಸಾಂಸ್ಕೃತಿಕ ಕಲಾ ಸಂಭ್ರಮವು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಸುವರ್ಣ ಸಭಾಭವನದಲ್ಲಿ ಜರುಗಿತು. ಕಾಂಗ್ರೆಸ್ ಮುಖಂಡ ನೀಲಕಂಠರಾವ ಮೂಲಗೆ ಉದ್ಘಾಟಿಸಿದರು. ಸಂಗೀತ ಕಲಾವಿದರಾದ ರೇವಯ್ಯ ವಸ್ತ್ರದಮಠ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯಅತಿಥಿಗಳಾಗಿ ಪಿಎಸ್ಐ ಯಶೋಧಾ ಕಟಕೆ, ಗೋದುತಾಯಿ ಕಾಲೇಜಿನ ಪ್ರಾಚಾರ್ಯೆ ಡಾ.ಸೀಮಾ ಪಾಟೀಲ, ಸಾಂಸ್ಕೃತಿಕ ಲೋಕದ ಸ್ಥಾಪಕ ಡಾ.ರಾಜೇಂದ್ರ ಯರನಾಳೆ, ಕಸಾಪ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ ಆಗಮಿಸಿದ್ದರು. ಕಲಾವಿದರಾದ ದತ್ತರಾಜ ಕಲಶೆಟ್ಟಿ, ಚೇತನ ಕೋಬಾಳ, ಗುರುಬಾಯಿ ಮುಗಳಿ, ಪಲ್ಲವಿ ಶಿವಣಗಿ, ರವಿಸ್ವಾಮಿ ಗೋಟೂರ, ಗುರುಶಾಂತಯ್ಯ ಸ್ಥಾವರಮಠ ಅವರು ಸಂಗೀತ ಕಾರ್ಯಕ್ರಮ ನೀಡಿದರು. ಸಂಗೀತಾ ಪಡಶೆಟ್ಟಿ ಭರತನಾಟ್ಯ ಪ್ರಸ್ತುತಪಡಿಸಿದರು.

ನಾದಸ್ವರ ಸಂಗೀತ ಪಾಠಶಾಲೆಯ ಅಧ್ಯಕ್ಷ ಸೂರ್ಯಕಾಂತ ಡುಮ್ಮಾ ನೇತೃತ್ವ ವಹಿಸಿದ್ದರು. ಬಸವರಾಜ ಸಾಲಿ, ಕಲ್ಪನಾ ಗೋಲ್ಡ್‌ಸ್ಮಿತ್, ಶಿವಲೀಲಾ ಸಜ್ಜನ್ ಇತರರಿದ್ದರು.

ಸಚಿವರ ಕಚೇರಿ ಮುಂದೆ ಪ್ರತಿಭಟನೆ

ಸಂ.ಕ.ಸಮಾಚಾರ ಕಲಬುರಗಿ: ಚಿಂಚೋಳಿ ತಾಲೂಕಿನ ಸಿದ್ಧಶ್ರೀ ಎಥನಾಲ್ ಸಕ್ಕರೆ ಕಾರ್ಖಾನೆಯು ರೈತರಿಗೆ ನೀಡಬೇಕಾದ ಕಬ್ಬಿನ ಬಾಕಿ ಹಣವನ್ನು ತಕ್ಷಣವೇ ಪಾವತಿಸಬೇಕು ಮತ್ತು ತೂಕದಲ್ಲಿ ಮಾಡುತ್ತಿರುವ ವಂಚನೆಯನ್ನು ತಡೆಯಬೇಕೆಂದು ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸೇನೆ ರಾಜ್ಯ ಕಾರ್ಯದರ್ಶಿ ಬಸವರಾಜ ಕೋರಿ ನೇತೃತ್ವದಲ್ಲಿ ನೂರಾರು ರೈತರು ಕಾರ್ಖಾನೆ ಆಡಳಿತ ಮಂಡಳಿ ಮತ್ತು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸಿದ್ಧಶ್ರೀ ಎಥನಾಲ್ ಸಕ್ಕರೆ ಕಾರ್ಖಾನೆಯು ಕಬ್ಬು ಪೂರೈಸಿದ ರೈತರಿಗೆ ಹಣ ಪಾವತಿಸದೆ ವಿಳಂಬ ಮಾಡುತ್ತಿದೆ. ಅಷ್ಟೇ ಅಲ್ಲದೆ, ತೂಕದ ವಿಚಾರದಲ್ಲಿಯೂ ರೈತರಿಗೆ ಮೋಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ರೈತರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಿ, ಬಾಕಿ ಮೊತ್ತವನ್ನು ಕೂಡಲೇ ಕೊಡಿಸಬೇಕೆಂದು ಒತ್ತಾಯಿಸಿ ಜಿಲ್ಲಾ ಉಸ್ತುವಾರಿ ಸಚಿವರ ಪರವಾಗಿ ಶಂಕ್ರಯ್ಯ ಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಸದ್ಗುರುವಿನ ಆರಾಧನೆ ನಾಳೆ

ಕಾಳಗಿ: ಪಟ್ಟಣದ ಶ್ರೀ ಸದ್ಗುರುನಾಥರ ಆರಾಧನ ಮಹೋತ್ಸವ 7ರಂದು ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಸುರೇಶ ಅಷ್ಟಗಿ ತಿಳಿಸಿದ್ದಾರೆ. ಬೆಳಿಗ್ಗೆ ವಿಶೇಷ ಪೂಜೆ,

ಅಭಿಷೇಕ, ಸಂಜೆ 6ಕ್ಕೆ ಅರ್ಚಕ ಶರಣಪ್ಪ ಆಚೇರಿ ಮನೆಯಿಂದ ದೇವಸ್ಥಾನದವರೆಗೆ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಲಿದೆ.

ನಂತರ ಸದ್ಗುರುನಾಥರ ಗದ್ದುಗೆಗೆ ಮಹಾಪೂಜೆಗೈದ ಬಳಿಕ ಭಕ್ತಾದಿಗಳಿಗೆ ಮಹಾಪ್ರಸಾದ ಮಾಲ್ದಿ ಊಟ ಬಡಿಸಲಾಗುವುದು. ವಿವಿಧ ಗ್ರಾಮಗಳಿಂದ ಆಗಮಿಸುವ ಭಜನಾ ಮಂಡಳಿಗಳಿಂದ ಬೆಳಗಿನಜಾವದವರೆಗೆ ಭಜನೆ ಜರುಗಲಿದೆ ಎಂದು ತಿಳಿಸಿದ್ದಾರೆ.

ಮಕ್ಕಳಿಗೆ ಬೇಸಿಗೆ ಶಿಬಿರ 12ರಿಂದ

ಕಲಬುರಗಿ: ಜಿಲ್ಲಾ ಬಾಲ ಭವನ ವತಿಯಿಂದ 2026-27ನೇ ಸಾಲಿನ 5 ರಿಂದ 16 ವರ್ಷದ ಒಳಗಿನ ಮಕ್ಕಳಿಗೆ ಮೇ 12 ರಿಂದ 26ರವರೆಗೆ 15 ದಿನಗಳವರೆಗೆ ಚಿತ್ರಕಲೆ, ಕರಕುಶಲ, ಜೇಡಿಮಣ್ಣಿನ ಕಲೆ, ಕರಾಟೆ/ಯೋಗ/ಧ್ಯಾನ, ಸಮೂಹ ಸಂಗೀತ, ಸಮೂಹ ನೃತ್ಯ, ನಾಟಕ, ಸ್ಥಳೀಯ ಆಟಗಳು ವಿವಿಧ ಚಟುವಟಿಕೆಗಳನ್ನು ಕಲಬುರಗಿ ರಂಗಾಯಣದಲ್ಲಿ ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 1ವರೆಗೆ ಉಚಿತ ಬೇಸಿಗೆ ಶಿಬಿರ ಆಯೋಜಿಸಲಾಗಿದೆ ಎಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಆಸಕ್ತಿಯುಳ್ಳ ಮಕ್ಕಳು ಇದೇ 10 ರಂದು ಮಧ್ಯಾಹ್ನ 1.30ರ ಒಳಗಾಗಿ ರೊಳಗಾಗಿ 2 ಭಾವ ಚಿತ್ರಗಳು ಹಾಗೂ ವಯಸ್ಸಿನ ಧೃಢಿಕರಣದೊಂದಿಗೆ ಹೆಸರನ್ನು ನೊಂದಾಯಿಸಿ, ಅರ್ಜಿ ಸಲ್ಲಿಸಬಹುದು.

ಮೊದಲು ಬಂದ 60 ಮಕ್ಕಳಿಗೆ ದಾಖಲಿಸಿಕೊಳ್ಳಲಾಗುವುದು. ವಿವರಗಳಿಗಾಗಿ ಇಲಾಖೆ ಉಪ ನಿರ್ದೇಶಕರ ಕಾರ್ಯಾಲಯಕ್ಕೆ ಭೇಟಿ ನೀಡಬಹುದು ಹಾಗೂ ಜಿಲ್ಲಾ ಬಾಲಭವನ ಕಚೇರಿ ಸಹಾಯಕಿಯಾದ ಮಾನು ಹೂಗಾರ (8904342103) ಸಂಪರ್ಕಿಸಬಹುದಾಗಿದೆ.

ಹುದ್ದೆಗಳ ಮುಂದುವರಿಕೆ

ಕಲಬುರಗಿ: ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೊಂದಣಿ ಕಾರ್ಯಾಲಯದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಯ ಸಹಕಾರ ಸಂಘ/ಸಂಸ್ಥೆಗಳಲ್ಲಿ, ಬ್ಯಾಂಕ್/ಮಹಾಮಂಡಳಿಗಳಲ್ಲಿ ಹಾಗೂ ಸಹಕಾರ ಸಂಘಗಳಲ್ಲಿ ಅನ್ಯಸೇವೆ ಮಂಜೂರಾಗಿರುವ ವಿವಿಧ ವೃಂದಗಳ ಹುದ್ದೆಗಳು ನಿರ್ದಿಷ್ಟ ಅವಧಿಗೆ ಮಂಜೂರಾಗಿದ್ದು, ಹುದ್ದೆಗಳ ಅವಶ್ಯಕತೆ ಇದ್ದಲ್ಲಿ ಹುದ್ದೆಯ ಅವಧಿ ಮುಕ್ತಾಯಗೊಳ್ಳುವ ಮುಂಚಿತವಾಗಿ ಹುದ್ದೆಯನ್ನು ಮುಂದುವರೆಸುವ ಬಗ್ಗೆ ಸರ್ಕಾರಿ ಸುತ್ತೋಲೆಯ ಅಂಶಗಳನ್ನು ಪಾಲಿಸಬೇಕೆಂದು ಹಾಗೂ ಅದರನ್ವಯ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲೆಯ ವ್ಯಾಪ್ತಿಯ ಸಂಘ ಸಂಸ್ಥೆಗಳಿಗೆ ತಿಳಿಸಲು ಜಿಲ್ಲೆ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ಡಿಕ್ಕಿ: ಬೈಕ್ ಸವಾರ ಸಾವು

ಅಫಜಲಪುರ: ಬೈಕ್ ಮೇಲೆ ಅಫಜಲಪುರದಿಂದ ಶಿವೂರ ಗ್ರಾಮಕ್ಕೆ ತೆರಳುತ್ತಿದ್ದಾಗ ಅಶೋಕ ನಗರದ ಹತ್ತಿರ ಬೈಕ್ ಮತ್ತು ಎತ್ತಿನ ಗಾಡಿ ನಡುವೆ ಅಪಘಾತ ಸಂಭವಿಸಿದ್ದು ಅಪಘಾತದಲ್ಲಿ ಬೈಕ್ ಸವಾರ ಲಕ್ಷ್ಮಣ ಉಡಚಣ(64) ಮೃತಪಟ್ಟಿದ್ದಾನೆ. ಬೈಕ್ ಮೇಲೆ ಲಕ್ಷ್ಮಣ ಉಡಚಣ ಹಾಗೂ ಅಣ್ಣಾರಾಯ್ ಪಾಟೀಲ್ ರಸ್ತೆ ಬದಿಯಲ್ಲಿ ಹೋಗುತ್ತಿದ್ದ ಮಹಿಬೂಬ್ ಜಮಾದಾರ ಅವರ ಎತ್ತಿನ ಗಾಡಿಗೆ ಹಿಂಬದಿಯಿಂದ ವೇಗವಾಗಿ ಬಂದು ಬೈಕ್ ಢಿಕ್ಕಿ ಹೊಡೆದಿದ್ದಾರೆ. ಇದರಿಂದ ಎತ್ತಿನ ಬಂಡಿ, ಬೈಕ್ ಸವಾರ ಲಕ್ಷ್ಮಣ ಅವರ ಎದೆ ಭಾಗಕ್ಕೆ ಬಡಿದ ಪರಿಣಾಮದಿಂದ ರಕ್ತಸ್ರಾವವಾಗಿ ಆಸ್ಪತ್ರೆಗೆ ದಾಖಲಿಸುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಮೃತನ ಪತ್ನಿ ಜಗದೇವಿ ಉಡಚಣ ಅವರು ಘಟನೆ ಕುರಿತು ಅಫಜಲಪುರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪಿಡಿಓಗಳು ಫೋನ್ ಆಫ್ ಮಾಡದೆ, ಸಮಸ್ಯೆಗೆ ಸ್ಪಂದಿಸಿ

ಶಾಸಕ ಎಂ.ವೈ ಪಾಟೀಲ್ ತಾಕೀತು । ನೀರಿನ ಸಮಸ್ಯೆ ಬರದಂತೆ ಜಾಗೃತಿ ವಹಿಸಿ

ಸಂ.ಕ. ಸಮಾಚಾರ ಅಫಜಲಪುರ: ಬಿರು ಬಿಸಿಲಿನಿಂದಾಗಿ ತಾಲೂಕಿನಾದ್ಯಂತ ಹಲವೆಡೆ ನೀರಿನ ಸಮಸ್ಯೆ ಆಗುತ್ತಿದೆ ಎಂದು ದೂರು ಬರುತ್ತಿವೆ, ಅಧಿಕಾರಿಗಳು ಪಿಡಿಓಗಳು ಸಮಸ್ಯೆ ಅರಿತು ಜನರಿಗೆ ನೀರಿನ ಸಮಸ್ಯೆ ಬರದಂತೆ ಜಾಗೃತೆ ವಹಿಸಿ ಕೆಲಸ ಮಾಡಿ ಎಂದು ಶಾಸಕ ಎಂ.ವೈ ಪಾಟೀಲ್ ತಾಕೀತು ಮಾಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನೀರಿನ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನ ಜನರಿಗೆ ನೀರಿನ ಸಮಸ್ಯೆ ಬರದಂತೆ ಎಲ್ಲರೂ ಸೇರಿ ಕೆಲಸ ಮಾಡೋಣ. ನಾರಾಯಣಪುರ ಡ್ಯಾಂ ನಲ್ಲಿ ತುರ್ತು ಸಂದರ್ಭಕ್ಕಾಗಿ 2 ಟಿಎಂಸಿ ನೀರು ಭೀಮಾ ನದಿಗಾಗಿ ಸಂಗ್ರಹವಿಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಂಜೂರಾತಿ ದೊರೆತರೆ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಆಗುವುದಿಲ್ಲ. ಇದರ ಹೊರತಾಗಿ ಎಲ್ಲ ಅಧಿಕಾರಿಗಳು, ಪಿಡಿಓಗಳು ಜವಾಬ್ದಾರಿ ಅರಿತು ನಿಮ್ಮ ಕೇಂದ್ರ ಸ್ಥಳದಲ್ಲಿದ್ದುಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಯಾರು ಕೂಡ ನಿಮ್ಮ ಫೋನ್‌ಗಳನ್ನು ಆಫ್ ಮಾಡಿಡಬೇಡಿ ಎಂದು ಎಚ್ಚರಿಸಿದರು.

ಅಫಜಲಪುರದ ತಾಪಂ ಸಭಾಂಗಣದಲ್ಲಿ ಶಾಸಕ ಎಂ.ವೈ ಪಾಟೀಲ್ ಅಧ್ಯಕ್ಷತೆಯಲ್ಲಿ ನೀರಿನ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಯಿತು.

ತಹಸೀಲ್ದಾರ್ ಸಂಜೀವಕುಮಾರ ದಾಸರ ಮಾತನಾಡಿದರು. ಭೀಮಾ ಏತ ನೀರಾವರಿ ನಿಗಮ ನಿಯಮಿತ ಇಇ ಶಿವಕುಮಾರ ಸ್ವಾಮಿ ಮಾತನಾಡಿ, ಸೊನ್ನ ಬ್ಯಾರೇಜ್ ಈಗ ಶೇ.20 ನೀರು ಸಂಗ್ರಹ ಇರುವುದರಿಂದ ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದರು.

ತಾಪಂ ಇಒ ಶಂಕರ ರಾಠೋಡ, ಪುರಸಭೆ ಮುಖ್ಯಾಧಿಕಾರಿ ಫಕ್ರೂದ್ದಿನ್ ಮಾತನಾಡಿ, ಭೀಮಾ ನದಿಯಲ್ಲಿ ಚರಂಡಿ ನೀರು ಸೇರ್ಪಡೆ ಆಗುತ್ತಿರುವ ಬಗ್ಗೆ ದೂರುಗಳು ಬಂದಿವೆ. ಶೀಘ್ರವೇ ಶಾಶ್ವತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಸದ್ಯಕ್ಕೆ ನೀರಿನ ಸಮಸ್ಯೆ ಇಲ್ಲ, ಮುಂದಿನ ದಿನಗಳಲ್ಲೂ ಸಮಸ್ಯೆ ಆಗದಂತೆ ನೋಡಿಕೊಳ್ಳಲಾಗುವುದು ಎಂದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಎಇಇ ಅರುಣಕುಮಾರ ಮಾತನಾಡಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸರಿಯಾಗಿ ಅನುಷ್ಠಾನಗೊಂಡಿದ್ದು, ಮಾಶಾಳ, ದೇಸಾಯಿ ಕಲ್ಲೂರ ಗ್ರಾಮದಲ್ಲಿ ಒಂದಿಷ್ಟು ಸಮಸ್ಯೆಗಳಿವೆ. ಜೆಜೆಎಂ 4 ಹಂತದಲ್ಲಿ 125 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅದರಲ್ಲಿ 54 ಕಾಮಗಾರಿಗಳು ಮುಕ್ತಾಯಗೊಂಡಿವೆ. ತಾಲೂಕಿನಲ್ಲಿ 64 ಶುದ್ಧ ಕುಡಿಯುವ ನೀರಿನ ಘಟಕಗಳು ಇವೆ, ಅದರಲ್ಲಿ 20 ಚಾಲ್ತಿಯಲ್ಲಿವೆ ಎಂದರು.

ಪಿಡಿಒ ನಾಗಪ್ಪ ಬನ್ನೆ ಮಾತನಾಡಿ, ಮಾಶಾಳ ಗ್ರಾಮಕ್ಕೆ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಮೂಲಕ ನೀರು ಪೂರೈಕೆ ಆಗುತ್ತಿಲ್ಲ, ಒಂದೂವರೆ ಕಿಮಿ ದೂರದಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲೇ ಬೋರ್ ವೆಲ್, ಬಾವಿ ಸೇರಿ ನೀರು ಸಹ ಇದೆ. ಆದರೆ ನಿರಂತರ ಜ್ಯೋತಿ ವಿದ್ಯುತ್ ಇಲ್ಲದಿರುವುದರಿಂದ ಸಾಕಷ್ಟು ಸಮಸ್ಯೆಯಾಗುತ್ತದೆ, ಹೀಗಾಗಿ ಜೆಸ್ಕಾಂ ಇಲಾಖೆಯವರು ಸಹಾಯ ಮಾಡಿದರೆ ಅನುಕೂಲವಾಗಲಿದೆ ಎಂದರು. ಇವರ ಮಾತಿಗೆ ಇನ್ನೂ ಕೆಲ ಪಿಡಿಓಗಳು ಧ್ವನಿಗೂಡಿಸಿ ಅನೇಕ ಕಡೆಗಳಲ್ಲಿ ಶುದ್ಧ ನೀರಿನ ಘಟಕಗಳು ಸ್ಥಗಿತಗೊಂಡಿವೆ ಎಂದು ತಿಳಿಸಿದರು.

ಸಭೆಯಲ್ಲಿ ಸಣ್ಣ ನೀರಾವರಿ ಇಲಾಖೆ ಎಇಇ ಶಾಂತಪ್ಪ ಜಾಧವ್, ಜೆಸ್ಕಾಂ ಎಇಇ ನಾಗರಾಜ್ ಸೇರಿ ಪಿಡಿಒ, ಸಿಬ್ಬಂದಿ ಇದ್ದರು.

> **15**ರ ನಂತರ ಮಳೆ ಬರುವ ಸಂಭವವಿದೆ, ಆದರೆ ಜೂನ್ ತಿಂಗಳಲ್ಲಿ ಮಳೆಯ ಕೊರತೆ ಇದೆ ಎಂದು ಈಗಾಗಲೇ ಹವಾಮಾನ ಇಲಾಖೆ ತಿಳಿಸಿದೆ. ಹೀಗಾಗಿ ಎಚ್ಚರ ವಹಿಸುವುದು ಅಗತ್ಯವಾಗಿದೆ.
> ■ **ಸಂಜೀವಕುಮಾರ ದಾಸರ,** ತಹಸೀಲ್ದಾರ್, ಅಫಜಲಪುರ.

ಕಲಬುರಗಿಯ ಎಂ.ಎಸ್. ದೇಸಾಯಿ ಪದವಿ ಮಹಾವಿದ್ಯಾಲಯ ವತಿಯಿಂದ ವಿಶೇಷ "ಕನ್ನಡದ ಕೋಟ್ಯಾಧಿಪತಿ" ಕಾರ್ಯಕ್ರಮ ನಡೆಯಿತು.

ವಿದ್ಯಾರ್ಥಿಗಳಿಗಾಗಿ "ಕನ್ನಡದ ಕೋಟ್ಯಾಧಿಪತಿ" ಕಾರ್ಯಕ್ರಮ

ಸಂ.ಕ.ಸಮಾಚಾರ ಕಲಬುರಗಿ: ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿ, ಚಿಂತನಾ ಶಕ್ತಿ ವೃದ್ಧಿ ಹಾಗೂ ಮನರಂಜನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಎಂ.ಎಸ್. ದೇಸಾಯಿ ಪದವಿ ಮಹಾವಿದ್ಯಾಲಯ ವತಿಯಿಂದ ವಿಶೇಷ "ಕನ್ನಡದ ಕೋಟ್ಯಾಧಿಪತಿ" ಕಾರ್ಯಕ್ರಮ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಯಿತು. ಪ್ರಶ್ನೋತ್ತರ ಸ್ಪರ್ಧೆಯ ಮಾದರಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿಜೇತರಾಗಿ ಹೊರಹೊಮ್ಮಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾಲೇಜಿನ ಕಾರ್ಯದರ್ಶಿ ಜಗನ್ನಾಥ ನಾಗೂರ, ಕಾಲೇಜಿನ ಅಧ್ಯಕ್ಷ ಸಂದೀಪ್ ದೇಸಾಯಿ, ಮಂಜುನಾಥ್ ಬನ್ನೂರ್, ಅಮರ್ ಹಾಗರಗಿ, ನಾಗರಾಜ್ ಪಟ್ಟಣಕರ, ಶಿವಶರಣಪ್ಪ ಪೂಜಾರಿ, ರೇವಣಸಿದ್ದಪ್ಪ ಹೂಗಾರ್, ಶ್ರೀದೇವಿ ಹಿರೇಮಠ, ಗುರುವಾಯಿ ವಾಡಿ, ಅಂಬಿಕಾ ಪಟ್ನೆ, ರಾಧಿಕಾ ಗುತ್ತೇದಾರ್, ರೇಷ್ಮಾ ರಾಥೋಡ್, ಚೆನ್ನಮ್ಮ, ಜ್ಯೋತಿ ಹಂಗರಗಿ, ಶಿಲ್ಪಾ ಶೆಟ್ಟಿ, ಗೀತಾ ಇಂಗಿನ, ಸಂತೋಷ್ ಲಸ್ಕರ್, ಕಾಶಿಬಾಯಿ ವಗ್ಗ ಸೇರಿದಂತೆ ಕಾಲೇಜಿನ ಎಲ್ಲಾ ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಭುಲಿಂಗೇಶ್ವರ ಜಾತ್ರೆ ನಾಳೆಯಿಂದ

ಆಳಂದ : ಸಮೀಪದ ಜಾವಳಿ (ಡಿ) ಗ್ರಾಮದ ಶ್ರೀ ಪ್ರಭುಲಿಂಗೇಶ್ವರರ ಪುರಾಣ ಪ್ರಸಿದ್ಧ ಜಾತ್ರಾ ಮಹೋತ್ಸವ 7 ರಿಂದ 9 ರವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರುಗಲಿದೆ.

ಶ್ರೀ ಆನಂದಪ್ರಭು ಪಾಟೀಲರ ನೇತೃತ್ವದಲ್ಲಿ ನಡೆಯಲಿರುವ ಮಹೋತ್ಸವದಲ್ಲಿ 7 ರಂದು ಸಾಯಂಕಾಲ ರಥೋತ್ಸವ ಜರುಗಲಿದ್ದು, 8 ರಂದು ಕುಸ್ತಿ ಪಂದ್ಯಾವಳಿಗಳು, 9 ರಂದು ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ ಎಂದು ಸಮಿತಿಯ ಪ್ರಮುಖರು ತಿಳಿಸಿದ್ದಾರೆ. ಜಾತ್ರೆಯ ಮೂರೂ ದಿನಗಳ ಕಾಲ ಈ ನೆಲದ ಸಾಂಸ್ಕೃತಿಕ ಹಿರಿಮೆಯನ್ನು ಸಾರುವ ಗೀಗಿ ಪದಗಳು ಹಾಗೂ ವೈವಿಧ್ಯಮಯ ಕಲಾ ಪ್ರದರ್ಶನಗಳು ಗ್ರಾಮದ ಪ್ರಮುಖ ವೇದಿಕೆಗಳಲ್ಲಿ ಜರುಗಲಿವೆ. ಇದು ಭಾಗದ ಕಲೆ ಮತ್ತು ಸಂಸ್ಕೃತಿಗೆ ಸಾಕ್ಷಿಯಾಗಲಿದೆ. ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಐತಿಹಾಸಿಕ ದೈತ ಮುತ್ಯಾನ ಜಾತ್ರೆಯು 17 ರಂದು ಜರುಗಲಿದೆ. ಸತತ ಹತ್ತು ದಿನಗಳ ಕಾಲ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಲಿದ್ದು, ಸಕಲ ಸಿದ್ಧತೆಗಳು ಭರದಿಂದ ಸಾಗಿವೆ ಜಾತ್ರಾ ಕಮಿಟಿ ತಿಳಿಸಿದೆ.

ಜಿಲ್ಲಾ ಕಸಾಪ ಆಯೋಜನೆ । ಮೇ ಮಾಸಾಂತ್ಯಕ್ಕೆ ಜಿಲ್ಲಾಮಟ್ಟದ ಕವಿ ಸಮ್ಮೇಳನ

ಶೀಘ್ರದಲ್ಲಿ ಸಮ್ಮೇಳನಾಧ್ಯಕ್ಷರ ಆಯ್ಕೆ

ಸಂ.ಕ.ಸಮಾಚಾರ ಕಲಬುರಗಿ: ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಮತ್ತು ಕನ್ನಡ ಸಾಹಿತ್ಯ ಪರಂಪರೆ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಆಶ್ರಯದಲ್ಲಿ ಮೇ ತಿಂಗಳ ಮಾಸಾಂತ್ಯದಲ್ಲಿ ನಗರದಲ್ಲಿ ಒಂದು ದಿನದ ಕಲಬುರಗಿ ಜಿಲ್ಲಾ ಪ್ರಥಮ ಕವಿ ಸಮ್ಮೇಳನವನ್ನು ಏರ್ಪಡಿಸಲು ನಿರ್ಧರಿಸಲಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹೊಸ ಹೊಸ ಬರಹಗಾರರು ಸಮಾಜದ ಬಡಿತವನ್ನು ಅರಿತು, ಅದನ್ನು ಬದುಕಿನ ಅನುಭವದೊಂದಿಗೆ ಬೆರೆಸಿ ಕಾವ್ಯರೂಪಕ್ಕಿಳಿಸಿದಾಗ ಗಟ್ಟಿಯಾದ ಸಾಹಿತ್ಯ ಸೃಷ್ಟಿಯಾಗುತ್ತದೆ. ಇದಕ್ಕೆ ಪ್ರೇರಣೆ ಕೊಡುವ ಕಾರ್ಯ ಪರಿಷತ್ತು ಮಾಡುತ್ತಿದೆ. ಕವಿ, ಕಾವ್ಯ, ಬದುಕು ಮತ್ತು ಸಮಾಜ ಇವು ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಕಾವ್ಯವು ಕವಿಯ ಬದುಕಿನ ಅನುಭವಗಳ ಪ್ರತಿಬಿಂಬವಾಗಿದ್ದರೆ, ಅದು ಸಮಾಜದ ಕನ್ನಡಿಯೂ ಹೌದು. ಇಂದು ಸಾಮಾಜಿಕ ಜಾಲತಾಣಗಳನ್ನೇ ವೇದಿಕೆಯನ್ನಾಗಿ ರೂಪಿಸಿಕೊಂಡು ಅನೇಕ ಹೊಸ ಬರಹಗಾರರು ಕಾವ್ಯ ಕೃಷಿಯಲ್ಲಿ ತೊಡಗಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ನಡೆಸ ಸಭೆಯಲ್ಲಿ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿದರು.

ಇಂದಿನ ಪ್ರಸ್ತುತ ಸಮಾಜದಲ್ಲಿನ ಪ್ರಚಲಿತ ವಿಷಯಗಳ ಮೇಲೆ ಕಾವ್ಯ ಕಟ್ಟಿಕೊಳ್ಳಬೇಕಾಗಿದೆ. ಹೀಗಾಗಿ ಇಂಥ ಕವಿ ಸಮ್ಮೇಳನವನ್ನು ಆಯೋಜಿಸುವ ಮೂಲಕ ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆಯನ್ನು ಉಳಿಸುವಲ್ಲಿ ಸಾಹಿತ್ಯಾಸಕ್ತರು, ನವ ಕವಿ ಹೃದಯಗಳು ಇನ್ನೂ ಕಾರ್ಯ ಮಾಡಬೇಕಾಗಿದೆ ಎಂದರು.

ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಲು ತೀರ್ಮಾನಿಸಲಾಗಿದ್ದು, ಆಡಂಬರ, ಮೆರವಣಿಗೆ ನಡೆಸದಿರಲು ನಿರ್ಧರಿಸಲಾಗಿದೆ. ಸಮ್ಮೇಳನದ ಯಶಸ್ವಿಗೆ ಪೂರಕವಾಗಿ ಸ್ವಾಗತ ಸಮಿತಿ ರಚನೆ, ಜಿಲ್ಲೆಯ ಹಿರಿಯ ಮತ್ತು ಅನುಭವಿ ಕವಿಯೊಬ್ಬರನ್ನು ಸಮ್ಮೇಳನಾಧ್ಯಕ್ಷರನ್ನು ಶೀಘ್ರದಲ್ಲಿಯೇ ಆಯ್ಕೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಜಿಲ್ಲಾ ಕಸಾಪ ಕಾರ್ಯದರ್ಶಿಗಳಾದ ಶಿವರಾಜ ಅಂಡಗಿ, ಧರ್ಮಣ್ಣ ಧನ್ನಿ, ಕೋಶಾಧ್ಯಕ್ಷ ಶರಣರಾಜ ಛಪ್ಪರಬಂದಿ, ಪ್ರಮುಖರಾದ ಸಿದ್ಧಲಿಂಗ ಬಾಳಿ, ಬಾಬುರಾವ ಪಾಟೀಲ, ಜಯಶ್ರೀ ಜಮಾದಾರ, ಸೈಯ್ಯದ್ ನಜಿರುದ್ದಿನ್ ಮುತ್ತವಲ್ಲಿ, ರಾಜೇಂದ್ರ ಮಾಡಬೂಳ, ದಿನೇಶ ಮದಕರಿ, ಧರ್ಮರಾಜ ಜವಳಿ, ರವಿಕುಮಾರ ಶಹಾಪೂರಕರ್, ಪ್ರಭುಲಿಂಗ ಮೂಲಗೆ, ಡಾ. ರೆಹಮಾನ್ ಪಟೇಲ್, ಹಣಮಂತರಾವ ಪೆಂಚನಪಳ್ಳಿ, ರಮೇಶ ಬಡಿಗೇರ, ಶಿವಲೀಲಾ ಕಲಗುರ್ಕಿ, ಸುರೇಶ ದೇಶಪಾಂಡೆ ಸೇರಿ ಅನೇಕರು ಇದ್ದರು.

ಹಜ್ರತ್ ಖ್ವಾಜಾ ಬಂದಾ ನವಾಜ್‌ರ ಜಿಯಾರತ್

ಕಲಬುರಗಿ : 622ನೇ ಉರ್ಸ್ ಶರೀಫ್ ಹಜ್ರತ್ ಖ್ವಾಜಾ ಬಂದಾ ನವಾಜ್ (ರ.ಅ) ಅವರ ಮೂರನೇ ದಿನದ ಅಂಗವಾಗಿ, ಜಿಯಾರತ್ ಸಂದರ್ಭದಲ್ಲಿ ಮಂಗಳವಾರ ಅಸರ್ ನಮಾಜ್ ನಂತರ ದರ್ಗಾ ಶರೀಫ್ ಮಸೀದಿಯಲ್ಲಿ ಖತ್ಮ್-ಎ-ಕುರ್‌ಆನ್ ಖ್ವಾನಿ ಮತ್ತು ಕಸೀದಾ ಬುರ್ಡಾ ಶರೀಫ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಹಜ್ರತ್ ಹಾಫಿಜ್ ಡಾ. ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೈನಿ ಸಾಹೇಬ್, ಸಜ್ಜಾದಾ ನಶೀನ್ ಅವರು ಸದರ್ ಸೋಫಾ ಹವೇಲಿಯಿಂದ ಖ್ವಾಜಗಿ ವೇಷಭೂಷಣದಲ್ಲಿ ಫುಕ್ರಾಗಳೊಂದಿಗೆ ಮಸೀದಿಗೆ ಆಗಮಿಸಿದರು. ಮೊದಲು ಖತ್ಮ್-ಎ-ಕುರ್‌ಆನ್ ಖ್ವಾನಿ ನಡೆಯಿತು. ನಂತರ ಹೈದರಾಬಾದ್‌ನ ಹಬೀಬ್ ಚೆಹಲ್ ಕಾಫ್ ಗುಂಪು ಕಸೀದಾ ಬುರ್ಡಾ ಶರೀಫ್ ಅನ್ನು ಪ್ರಸ್ತುತಪಡಿಸಿದರು.

ಮಘ್ರಿಬ್ ನಮಾಜ್ ನಂತರ ಸಲಾಂ ಕಾರ್ಯಕ್ರಮ ನಡೆಯಿತು. ಅದರ ಬಳಿಕ ಹಜ್ರತ್ ಡಾ. ಹಾಫಿಜ್ ಸಯ್ಯದ್ ಮುಹಮ್ಮದ್ ಅಲಿ ಹುಸೈನಿ ಸಾಹೇಬ್ ಕಿಬ್ಲಾ, ಸಜ್ಜಾದಾ ನಶೀನ್ ಅವರು ಫಾತೇಹಾ ಖ್ವಾನಿ ನೆರವೇರಿಸಿದರು. ನಂತರ ತಬ್ರೂಕಾತ್ ವಿತರಣೆ ಮಾಡಲಾಯಿತು.

ಬಳಿಕ ಹಜ್ರತ್ ಖ್ವಾಜಾ ಬಂದಾ ನವಾಜ್ (ರ.ಅ) ಅವರ ದರ್ಗಾಹದಲ್ಲಿ ಜಿಯಾರತ್ ನೆರವೇರಿಸಲಾಯಿತು ಮತ್ತು ಬಂದ್ ಸಮಾ ಕಾರ್ಯಕ್ರಮವೂ ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಅಜ್ಮೇರ್ ಶರೀಫ್‌ನ ಹಜ್ರತ್ ಅಮೀನ್ ಮಿಯಾ ಚಿಷ್ಟಿ, ಜನಾಬ್ ಸಯ್ಯದ್ ಮುಹಮ್ಮದ್ ಸಯ್ಯದ್ ಹುಸೈನಿ ಸಾಹೇಬ್, ಹಜ್ರತ್ ಸಯ್ಯದ್ ಶಾ ತಖಿಯುಲ್ಲಾ ಹುಸೈನಿ, ಸಯ್ಯದ್ ಅಹ್ಮದ್ ಹುಸೈನಿ ಸಾಹೇಬ್, ಸಯ್ಯದ್ ಬಾಖರ್ ಶಬ್ಬೀರ್ ಹುಸೈನಿ, ಜನಾಬ್ ಮಿರ್ ಸರ್ದಾರುದ್ದೀನ್ ಅಲಿ ಖಾನ್ ಹಾಗೂ ಬಂದಾ ನವಾಜ್ ಖಾಂದಾನ್‌ನ ಶಹ್ಜಾದಾಗಳು ಭಾಗವಹಿಸಿದ್ದರು. ಇದರ ಜೊತೆಗೆ ವಿವಿಧ ಉಲಮಾ, ಮಶಾಯಿಖ್, ಸಜ್ಜಾದಾ ನಶೀನ್‌ಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜಾಯರೀನ್‌ಗಳು ಹಾಜರಿದ್ದರು.

ದುಃಖದ ಮೂಲ ಹುಡುಕಿ ಶಾಂತಿ ಭೋದಿಸಿದ ಬುದ್ಧ

ಸಂ.ಕ.ಸಮಾಚಾರ ಚಿತ್ತಾಪುರ: ಪ್ರಪಂಚದ ಜನರನ್ನು ಕಾಡುತ್ತಿರುವ ದುಃಖದ ಮೂಲ ಹುಡುಕಲು ಹೊರಟ ಸಿದ್ದಾರ್ಥ್ ಗೌತಮ ಬುದ್ಧ ಜಗತ್ತಿಗೆ ಶಾಂತಿಯ ತತ್ವವನ್ನು ಬೋಧಿಸಿದರು ಎಂದು ತಹಸಿಲ್ದಾರ್ ನಾಗಾಯಿ ಹಿರೇಮಠ ಹೇಳಿದರು.

ಪಟ್ಟಣದ ಬಸ್ ನಿಲ್ದಾಣದ ಸಮೀಪದ ಬುದ್ಧ ವಿಹಾರದಲ್ಲಿ ತಾಲೂಕು ಆಡಳಿತ ಹಾಗೂ ಭಗವಾನ್ ಬುದ್ಧ ಜಯಂತಿ ಉತ್ಸವ ಸಮಿತಿ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಜ್ಞಾನಪ್ರಾಪ್ತಿಗಾಗಿ ಜ್ಞಾನದ ಮೊರೆ ಹೋದ ಬುದ್ಧ ಜನರ ಕಷ್ಟಗಳಿಗೆ ಕಾರಣ ಅರಿಯಲು ಪ್ರಯತ್ನಿಸಿದರು. ಅತಿ ಆಸೆ ದುಃಖಕ್ಕೆ ಮೂಲ ಕಾರಣ ಎಂಬುವುದು ಅರ್ಥ ಮಾಡಿಕೊಂಡರು. ಅಷ್ಟಾಂಗ ಮಾರ್ಗಗಳನ್ನು ಹೇಳುವ ಮೂಲಕ ಮಾನವ ಜೀವನಕ್ಕೆ ಜ್ಞಾನದ ದೀಪ ಬೆಳಗಿಸಿದರು. ಮೌರ್ಯ ಸಾಮ್ರಾಜ್ಯದ ದೊರೆ ಸಾಮ್ರಾಟ್ ಅಶೋಕ ಕೈಗೊಂಡ ಧಮ್ಮ ಪ್ರಚಾರ ಚಿತ್ತಾಪುರದವರೆಗೂ ಹಬ್ಬಿದೆ ಎಂಬುದಕ್ಕೆ ಸನ್ನತ್ತಿಯಲ್ಲಿ ಸಿಕ್ಕ ಶಿಲಾಶಾಸನಗಳೇ ಸಾಕ್ಷಿಯಾಗಿವೆ. ಬೌದ್ಧ ಧರ್ಮವನ್ನು ವಿಶ್ವದಾದ್ಯಂತ ಪ್ರಚಾರ ಮಾಡಲು ಸಾಮ್ರಾಟ್ ಅಶೋಕ ಕೈಗೊಂಡ ಪ್ರಚಾರದ ವಿವಿಧ ಕಾರ್ಯಯೋಜನೆಗಳು ಬುದ್ಧ ಚಿಂತನೆ ಅಚ್ಚಳಿಯದೆ ಉಳಿಯಲ್ಲ ಕಾರಣವಾಗಿವೆ ಎಂದು ವಿವರಿಸಿದರು.

ಚಿತ್ತಾಪುರದ ಬುದ್ಧ ವಿಹಾರದಲ್ಲಿ ಏರ್ಪಡಿಸಲಾಗಿದ್ದ ಬುದ್ಧ ಜಯಂತಿ ಕಾರ್ಯಕ್ರಮ ಪುರಸಭೆ ಮುಖ್ಯಾಧಿಕಾರಿ ಭಾರತಿ ದಂಡೋತಿ ಉದ್ಘಾಟಿಸಿದರು.

ಸಾನಿಧ್ಯ ವಹಿಸಿ ಮಾತನಾಡಿದ ಬೀದರ್ ಬುದ್ಧ ವಿಹಾರದ ಭಂತೆ ಶಾಂತಿ ಸುಮನ್, ಬುದ್ಧನ ಶಾಂತಿಯ ತತ್ವಗಳು ತಲುಪದ ಕಾರಣ ಇಂದು ವಿಶ್ವ ಯುದ್ಧದಿಂದ ತತ್ತರಿಸುತ್ತಿದೆ. ಶಾಂತಿ, ಮಮತ, ಕರುಣೆ, ಮೈತ್ರಿ ಹಾಗೂ ಅಹಿಂಸಾ ಮಾರ್ಗವನ್ನು ಬೋಧಿಸಿದ ಭೂಮಿಯಲ್ಲಿ ಇಂದು ಅಶಾಂತಿ ಭುಗಿಲಿದ್ದಿದೆ ಎಂದು ಹೇಳಿದರು.

ದಲಿತ ಮುಖಂಡ ರಮೇಶ ಕವಡೆ, ಜಯಂತೋತ್ಸವ ಸಮಿತಿ ಅಧ್ಯಕ್ಷ ಜಗನ್ನಾಥ ಮುಡಬೂಳಕರ್, ಪುರಸಭೆ ಮುಖ್ಯಾಧಿಕಾರಿ ಭಾರತಿ ದಂಡೋತಿ, ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಮಲ್ಲಿಕಾರ್ಜುನ ಬೊಮ್ಮನಳ್ಳಿ, ಪುರಸಭೆ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಾಳಗಿ ,ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಅಧ್ಯಕ್ಷ ದೇವಿಂದ್ರ ಎಮ್. ಅರಣಕಲ್, ತಾಪಂ ಇಒ ಮೊಹ್ಮದ್ ಅಕ್ರಂ ಪಾಷಾ, ಕಾರ್ಮಿಕ ಇಲಾಖೆ ಅಧಿಕಾರಿ ವಿಕ್ರಮ ಬಡಿಗೇರ, ತಾಲೂಕು ವೈದ್ಯಧಿಕಾರಿ ಡಾ.ವೀರನಾಥ, ಮುಖಂಡರಾದ ಮಲ್ಲಿಕಾರ್ಜುನ ಬೆಣ್ಣೂರ, , ಶ್ರೀಕಾಂತ ಸಿಂಧೆ, ಲೋಹಿತ , ಬಸವರಾಜ ಮುಡಬೂಳ, ಪಾಲ್ಗೊಂಡಿದ್ದರು. ಶಿವಶರಣಪ್ಪ ಮಂತಾಳೆ ನಿರೂಪಿಸಿದರು. ಶಂಕರ ಡಾಂಗೆ ವಂದಿಸಿದರು.

ಬಸವೇಶ್ವರರ ವಚನ, ವಿಚಾರಗಳು ಅಳವಡಿಸಿಕೊಳ್ಳಿ

ಸಂ.ಕ.ಸಮಾಚಾರ ಸೋಲಾಪುರ: 12ನೇ ಶತಮಾನದಲ್ಲಿ ಬಸವೇಶ್ವರ ಮಹಾರಾಜರು ಆದರ್ಶ ಆಲೋಚನೆಗಳು ಜನಕ್ಕೆ ನೀಡಿದ್ದಾರೆ. ಅವರ ವಚನ ಮತ್ತು ವಿಚಾರಗಳು ಬದುಕಿನಲ್ಲಿ ಪ್ರತಿಯೊಬ್ಬರು ಅನುಸರಿಸಿದರೆ ಸಮಾಜದಲ್ಲಿ ಅಪರಾಧಗಳು ನಡೆಯುವುದಿಲ್ಲ ಆಗ ಒಂದು ಆದರ್ಶ ಸಮಾಜ ನಿರ್ಮಾಣವಾಗುತ್ತದೆ.

ಅಂತಹ ಶಕ್ತಿ ಅವರ ವಚನ ಮತ್ತು ವಿಚಾರಗಳಲ್ಲಿದೆ. ಪ್ರಾಮಾಣಿಕದಿಂದ ಶೀಲದ ಪಾಲನೆಯಾದರೆ ಸಮಾಜದಲ್ಲಿ ಅಪರಾಧಗಳು ಇರುವುದಿಲ್ಲ. ಆಗ ಶಿಕ್ಷಿಸುವ ಅಗತ್ಯವೇ ಇರುವುದಿಲ್ಲ ಎಂದು ಜಿಲ್ಲಾ ಸರಕಾರಿ ವಕೀಲ ಪ್ರದೀಪಸಿಂಹ ರಾಜಪೂತ್ ಹೇಳಿದರು. ಇಲ್ಲಿನ ಲೋಕ ಮಾನ್ಯ ಟಿಳಕ ಸಭಾಗೃಹದಲ್ಲಿ ಬಸವ ಸೆಂಟರಿನವತಿಯಿಂದ ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 45 ವರ್ಷಗಳಿಂದ ಬಸವ ಸೆಂಟರ ಶರಣರ ವಚನಗಳು ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಗೂ ತಲುಪಿಸುವ ಕಾರ್ಯ ಮಾಡುತ್ತಿದೆ ಎಂದು ಸಂಸ್ಥೆ ಅಧ್ಯಕ್ಷ ರಾಜೇಂದ್ರ ಮಾಯನಾಳೆ ತಿಳಿಸಿದರು.

ನಂದಗಾವ್ ವೀರಕ್ತ ಮಠದ ರಾಜಶೇಖರ ಸ್ವಾಮಿ, ಸಂಸ್ಥೆ ಅಧ್ಯಕ್ಷ ರಾಜೇಂದ್ರ ಮಾಯನಾಳೆ, ಬಾಳಾಸಾಹೇಬ ಕುಲಕರ್ಣಿ, ಪುಷ್ಪಾ ಗುಂಗೆ, ಮಲ್ಲಿನಾಥ ಪಾಟೀಲ, ನೀಲಕಂಠಪ್ಪ ಕೋನಾಪುರೆ, ಇತರೆ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು.

> **ಪ**ತ್ರಕರ್ತ ವಿಕ್ರಂ ಖೇಲಬುಡೆಯವರಿಗೆ ಆದರ್ಶ ಪತ್ರಕರ್ತ. ಅಸ್ತಿರೋಗ ತಜ್ಞ ಡಾ. ವೆಂಕಟೇಶ ಮೇತನರಿಗೆ ಬಸವ ಭೂಷಣ, ವಿಜ್ಞಾನ ಸಾಹಿತಿ ಡಾ. ಸುನೀಲ ವಿಭೂತೆಯವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮ ದಲ್ಲಿ ವಿವಿಧ ಗಣ್ಯರಿಗೆ ಪ್ರಶಸ್ತಿ ನೀಡ ಲಾಯಿತು.

ವೈಜ್ಞಾನಿಕ ತಳಹದಿ ಮೇಲೆ ರಚಿತವಾಗಿರುವ ಭಾಷೆ ಕನ್ನಡ

ತಹಸೀಲ್ದಾರ್ ಮಹಮ್ಮದ್ ಮೊಹಸಿನ್ ಬಣ್ಣನೆ । ಕಮಲಾಪುರದಲ್ಲಿ ಕಸಾಪ ಸಂಸ್ಥಾಪನಾ ದಿನ

ಸಂ.ಕ.ಸಮಾಚಾರ ಕಮಲಾಪುರ: ಕನ್ನಡ ಭಾಷೆ ನಮ್ಮೆಲ್ಲರ ಅನ್ನದ ಭಾಷೆ. ವೈಜ್ಞಾನಿಕ ತಳಹದಿ ಮೇಲೆ ರಚಿತವಾಗಿರುವ ಭಾಷೆ ಕನ್ನಡ, ದೇಶದಲ್ಲಿ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆ ಎಂಬ ಹೆಮ್ಮೆ ನಮಗಿದೆ ಎಂದು ತಹಸೀಲ್ದಾರ್ ಮಹಮ್ಮದ್ ಮೊಹಸಿನ್ ಬಣ್ಣಿಸಿದರು.

ತಾಲೂಕಿನ ಮಹಾಗಾಂವ್ ಕ್ರಾಸ್ ನಲ್ಲಿ ಇರುವ ವಚನ ಕೋಚಿಂಗ್ ಸೆಂಟರ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನ ದಿನಾಚರಣೆ ಹಿರಿಯ ಸದಸ್ಯರಿಗೆ ಸತ್ಕಾರ ಹಾಗೂ ಹತ್ತನೇ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸ್ಪರ್ಧಾತ್ಮಕ ಯುಗದಲ್ಲಿ ಅಂಕಗಳ ಜತೆ ವೈಯಕ್ತಿಕ ಕೌಶಲ ಹೊಂದುವುದು ಅಗತ್ಯವಾಗಿದೆ ಗುಣಮಟ್ಟದ ಶಿಕ್ಷಣದೊಂದಿಗೆ ಕೌಶಲ ಹೊಂದಿರುವ ಯುವಕರಿಗೆ ಸಾಕಷ್ಟು ಉದ್ಯೋಗ ಅವಕಾಶಗಳು ಲಭ್ಯವಿವೆ. ನಿರಂತರವಾಗಿ ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿದರೆ ಅಂದುಕೊಂಡ ಸಾಧನೆ ಸಾಧ್ಯವಾಗುತ್ತದೆ ಎಂದರು.

ಕಮಲಾಪುರ: ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನ ದಿನಾಚರಣೆ ಜರುಗಿತು.

ಕಮಲಾಪುರ ತಾಪಂ ಇಒ ರಮೇಶ್ ಪಾಟೀಲ್ ಮಾತನಾಡಿ, ಕನ್ನಡ ನಾಡು-ನುಡಿಯ ಉಳಿಸಿ ಬೆಳೆಸಲು ಸಾಹಿತ್ಯ ಪರಿಷತ್ತು ನಿರಂತರವಾಗಿ ಶ್ರಮಿಸುತ್ತಿದೆ ಯಾವುದೇ ಅನುದಾನಗಳು ಇಲ್ಲದೆ ಇದ್ದರೂ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಕನ್ನಡ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಅದರ ಜೊತೆಗೆ ಎಲೆ ಮರೆಯಂತೆ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ ಮತ್ತಷ್ಟು ಸಮಾಜ ಸೇವೆಗೆ ಪ್ರೋತ್ಸಾಹ ನೀಡುವ ಕಾರ್ಯ ನಿರಂತರವಾಗಿ ಮಾಡುತ್ತಿದೆ ಎಂದರು.

ಸಿಪಿಐ ಶಿವಶಂಕರ ಸಾಹು ಮಾತನಾಡಿ, ಕನ್ನಡ ಭಾಷೆಗೆ ತನ್ನದೇ ಆದ ಐತಿಹಾಸಿಕ ಪರಂಪರೆ ಹಿನ್ನೆಲೆ ಇದೆ, ಹೆಚ್ಚು ಅಂಕ ಪಡೆದ ಪ್ರತಿಭಾವಂತರಿಗೆ ಇಂದು ಸತ್ಕಾರ ಮಾಡಲಾಗುತ್ತಿದೆ ಕಡಿಮೆ ಅಂಕ ಪಡೆದವರು ಎದೆಗುಂದಬೇಕಿಲ್ಲ ಮುಂಬರುವ ದಿನಗಳಲ್ಲಿ ನಿರಂತರವಾಗಿ ಅಧ್ಯಯನ ಮಾಡಿದರೆ ನೀವು ಸಹ ಹೆಚ್ಚು ಅಂಕಗಳನ್ನು ಪಡೆದು ಉತ್ತಮ ಹುದ್ದೆಪಡೆಯಬಹುದಾಗಿದೆ ಎಂದರು

ಕಮಲಾಪುರ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಸುರೇಶ್ ಅಂಗಡಿ ಪ್ರಾಸ್ತವಿಕವಾಗಿ ಮಾತನಾಡಿದರು, ಕಸಾಪ ಪ್ರತಿನಿಧಿ ಸಂಜಯಕುಮಾರ್ ನಾಟಿಕರ್ ಸ್ವಾಗತಿಸಿದರು, ಮೌಂಟ್ ವೇವ್ ಪಿಯು ಕಾಲೇಜಿನ ಪ್ರಾಂಶುಪಾಲ ಮಹದೇವ್ ಬಡಾ ನಿರೂಪಿಸಿದರು, ಅನಂತಕುಮಾರ್ ಪಾಟೀಲ್ ವಂದಿಸಿದರು. ಕಮಲಾಪುರ ಕಸಾಪ ಮಾಜಿ ಅಧ್ಯಕ್ಷ ದಾಸಿಮಯ್ಯ ವಡ್ಡನಕೇರಿ, ಹಿರಿಯ ಸಾಹಿತಿ ನಾಗಣ್ಣ ವಿಶ್ವಕರ್ಮ, ತಾಲೂಕು ಶಿಕ್ಷಕರ ಸಂಘದ ನೂತನ ಸದಸ್ಯ ಮಹಬೂಬ್ ಮಡಕಿ, ಶರಣಬಸಪ್ಪ ದೋಣಿ ಸುಗೂರ, ರಾಜಣ್ಣ ಮಾಸ್ತರ್, ಕುಶ ಮಂತಾಳ, ಸಂತೋಷ ಪಾಟೀಲ್, ಸುರೇಶ ಕಲಶೆಟ್ಟಿ, ಭಾಗ್ಯಶ್ರೀ, ಪ್ರೇಮಾ ಅಂತಪನಾಳ, ಕಾವೇರಿ, ಇತರರು ಇದ್ದರು.

> **ಕೆ**ಲವೇ ಜನರಿಗೆ ಸೀಮಿತವಾಗಿದ್ದ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿಸಲು ತಾಲೂಕು ವ್ಯಾಪ್ತಿಯಲ್ಲಿ ನಿತ್ಯ ನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವೈಚಾರಿಕತೆ ಹಾಗೂ ಸಾಮಾಜಿಕ ನ್ಯಾಯದ ನೆಲಗಟ್ಟಿನ ಮೇಲೆ ಸಮಾಜ ನಿರ್ಮಿಸಲು ಶ್ರಮಿಸಲಾಗುತ್ತಿದೆ.
> ■ **ಸುರೇಶ ಲೇಂಗಟಿ,** ಕಸಾಪ, ತಾಲೂಕು ಅಧ್ಯಕ್ಷ.

ಸುದ್ದಿ ಮಿಂಚು

ಸಿಎನ್‌ಜಿಗಾಗಿ ದಿನವಿಡಿ ವಾಹನಗಳ ಕ್ಯೂ

ಔರಾದ್: ಪಟ್ಟಣದಲ್ಲಿ ಸಿಎನ್‌ಜಿ ತುಂಬಿಕೊಳ್ಳಲು ವಾಹನಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ಸಾಲುಗಟ್ಟಿ ನಿಂತಿವೆ. ರಾಜ್ಯದ ಗಡಿ ತೆಲಂಗಾಣ, ಮಹಾರಾಷ್ಟ್ರ ಅಲ್ಲದೆ ಸ್ಥಳಿಯ ವಾಹನಗಳು ಗ್ಯಾಸ್ ಕೊರತೆಯಿಂದ ಸೋಮವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 10 ಗಂಟೆಯವರೆಗೆ ಆಟೋ ಕಾರುಗಳು ಗ್ಯಾಸ್ ಪಂಪಿನಲ್ಲಿ ಪ್ರಯಾಣಿಕರು ಬಿಡು ಬಿಟ್ಟಿದ್ದು, ಊಟ ತಿಂಡಿ ಬಿಟ್ಟು ಕಾಯಬೇಕಾಯಿತು. ಔರಾದ್ ಪಟ್ಟಣದಿಂದ ಸುತ್ತಲು ಕನಿಷ್ಠ 40 ಕಿಮೀ ದೂರದವರೆಗೆ ಸಿಎನ್‌ಜಿ ಸಿಗುವುದಿಲ್ಲ ಹೀಗಾಗಿ ದೂರದಿಂದ ಬಂದ ವಾಹನಗಳ ಸವಾರರು ಪಕ್ಕದ ಸಾಯಿ ಮಂದಿರದಲ್ಲಿ ಅನೇಕರು ಮಕ್ಕಳೊಂದಿಗೆ ದಿನ ಕಳೆದು ಸಂಜೆ ಹೊತ್ತಿಗೆ ಬಂದ ಸಿಎನ್‌ಜಿ ಸ್ಟಾಕ್ ಬಂದಮೇಲೆ ತುಂಬಿಕೊಂಡು ಹೋಗಿದ್ದಾರೆ. ನೆರೆ ರಾಜ್ಯದ ಮಹಾರಾಷ್ಟ್ರದ ಉದಗೀರದಿಂದ ಬಂದ ಆಟೋ ಚಾಲಕರು ಸಂಜೆ ವರೆಗೆ ನಿತ್ಯ ಕಾಯಕ ಬಿಟ್ಟು ಸಿಎನ್‌ಜಿಗಾಗಿ ಕಾದು ಮರಳಿದರು.

3 ರಾಜ್ಯಗಳಲ್ಲಿ ಬಿಜೆಪಿ ಗೆಲುವಿಗೆ ಸಂಭ್ರಮ

ಕಮಲನಗರ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಅಭೂತಪೂರ್ವ ಸಾಧನೆ ಮಾಡಿರುವ ಹಿನ್ನಲೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಪಟ್ಟಣದಲ್ಲಿ ಸಂಭ್ರಮಾಚರಣೆ ನಡೆಸಿದರು.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಪಟ್ಟಣದ ಅಲ್ಲಮಪ್ರಭು ವೃತ್ತದ ಬಳಿ ಸೋಮವಾರ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು.

ಮುಖಂಡ ಬಾಲಾಜಿ ತೇಲಂಗ ಮಾತನಾಡಿ, ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಪುದುಚೇರಿ, ಆಸ್ಸಾಂ ರಾಜ್ಯಗಳಲ್ಲಿ ಬಿಜೆಪಿಯು ಐತಿಹಾಸಿಕ ಗೆಲುವು ಸಾಧಿಸಿದೆ. ದೇಶದ ಜನ ಪ್ರಧಾನಿ ಮೋದಿಯವರ ಆಡಳಿತ ಮೆಚ್ಚಿ ಮತ ನೀಡಿದ್ದಾರೆ ಎಂದು ಹೇಳಿದರು.

ಮುಖಂಡರಾದ ಶಿವಾನಂದ ವಡ್ಡೆ, ಶಿವಕುಮಾರ ಝುಲ್ಪೆ, ಚಂದ್ರಕಾಂತ ಸಂಗಮೆ, ನಾಗೇಶ ಪತ್ರೆ, ಸತೀಶ ಮಿರ್ಚೆ, ಅವಿನಾಶ ಶಿವಣಕರ್, ಸಂಜು ತಲವಾಡೆ, ಸಂಜು ನಿಟ್ಟೂರೆ, ರಂಗರಾವ ಜಾಧವ, ಅಮರ ಶಿವಣಕರ್, ಧನರಾಜ ಭವರಾ, ಶಿವು ಸಂಗಮೆ, ಎಸ್.ಎನ್ ಶಿವಣಕರ್, ರಾಜಕುಮಾರ ಗಾಯಕವಾಡ, ಬಾಲಾಜಿ, ರಾಜಕುಮಾರ, ಸುಭಾಷ ಗಾಯಕವಾಡ, ವೈಜಿನಾಥ ಗುಡ್ಡಾ, ರಾಜಹಂಸ ಶೇಟಕಾರ್ ಹಾಗೂ ಪ್ರಮುಖರು ಪಾಲ್ಗೊಂಡಿದ್ದರು.

ಮೋದಿ ನಾಯಕತ್ವಕ್ಕೆ ಜನಾದೇಶ

ಬಸವಕಲ್ಯಾಣ: ಪಂಚ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಗಳಿಸಿದೆ. ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವಕ್ಕೆ ದೊರಕಿದ ಜನಾದೇಶವಾಗಿದೆ ಎಂದು ಬಿಜೆಪಿ ಮುಖಂಡ ಪ್ರದೀಪ ವಾತಡೆ ಅಭಿಪ್ರಾಯಪಟ್ಟಿದ್ದಾರೆ. ಬಂಗಾಳದಲ್ಲಿ ಗೆಲುವು ರಾಷ್ಟ್ರದ ಗೆಲುವಾಗಿದೆ. ಬಿಜೆಪಿ, ಸಂಘ ಪರಿವಾರದ ಅಸಂಖ್ಯಾತ ಕಾರ್ಯಕರ್ತರ ತ್ಯಾಗ, ಬಲಿದಾನದ ಪ್ರತಿಫಲ ಇದಾಗಿದೆ. ಪಕ್ಷದ ಸಂಸ್ಥಾಪಕರಲ್ಲೊಬ್ಬರಾದ ಡಾ.ಶ್ಯಾಮಪ್ರಸಾದ ಮುಖರ್ಜಿ ಅವರು ಕಂಡ ಕನಸು ಸಹ ಇಂದು ನನಸುಗೊಂಡಿದೆ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳದ ಬಿಜೆಪಿ ಅಭೂತಪೂರ್ವ ಗೆಲುವು ದೇಶದ ಆಂತರಿಕ ಸುರಕ್ಷತೆಗೆ ದೊಡ್ಡ ಶಕ್ತಿ ಕೊಟ್ಟಂತಾಗಿದೆ. ಮಮತಾ ಬ್ಯಾನರ್ಜಿ ಆಡಳಿತದ ಭ್ರಷ್ಟಾಚಾರ, ಹಿಂದು ವಿರೋಧಿ ನೀತಿ, ದೌರ್ಜನ್ಯ, ದಬ್ಬಾಳಿಕೆ, ಅಲ್ಪಸಂಖ್ಯಾತರ ಅತಿಯಾದ ತುಷ್ಟೀಕರಣ, ಬಾಂಗ್ಲಾ ನುಸುಳುಕೋರರಿಗೆ ಮನ್ನಣೆಯಿಂದ ಇಡೀ ವ್ಯವಸ್ಥೆಯೇ ಹಾಳಾಗಿತ್ತು. ದೇಶ ವಿರೋಧಿ ಶಕ್ತಿಗಳಿಗೆ ಬಂಗಾಳದ ಜನರು ಮತಾಸ್ತ್ರದ ಮೂಲಕ ತಕ್ಕ ಪಾಠ ಕಲಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಬಿಜೆಪಿ ಎಲ್ಲ ಚುನಾವಣೆಗಳಲ್ಲಿ ಭರ್ಜರಿ ಜಯ ದಾಖಲಿಸುತ್ತಿದ್ದು, ಮುಂದೆ ಕರ್ನಾಟಕದಲ್ಲಿ ಕಮಲ ಅರಳಿ ಮತ್ತೆ ಅಧಿಕಾರಕ್ಕೇರುವುದು ನಿಶ್ಚಿತವಾಗಿದೆ ಎಂದು ಹೇಳಿದ್ದಾರೆ.

ಬೈಕ್ ಡಿಕ್ಕಿಯಲ್ಲಿ ಓರ್ವ ಸಾವು

ಔರಾದ್: ಪಟ್ಟಣದ ಉಪ ಬಂಧಿಖಾನೆ ಬಳಿ ಮಂಗಳವಾರ ಬೆಳಿಗ್ಗೆ ಎರಡು ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ಓರ್ವ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಔರಾದ್ ತಾಲೂಕಿನ ವಡಗಾಂವ(ದೇ) ಗ್ರಾಮದ ಮಹಾದೇವ ಖಳೂರೆ (50) ಮೃತ ಸವಾರು. ಇವರು ಔರಾದ್ ಪಟ್ಟಣದ ಭಾಲ್ಕಿ ಹಿರೇಮಠ ಸಂಸ್ಥಾನದ ಅಧೀನದ ಅನುಭವ ಮಂಟಪ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ ಕ್ಯಾಶಿಯರ್ ಇದ್ದರು. ಸ್ವಗ್ರಾಮ ವಡಗಾಂವನಿಂದ ಕರ್ತವ್ಯಕ್ಕೆ ತೆರಳುತ್ತಿದ್ದಾಗ ಎದುರಿನಿಂದ ಬಂದ ಬೈಕ್‌ನೊಂದಿಗೆ ಡಿಕ್ಕಿಯಾಗಿದೆ. ಡಿಕ್ಕಿಯಿಂದ ಜೋರಾಗೆ ಹೆದ್ದಾರಿ ಮೇಲೆ ಬಿದ್ದಿದ್ದ ಇವರ ತಲೆಗೆ ಗಂಭೀರ ಪೆಟ್ಟಾಗಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಜಹೀರಾಬಾದ್ ಮೂಲದ ಇನ್ನೊರ್ವ ಬೈಕ್ ಸವಾರನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮಹಾದೇವ ಅವರು ಹೆಲ್ಮೆಟ್ ಧರಿಸಿದ್ದರೆ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಡಿಕ್ಕಿ ಬಳಿಕ ಇವರು ನೆಲಕ್ಕೆ ಬಿದ್ದಾಗ ತಲೆಗೆ ಮಾತ್ರ ಪೆಟ್ಟಾಗಿ ಅಸುನೀಗಿದ್ದಾರೆ. ಔರಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಸ್ತೂರಿ ತಪ್ಪದೆ ಓದಿ

ಕನ್ನಡ ಸಂಘಟನೆಗಳ ಮಾತೃ ಸಂಸ್ಥೆ ಕಸಾಪ

ವಿಮರ್ಶಕ ಡಿ.ಎಂ.ನದಾಫ್ ಹೇಳಿಕೆ | ಅಫಜಲಪುರದಲ್ಲಿ ಕಸಾಪ ಸಂಸ್ಥಾಪನಾ ದಿನ

ಸಂ.ಕ.ಸಮಾಚಾರ ಅಫಜಲಪುರ: ಕನ್ನಡ ನುಡಿ, ಜಲ ಭಾಷೆ ಸಂರಕ್ಷಣೆಗಾಗಿ ನಾಡಿನಾದ್ಯಂತ ಅನೇಕ ಸಂಘಟನೆಗಳಿವೆ ಆ ಎಲ್ಲ ಸಂಘಟನೆಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಮಾತೃ ಸಂಸ್ಥೆಯಾಗಿ ಹೆಮ್ಮರವಾಗಿ ಬೆಳೆಯುತ್ತಿದೆ ಎಂದು ಕಸಾಪ ಮಾಜಿ ತಾಲೂಧ್ಯಕ್ಷ ಹಾಗೂ ವಿಮರ್ಶಕ ಡಿ.ಎಂ.ನದಾಫ್ ಹೇಳಿದರು.

ಪಟ್ಟಣದ ಕನ್ನಡ ಭವನದಲ್ಲಿ ಪರಿಷತ್ತಿನ 112 ನೇ ಸಂಸ್ಥಾಪನಾ ದಿನದ ಪ್ರಯುಕ್ತ ಹಿರಿಯ ಸದಸ್ಯರ ಸನ್ಮಾನ ಹಾಗೂ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ ಕ್ಷೇತ್ರದಲ್ಲಿ ಅನೇಕರಲ್ಲಿ ಸೈದ್ಧಾಂತಿಕವಾಗಿ ಅನೇಕ ಭಿನ್ನಾಭಿಪ್ರಾಯಗಳು ಇರಬಹುದು ಆದರೆ ಕನ್ನಡ ಭಾಷೆ, ನಾಡು-ನುಡಿ ಎನ್ನುವ ವಿಚಾರದಲ್ಲಿ ಎಲ್ಲರೂ ಭಿನ್ನಾಭಿಪ್ರಾಯಗಳು ಬಿಟ್ಟು ಕನ್ನಡದ ಶ್ರೇಷ್ಠತೆ ಮೆರೆಯಬೇಕು ಎಂದರು.

ಇನ್ನೂ ಪರಿಷತ್ತಿನ ಅಧೀನದಲ್ಲಿ ದತ್ತಿ ಉಪನ್ಯಾಸ ಹಾಗೂ ದತ್ತಿ ಬಹುಮಾನ ಕಾರ್ಯಕ್ರಮಗಳು ಚುರುಕುಗೊಳಿಸಬೇಕು. ಇಲ್ಲಿಯವರೆಗೆ ರಾಜ್ಯ ಪರಿಷತ್ತಿನಲ್ಲಿ 140 ಕ್ಕೂ ಹೆಚ್ಚು ದತ್ತಿಗಳಿವೆ. ಅವುಗಳು ನಾಡಿನೆಲ್ಲೆಡೆ ನಡೆಯಬೇಕು. ದತ್ತಿ ಉಪನ್ಯಾಸದ ಹಣವನ್ನು ಸಾಹಿತ್ಯಿಕವಾಗಿ ಸದುಪಯೋಗವಾಗಬೇಕು. ಸಾಹಿತ್ಯ ಕ್ಷೇತ್ರದಲ್ಲಿ ದತ್ತಿ ಬಹುಮಾನ ನಿರಂತರವಾಗಿ ನೀಡಬೇಕು ಎಂದರು.

ಅಫಜಲಪುರ ಪಟ್ಟಣದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಹಿರಿಯ ಸದಸ್ಯರ ಸನ್ಮಾನ ಹಾಗೂ ಕವಿಗೋಷ್ಠಿ ಕಾರ್ಯಕ್ರಮ ಜರುಗಿತು.

ಮಹಿಳಾ ಲೇಖಕಿ ಅನುಮಪಾ ಅಪಗೊಂಡೆ ಮಾತನಾಡಿ, ತಾಲೂಕಿನಲ್ಲಿ ಹೆಚ್ಚೆಚ್ಚು ಸೃಜನಶೀಲ ಕವಿಗಳು ಉದಯಿಸಬೇಕು. ಇತ್ತಿಚೀನ ಬೆಳವಣಿಗೆಯಲ್ಲಿ ಮಹಿಳಾ ಲೇಖಕಿಯರು ಹೆಚ್ಚಾಗಿ ಗುರಿತಿಸಿಕೊಳ್ಳುತ್ತಿರುವುದು ಸಂತಸವನ್ನುಂಟು ಮಾಡಿದೆ ಎಂದರು.

> **ಪರಿಷತ್ತಿನ ವತಿಯಿಂದ ಕನ್ನಡ ಕಾವ್ಯ, ರತ್ನ, ಜಾಣ ಪರೀಕ್ಷೆಗಳು ನಡೆಸಲಾಗುತ್ತಿದೆ ಇದರಿಂದ ಉನ್ನತ ಶಿಕ್ಷಣಕ್ಕೆ ಹಾಗೂ ಉದ್ಯೋಗ ಪಡೆಯಲು ಅನುಕೂಲವಾಗಲಿದೆ. ಈ ಕುರಿತು ಇನ್ನೂ ಹೆಚ್ಚಿನ ಪ್ರಚಾರ ನಡೆಯಬೇಕಿದೆ.**
> **■ ಡಿ.ಎಂ.ನದಾಫ್,**
> **ಮಾಜಿ ತಾಲೂಕಾಧ್ಯಕ್ಷ, ಕಸಾಪ**

ಹಿರಿಯ ಸಾಹಿತಿ ಮುನೀರ್ ಪಟೇಲ್ ಮಾತನಾಡಿ, ತಾಲೂಕಿನಲ್ಲಿ ಕಸಪಾ ಘಟಕವು ಬಹಳ ಕ್ರಿಯಾಶೀಲವಾಗಿದೆ. ಸಾಹಿತ್ಯಾಸಕ್ತರ ಸಲಹೆ ಮತ್ತು ಸಹಕಾರ ಪಡೆದು ಅರ್ಥಪೂರ್ಣ ಕಾರ್ಯಕ್ರಮ ಮಾಡುತ್ತಿದ್ದಾರೆ. ತಾಲೂಕಿನಲ್ಲಿ ಪರಿಷತ್ತಿನಲ್ಲಿ ನಾಲ್ಕು ದಶಕಗಳ ಕಾಲ ದುಡಿದ ಹಿರಿ ತಲೆಮಾರಿನ ಸಾಹಿತ್ಯ ಸಂಘಟಕರನ್ನು ಗುರುತಿಸಿ ಸನ್ಮಾನಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಯುವಕರು ಕನ್ನಡದ ಕುರಿತಾಗಿ ಹೆಚ್ಚಿನ ಆಸಕ್ತಿ ತೋರಬೇಕು ಎಂದರು.

ಮಾಜಿ ಕಸಾಪ ತಾಲೂಕಾಧ್ಯಕ್ಷ ಮುರಗೇಂದ್ರ ಮಸಳಿ ಪ್ರಾಸ್ತಾವಿಕ ಮಾತನಾಡಿದರು. ಕಸಾಪ ಅಧ್ಯಕ್ಷ ಪ್ರಭಾವತಿ ಮೇತ್ರಿ ಅಧ್ಯಕ್ಷತೆ ವಹಿಸಿದರು. ವಕೀಲರ ಸಂಘದ ತಾಲೂಕಾಧ್ಯಕ್ಷ ಅರ್ಜುನ ಕೇರೂರ ಕಾರ್ಯಕ್ರಮ ಉದ್ಘಾಟಿಸಿದರು.

ಹಿರಿಯ ಮುಖಂಡರಾದ ಮೃತ್ಯುಂಜಯ ಕಳ್ಳಿಮಠ, ಮಲ್ಲಿನಾಥ ಆಲೇಗಾಂವ, ಬಸಣ್ಣ ಗುಣಾರಿ, ಗುರಣ್ಣ ಪಡಶೆಟ್ಟಿ, ಜಗದೇವಪ್ಪ ಅಂಜುಟಗಿ, ಶೇಕಪ್ಪ ಮಾಸ್ತಾರ ಜೋಗೂರ, ಬಿ.ಎಂ.ರಾವ್, ಗೋಪಾಲ ಹಳ್ಯಾಳ, ಚಿನ್ನು ಮನಿಯಾರ, ಗೌತಮ ಸಕ್ಕರಗಿ, ಬಿ.ಡಿ.ಅಂಜುಟಗಿ, ಭಾಗ್ಯಶ್ರೀ ಹಳ್ಯಾಳ, ಸುಶ್ಮೀತಾ ಅತ್ತೆ, ಐಶ್ವರ್ಯ ಡಿ.ರೇವೂರ, ಚಂದ್ರ ಜಮಶೆಟ್ಟಿ ಇದ್ದರು.

ಕಸಾಪ ಗೌರವ ಕಾರ್ಯದರ್ಶಿಗಳಾದ ಡಾ.ಸಂಗಣ್ಣ ಎಂ.ಸಿಂಗೆ ನಿರೂಪಿಸಿದರು. ಪರಮಾನಂದ ಸರಸಂಬಿ ಸ್ವಾಗತಿಸಿದರು. ಪ್ರತಿಭಾ ಮಹಿಂದ್ರಕರ್ ವಂದಿಸಿದರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಭಾರಿ ತಯಾರಿ

ಶಾಸಕ ಬೆಲ್ದಾಳೆ ನೇತೃತ್ವದಲ್ಲಿ ಪೂರ್ವಭಾವಿ ಸಭೆ | ಭಾಲ್ಕಿ ಪಟ್ಟದ್ದೇವರಿಗೆ ಆಹ್ವಾನ

ಸಂ.ಕ.ಸಮಾಚಾರ ಬೀದರ್: ಇದೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಜೆಪಿ ಹಿರಿಯ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯ ಜನರಿಗೆ ಸೇರಿಸುವ ನಿಟ್ಟಿನಲ್ಲಿ ಕೇಸರಿ ಪಡೆ ಬೀದರ್ ಜಿಲ್ಲೆಯಲ್ಲೂ ಭರ್ಜರಿ ಸಿದ್ಧತೆ ನಡೆಸಿದೆ.

ಅಭಿಮಾನೋತ್ಸವ ಜಿಲ್ಲಾ ಉಸ್ತುವಾರಿಯೂ ಆಗಿರುವ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಅವರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ. ಜಿಲ್ಲೆಯ ಪ್ರತಿ ವಿಧಾನಸಭೆ ಕ್ಷೇತ್ರಗಳಿಂದ 1500ರಂತೆ ಒಟ್ಟು ಆರು ಕ್ಷೇತ್ರಗಳಿಂದ 9 ಸಾವಿರ ಕಾರ್ಯಕರ್ತರಿಗೆ ಕಾರ್ಯಕ್ರಮಕ್ಕೆ ಒಯ್ಯಲು ತಯಾರಿಗಳು ನಡೆದಿವೆ. ಜಿಲ್ಲೆಯ ಪ್ರಮುಖ ಮಠಾಧೀಶರಿಗೂ ಕಾರ್ಯಕ್ರಮದ ಸಾನಿಧ್ಯ ವಹಿಸಿ, ಹಿರಿಯ ಜೀವಿಗೆ ಆಶೀರ್ವದಿಸಲು ಆಹ್ವಾನಿಸಲಾಗುತ್ತಿದೆ.

ಅಭಿಮಾನೋತ್ಸವ ಸಂಬಂಧ ಮಂಗಳವಾರ ಇಲ್ಲಿ ಬೀದರ್ ದಕ್ಷಿಣ ಮಂಡಲದ ಪ್ರಮುಖರ ಸಭೆ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ನೇತೃತ್ವದಲ್ಲಿ ನಡೆಯಿತು. ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50 ವರ್ಷಗಳ ಸಾರ್ಥಕ ಪಯಣದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಅಭಿಮಾನೋತ್ಸವ ನಡೆಯುತ್ತಿದೆ. ನಾಡಿನ ಎಲ್ಲೆಡೆಯಿಂದ ಲಕ್ಷಾಂತರ ಜನರು ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ. ಬೀದರ್ ಜಿಲ್ಲೆಯಿಂದಲೂ ಹೆಚ್ಚಿನ ಕಾರ್ಯಕರ್ತರು ಆಗಮಿಸಬೇಕು ಎಂದರು.

ದಕ್ಷಿಣ ಕ್ಷೇತ್ರದ ಉಸ್ತುವಾರಿ, ಬಿಜೆಪಿ ಯುವ ಮುಖಂಡ ಸೂರ್ಯಕಾಂತ ಚಿಲ್ಲಾಬಟ್ಟೆ ಮಾತನಾಡಿ, ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿ, ಬೆಳೆಸಿದ ಮತ್ತು ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದ ಮೂಲಕ ಬಿಜೆಪಿಗೆ ಅಧಿಕಾರ ತಂದುಕೊಟ್ಟ ಶ್ರೇಯ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಅವರ ಸಿಎಂ ಅವಧಿಯಲ್ಲಿ ಅನೇಕ ಚರಿತ್ರಾರ್ಹ ಕೆಲಸಗಳು ಮಾಡಿದ್ದಾರೆ. ನಾಡಿಗೆ ಅವರ ಕೊಡುಗೆ ಅಪಾರ, ಅವಿಸ್ಮರಣೀಯವಿದೆ. ಇಂಥ ಕಾರ್ಯಕ್ರಮ ಕಣ್ತುಂಬಿಕೊಳ್ಳುತ್ತಿರುವುದೇ ನಮ್ಮೆಲ್ಲದ ಸುದೈವ ಎಂದು ಹೇಳಿದರು.ದಕ್ಷಿಣ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರಾ ಬಗದಲ್ ಅಧ್ಯಕ್ಷತೆ ವಹಿಸಿದ್ದರು. ಸಹ ಉಸ್ತುವಾರಿ ರಾಜಕುಮಾರ ನೆಮತಾಬಾದೆ, ಪ್ರಮುಖರಾದ ಚಂದ್ರಯ್ಯ ಸ್ವಾಮಿ, ಸಂಜುಕುಮಾರ ಕೋಳಿ, ರಾಜರೆಡ್ಡಿ ಶಾಬಾದ್, ಹೇಮಾ ತುಕ್ಕಾರೆಡ್ಡಿ, ಮಾಣಿಕಪ್ಪ ಖಾಶೆಂಪುರ, ಜಗನ್ನಾಥ ಪಾಟೀಲ್ ಸಿರಕಟನಳ್ಳಿ, ಸುರೇಶ ಮಾಶೆಟ್ಟಿ, ಶಿವಕುಮಾರ ಸ್ವಾಮಿ, ಬಾಬುರಾವ ಮಲ್ಕಾಪುರೆ, ಹಣಮಂತರಾವ ಪಾಟೀಲ್ ಬನ್ನಳ್ಳಿ, ಹಣಮಂತರಾವ ಮೈಲಾರೆ, ಸಂತೋಷಿ ನಿಡವಂಚಾ, ಶ್ರೀನಿವಾಸ ಪೊದ್ದಾರ್, ಮಲ್ಲಿಕಾರ್ಜುನ ಪಾಟೀಲ್, ಸಂತೋಷ ಹಳ್ಳಿಖೇಡ್ ಇತರರಿದ್ದರು. ಈ ವೇಳೆ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಎಂಎಲ್ಸಿ ಚುನಾವಣೆ ಪೂರ್ವಸಿದ್ಧತೆ ಪರಿಶೀಲನೆಯೂ ನಡೆಯಿತು.

ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವದ ಸಾನಿಧ್ಯ ವಹಿಸುವಂತೆ ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷರಾದ ನಾಡೋಜ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹಾಗೂ ಭಾಲ್ಕಿ ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರಿಗೆ ಮಂಗಳವಾರ ಆಹ್ವಾನ ನೀಡಲಾಯಿತು. ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಭಾಲ್ಕಿ ಮಂಡಲ ಅಧ್ಯಕ್ಷ ವೀರಣ್ಣ ಕಾರಬಾರಿ ಇದ್ದರು.

> **ಪಶ್ಚಿಮ ಬಂಗಾಳದ ಐತಿಹಾಸಿಕ ಗೆಲುವು ಕಾರ್ಯಕರ್ತರಿಗೆ ದೊಡ್ಡ ಶಕ್ತಿ ನೀಡಿದೆ. ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಮಹತ್ವವನ್ನು ಎಲ್ಲರೂ ಅರಿಯಬೇಕು. ನಮ್ಮ ಪ್ರತಿಯೊಬ್ಬ ಕಾರ್ಯಕರ್ತರು ಎಸ್‌ಐಆರ್ ಬಗ್ಗೆ ಗಂಭೀರವಾಗಿದ್ದು, ಯಾವೊಬ್ಬ ಅನರ್ಹರು ಮತಪಟ್ಟಿಯಲ್ಲಿ ಇರದಂತೆ ಹಾಗೂ ಅರ್ಹರು ಮತಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು.**
> **■ ಡಾ.ಶೈಲೇಂದ್ರ ಬೆಲ್ದಾಳೆ,** ಶಾಸಕ

ಅರಾಜಕತೆಗೆ ಬಂಗಾಳಿಯರ ಅಚಿಂತ್ಯ

ಬೀದರ್: ಪಂಚ ರಾಜ್ಯ ಚುನಾವಣೆಯಲ್ಲಿ ಮತದಾರರು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಜನಪರ ಹಾಗೂ ಪಾರದರ್ಶಕ ಯೋಜನೆಗಳ ಆಡಳಿತಕ್ಕೆ ಮನ್ನಣೆ ನೀಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅರಾಜಕತೆ, ಅನಾಗರಿಕತೆ, ಗುಂಡಾ ಹಾಗೂ ಜಂಗಲ್ ರಾಜ್‌ಗೆ ಮತದಾರರು ಅಂತ್ಯ ಹಾಡಿದ್ದಾರೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ವಿಜಯಕುಮಾರ ಪಾಟೀಲ್ ಗಾದಗಿ ಹೇಳಿದ್ದಾರೆ. ಮತದಾರರು ರಾಷ್ಟ್ರೀಯ ವಿಚಾರಗಳಿಗೆ, ಹಿಂದುತ್ವಕ್ಕೆ ಬೆಂಬಲಿಸಿದ್ದು, ವಿಕಸಿತ ಭಾರತಕ್ಕೆ ಕೈಜೋಡಿಸಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಬಿಜೆಪಿ ಗೆಲ್ಲಲು ಪಂಚ ರಾಜ್ಯಗಳ ಫಲಿತಾಂಶ ದಿಕ್ಸೂಚಿಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ

ರಾಯಚೂರು: ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ ಎಸ್ ಅವರನ್ನು ವರ್ಗಾವಣೆ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ ಪ್ರಸನ್ನ ಕುಮಾರ ವಿ ಅವರು ಆದೇಶ ಹೊರಡಿಸಿದ್ದಾರೆ.

ಅವರ ಸ್ಥಳಕ್ಕೆ ರಾಯಚೂರು ಜಿಲ್ಲಾಧಿಕಾರಿಯಾಗಿದ್ದ ನಿತೀಶ್ ಕೆ ಅವರನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ವಿಷ ಸೇವಿಸಿ ರೈತ ಆತ್ಮಹತ್ಯೆ

ಕಲಬುರಗಿ: ಸಾಲಬಾಧೆ ತಾಳಲಾರದೆ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿರುವ ದಾರುಣ ಘಟನೆ ಜೇವರ್ಗಿ ತಾಲ್ಲೂಕಿನ ಮಂದೇವಾಲ್ ಗ್ರಾಮದಲ್ಲಿ ನಡೆದಿದೆ.

ಶಿವಪುತ್ರಪ್ಪ ಚಂದ್ರಾಮ ನಾಟೀಕಾರ (50) ಎಂಬ ರೈತ ಆತ್ಮಹತ್ಯೆ ಮಾಡಿಕೊಂಡವರು. ಕೃಷಿ ಚಟುವಟಿಕೆಗಳಿಗಾಗಿ ಎಸ್‌ಬಿಐ ಬ್ಯಾಂಕ್‌ನಲ್ಲಿ 1. 50 ಲಕ್ಷ ಹಾಗೂ ಖಾಸಗಿಯಾಗಿ 2-3 ಲಕ್ಷ ರೂ. ಸಾಲ ಮಾಡಿಕೊಂಡಿದ್ದ. ಮೃತನಿಗೆ ಮೂವರು ಮಕ್ಕಳಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ನೇಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದುವೆ ಮಂಟಪದಲ್ಲಿ 40 ಸಾವಿರ ಕಳವು

ಕಲಬುರಗಿ: ಸಂಬಂಧಿಕರ ಮದುವೆಗೆ ತೆರಳಿದ್ದ ನಿವೃತ್ತ ನೌಕರರೊಬ್ಬರ ಜೇಬಿನಲ್ಲಿದ್ದ 40 ಸಾವಿರ ನಗದು ದೋಚಿಕೊಂಡು ಹೋಗಿರುವ ಘಟನೆ ಕೋಟನೂರ ಡಿ ಗ್ರಾಮದ ಶುಭಂಕಲ್ಯಾಣ ಮಂಟಪದಲ್ಲಿ ನಡೆದಿದೆ. ತೆಲ್ಕರ್ ಕಾಲೋನಿ ನಿವಾಸಿ ಹಾಗೂ ನಿವೃತ್ತ ಸರ್ಕಾರಿ ನೌಕರ ಮಾಣಿಕಪ್ಪ ಕುಂಬಾರ ಎಂಬಾತರೇ ಹಣ ಕಳೆದುಕೊಂಡವರು. ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ಬಿಆರ್‌ನಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನ

ಬಸವಕಲ್ಯಾಣ ಎಸ್‌ಬಿಆರ್ ಪಬ್ಲಿಕ್ ಸ್ಕೂಲ್‌ನಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಅಗ್ರಶ್ರೇಣಿಯಲ್ಲಿ ಪಾಶದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಡಾ.ಬಸವರಾಜ ಎವಲೆ ಪ್ರಾಚಾರ್ಯ ಡಾ. ವಿದ್ಯಾಧರ್ ಡಿ, ರಾಜಕುಮಾರ್ ಮಾಡಗೆ ಉಪಸ್ಥಿತರಿದ್ದರು

ಸಂ.ಕ.ಸಮಾಚಾರ ಬಸವಕಲ್ಯಾಣ ವಿದ್ಯಾರ್ಥಿಗಳು ಯಶಸ್ಸು ಕಾಣಲು ನಿಯಮಿತ ಅಭ್ಯಾಸ, ಪರಿಶ್ರಮ ಹಾಗೂ ಶಿಕ್ಷಕರ ಸೂಕ್ತ ಮಾರ್ಗದರ್ಶನ ಅವಶ್ಯಕ ಎಂದು ಎಸ್‌ಎಸ್‌ಕೆಬಿ ಕಾಲೇಜು ಕ್ಯಾಂಪಸ್ ನಿರ್ದೇಶಕ ಡಾ.ಬಸವರಾಜ ಎವಲೆ ಹೇಳಿದರು.

ಕಲಬುರಗಿಯ ಶರಣಬಸವೇಶ್ವರ ವಿದ್ಯಾವರ್ದಕ ಸಂಘದ ಅಡಿ ನಗರದಲ್ಲಿ ನಡೆಯುವ ಎಸ್‌ಬಿಆರ್ ಪಬ್ಲಿಕ್ ಸ್ಕೂಲ್‌ನಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಅಗ್ರಶ್ರೇಣಿಯಲ್ಲಿ ಪಾಶದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶ್ರಮ ವಹಿಸಿ ಅಭ್ಯಾಸ ಮಾಡುತ ಟಗಟಇ ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಜತೆಗೆ ಸಮಾಜಕ್ಕೆ ಕೊಡುಗೆ ನೀಡಬೇಕು ಎಮದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ ಎಸ್‌ಬಿಆರ್ ಪ್ರಾಚಾರ್ಯ ಡಾ. ವಿದ್ಯಾಧರ್ ಡಿ ಮಾತನಾಡಿ, ವಿದ್ಯಾರ್ಥಿಗಳ ಶ್ರಮ ಮತ್ತು ಶಿಕ್ಷಕರ ಪ್ರಯತ್ನದಿಂದಾಗಿ ಉತ್ತಮ ಫಲಿತಾಂಶ ಬಂದಿದೆ. ಸಾಧನೆಗೆ ಮನಸ್ಸು ಮತ್ತು ಪ್ರಯತ್ನ ಮುಖ್ಯ. ಸಮಯ ಸೌಲಭ್ಯ ಬಳಸಿಕೊಂಡು ವಿದ್ಯಾಥಿಗಳು ಶ್ರಮ ವಹಿಸಿ ಅಭ್ಯಾಸ ಮಾಡಬೇಕು. ಅಂದಾಗ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು. ಪತ್ರಕರ್ತ ಜೋಶಿ ಮಾತನಾಡಿದರು ಪ್ರಾಚಾರ್ಯ ರಾಜಕುಮಾರ್ ಮಾಡಗೆ,. ಚಂದ್ರಕಾಂತ ಸ್ವಾಮಿ, ಅಕ್ಷತಾ ಮಠಪತಿ, ನಿರ್ಮಾಲಾ ಘೋಡವಾಡೆ, ಶಾಂತಮ್ಮ ಬಿರಾದಾರ, ಶಿವಾನಂದ ಬಿರಾದಾರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕರು ಭಾಗವಹಿಸಿದ್ದರು. ಅಕ್ಷತಾ ಮಠಪತಿ ಹಾಗೂ ನಿರ್ಮಲಾ ಘೋಡವಾಡೆ ಸ್ವಾಗತಿಸಿ, ನಿರೂಪಣೆ ಮಾಡಿದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಗ್ಯಾಸ್ ಲಿಕೇಜ್‌ನಿಂದ ಹೊತ್ತಿದ ಬೆಂಕಿ: ತಪ್ಪಿದ ದುರಂತ

ಸಂ.ಕ.ಸಮಾಚಾರ ಬೀದರ್: ಮನೆಗಳಿಗೆ ನಿರಂತರ ಸರಬರಾಜು ಮಾಡುವ ಪಿಎನ್‌ಜಿ ಗ್ಯಾಸ್ ಪೈಪ್‌ಲೈನ್‌ನಲ್ಲಿ ಲಿಕೇಜ್ ಆಗಿ ಬೆಂಕಿ ಹೊತ್ತಿಕೊಂಡು ಕೆಲಕಾಲ ಭಯಾತಂಕ ಸೃಷ್ಟಿಸಿದ ಘಟನೆ ಮಂಗಳವಾರ ಬೆಳಿಗ್ಗೆ ಬೀದರ್‌ನ ಉದಗೀರ್ ರಸ್ತೆಯ ಕಾಮತ್ ಹೋಟೆಲ್ ಹಿಂಭಾಗದ ಸರ್ದಾರ್ ವಲ್ಲಭಭಾಯಿ ಪಟೇಲ್ ಕಾಲೋನಿಯಲ್ಲಿ ನಡೆದಿದೆ.

ನಗರದ ವಿವಿಧೆಡೆ ಮನೆಗಳಿಗೆ ಭಾರತ್ ಗ್ಯಾಸ್ ಸಂಸ್ಥೆಯು ಪೈಪ್‌ಲೈನ್‌ನಿಂದ ಪಿಎನ್‌ಜಿ ನೇರ ಅಡುಗೆ ಅನಿಲ ಸಂಪರ್ಕವಿದೆ. ಇಲ್ಲಿ ಹಾದುಹೋಗಿರುವ ಗ್ಯಾಸ್ ಪೈಪ್‌ಲೈನ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಮೊದಲು ಸ್ವಲ್ಪ ಬೆಂಕಿ ಕಾಣಿಸಿಕೊಂಡು ನಂತರ ಧಗಧಗನೇ ಹೊತ್ತಿ ಉರಿದಿದೆ. ಆರೇಳು ಅಡಿಗಿಂತ ಹೆಚ್ಚು ಉದ್ದ ಅತೀ ದಟ್ಟನೆ ಉರಿ, ಜ್ವಾಲೆ ಕಾಣಿಸಿಕೊಂಡಿತು. ಇದೇ ವೇಳೆ ಸ್ಥಳದಲ್ಲಿ ಜೆಸ್ಕಾಂ ಲೈನ್‌ಮೆನ್ ಇದ್ದರು. ಇವರು ಕೂಡಲೇ ಈ ಪ್ರದೇಶದ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ.

ಬೆಂಕಿ ಧಗಧಗನೇ ಉರಿಯುತ್ತಿದ್ದರಿಂದ ಅಕ್ಕಪಕ್ಕದ ಮನೆಯವರು ಗಾಬರಿಗೊಂಡರು. ಬೆಂಕಿ ಮತ್ತಷ್ಟು ಕಡೆಗೆ ವ್ಯಾಪಿಸಬಹುದು ಎಂಬ ಭಯದಿಂದ ಅನೇಕರು ಮನೆಯಿಂದ ಹೊರಗಡೆ ಓಡಿಬಂದರು. ಸ್ಥಳೀಯರು ಕೂಡಲೇ ಅಗ್ನಿಶಾಮಕ ದಳದವರಿಗೆ ಹಾಗೂ ಭಾರತ್ ಗ್ಯಾಸ್ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದ್ದಾರೆ. ತಕ್ಷಣವೇ ಅಗ್ನಿಶಾಮಕ ಟೀಮ್ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿತು. ಗ್ಯಾಸ್ ಬೆಂಕಿಯಿರುವ ಕಾರಣ ನೀರು ಬಿಟ್ಟರೆ ನಂದಲಿಲ್ಲ. ಗ್ಯಾಸ್ ಅಗ್ನಿಗೆ ಬಳಸುವ ರಸಾಯನಿಕ ಬಳಸಿ ದ್ರಾವಣ ಸಿಂಪಡಣೆ ಮೂಲಕ ಅಗ್ನಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು.

ಗ್ಯಾಸ್ ಸಂಸ್ಥೆಯವರು ಬೇಗ ಫೋನ್ ಕರೆ ಸ್ವೀಕರಿಸಲಿಲ್ಲ. ಸ್ಥಳಕ್ಕೆ ತಕ್ಷಣಕ್ಕೆ ಬರಲಿಲ್ಲ. ಹೀಗಾಗಿ ಬೆಂಕಿ ಹೊತ್ತಿಕೊಂಡ ಸಮಯದಲ್ಲಿ ಸುತ್ತಲಿನ ಜನರಲ್ಲಿ ಆತಂಕ ಮನೆ ಮಾಡಿತ್ತು. ಗ್ಯಾಸ್ ಸಂಸ್ಥೆ ಸಿಬ್ಬಂದಿ ನಂತರ ಸ್ಥಳಕ್ಕೆ ಬಂದಾಗ ಸ್ಥಳೀಯರ ಅವರನ್ನು ತರಾಟೆಗೆ ತೆಗೆದುಕೊಂಡರು. ಈ ವೇಳೆ ಗ್ಯಾಸ್ ಸಂಸ್ಥೆ ಸಿಬ್ಬಂದಿ ಮೊಂಡುತನದಿಂದ ಮಾತನಾಡಿದ್ದಾರೆ. ತುರ್ತು ಸಮಸ್ಯೆ ವೇಳೆಗೂ ಸ್ಪಂದಿಸದೇ ಸ್ಥಳೀಯರಿಗೆ ಗುರಾಯಿಸುವ ಕೆಲಸ ಮಾಡಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.ಬೆಂಕಿ ಹೊತ್ತಿಕೊಂಡ ಪಕ್ಕದಲ್ಲೇ ವಿದ್ಯುತ್ ಟ್ರಾನ್ಸಫರ್ಮರ್ ಇದೆ. ಗ್ಯಾಸ್ ವಾಲ್ವ್ ಸಹ ಇದೆ. ಏನಾದರೂ ಸ್ವಲ್ಪ ಹೆಚ್ಚು ಕಮ್ಮಿಯಾದರೆ ದೊಡ್ಡ ಅವಘಡವೇ ನಡೆಯುತ್ತಿತ್ತು. ಇದು ಸಾಕಷ್ಟು ಮನೆಗಳಿಗೆ ಜನವಸತಿ ಪ್ರದೇಶವಾಗಿದೆ. ಗ್ಯಾಸ್ ಸಂಸ್ಥೆಯವರೇ ನಿರ್ಲಕ್ಷ್ಯವೇ ಘಟನೆಗೆ ಕಾರಣ ಎಂದು ಸ್ಥಳೀಯರು ದೂರಿದ್ದಾರೆ. ನಾಲ್ಕೈದು ಸಹಾಯವಾಣಿ ಸಂಖ್ಯೆ ನೀಡಿದರೂ ಒಂದೂ ಕೆಲಸ ಮಾಡದಿರುವುದು ಸಂಸ್ಥೆಯವರ ನಿರ್ಲಕ್ಷಕ್ಕೆ ಸಾಕ್ಷಿಯಾಗಿದೆ ಎಂದು ಕಿಡಿಕಾರಿದರು.

ಬೀದರ್ ನಗರದ ಕಾಮತ್ ಹೋಟೆಲ್ ಹಿಂಭಾಗದಲ್ಲಿ ಗ್ಯಾಸ್ ಸರಬರಾಜು ಪೈಪ್‌ಲೈನ್‌ನಲ್ಲಿ ಏಕಾಏಕಿ ಬೆಂಕಿ ಹೊತ್ತಿಕೊಂಡು ಧಗಧಗ ಉರಿಯುತ್ತಿರುವುದು

ಪಿಡಿಒಗಳಿಗೆ ಅತೀವ ಒತ್ತಡ ಸಲ್ಲದು

ಕೊತಬಾಳ ಪಿಡಿಒ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣ ಸಮಗ್ರ ತನಿಖೆಗೆ ಒತ್ತಾಯ

ಸಂ.ಕ.ಸಮಾಚಾರ ಬೀದರ್: ಗದಗ ಜಿಲ್ಲೆಯ ರೋಣ ತಾಲೂಕಿನ ಕೊತಬಾಳ ಗ್ರಾಪಂ ಪಿಡಿಒ ಮುಕ್ತಂಹುಸೇನ್ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣ ಬಗ್ಗೆ ಸಮಗ್ರ ತನಿಖೆಯಾಗಿ ಅವರಿಗೆ ನ್ಯಾಯ ಒದಗಿಸಲು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

ಶರತಕುಮಾರ ಅಭಿಮಾನ್ ನೇತೃತ್ವದಲ್ಲಿ ಸಂಘದ ಪ್ರಮುಖರು ಮಂಗಳವಾರ ಜಿಪಂ ಸಿಇಒ ಮುಖಾಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಮನವಿ ಪತ್ರವನ್ನು ರವಾನಿಸಿ, ಈ ಪ್ರಕರಣ ಕೇವಲ ಕೊತಬಾಳ ಪಿಡಿಒ ದುರಂತವಲ್ಲ. ಇದು ಇಡೀ ರಾಜ್ಯದಲ್ಲಿರುವ ಪಿಡಿಒಗಳು ಎದುರಿಸುತ್ತಿರುವ ನೈಜ ಮತ್ತು ಭೀಕರ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಗ್ರಾಮೀಣಾಭಿವೃದ್ಧಿಯ ಆಧಾರಸ್ತಂಭವಾಗಿರುವ ಪಿಡಿಒಗಳು ಇಂದು ತೀವ್ರವಾದ ಕೆಲಸದ ಒತ್ತಡದಲ್ಲಿ ನಲುಗಿ ಜೀವಕ್ಕೆ ವಿದಾಯ ಹೇಳುತ್ತಿರುವುದು ದುರದೃಷ್ಟಕರ ಸಂಗತಿ ಎಂದಿದ್ದಾರೆ.

ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ನೌಕರರ ಮೇಲೆ ನಡೆಯುತ್ತಿರುವ ನಿರಂತರ ಒತ್ತಡಗಳು ಹಾಗೂ ಸಂಭವಿಸುತ್ತಿರುವ ಅಕಾಲಿಕ ಸಾವುಗಳ ಕುರಿತು ಅಧ್ಯಯನ ಮಾಡಲು ಕಳೆದ ಒಂದು ವರ್ಷದ ಹಿಂದೆ ಮೀನಾಕ್ಷಿ ಸುಂದರಂ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತು. ಆದರೆ ಈ ಸಮಿತಿಯು ಇದುವರೆಗೂ ಸರ್ಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ. ನೌಕರರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಇಂತಹ ವ್ಯವಸ್ಥಿತ ಒತ್ತಡಗಳನ್ನು ತಡೆಯಲು ಈ ವರದಿ ಅತ್ಯಂತ ಅವಶ್ಯಕವಾಗಿದೆ ಎಂದು ಹೇಳಿದ್ದಾರೆ.

ಒತ್ತಡ ರಹಿತ ಕೆಲಸದ ವಾತಾವರಣ, ಹಿರಿಯ ಅಧಿಕಾರಿಗಳಿಂದ ಸಹಕಾರ, ಕ್ಷುಲ್ಲಕ ಕಾರಣಗಳಿಗೆ ಪಿಡಿಒಗಳ ಅಮಾನತ್ತು ನಿಲ್ಲಬೇಕು. ಕಾಲಮಿತಿಯೊಳಗೆ ತನಿಖೆ ಹಾಗೂ ಅಮಾನತ್ತು ತೆರವು, ಮೀನಾಕ್ಷಿ ಸುಂದರಂ ಸಮಿತಿ ವರದಿ ಪಡೆಯಬೇಕು. ದಾಖಲೆ ರಹಿತ ಮತ್ತು ಆನ್‌ಲೈನ್ ಎಂಐಎಸ್ ವರದಿಗಳ ಆಧಾರದ ಮೇಲೆ ಬರುವ ದೂರುಗಳನ್ನು ತನಿಖೆ ಮಾಡುವುದು, ಇಲಾಖಾ ವಿಚಾರಣೆ ಮಾಡುವುದನ್ನು ನಿಲ್ಲಿಸಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಸಲು ಒತ್ತಾಯಿಸಲಾಗಿದೆ.

ಗದಗ ಜಿಲ್ಲೆಯ ಕೊತಬಾಳ ಗ್ರಾಪಂ ಪಿಡಿಒ ಮುಕ್ತಂಹುಸೇನ್ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣದ ಸಮಗ್ರ ತನಿಖೆಗೆ ಆಗ್ರಹಿಸಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಬೀದರ್ ಜಿಪಂ ಸಿಇಒ ಮೂಲಕ ಮಂಗಳವಾರ ಪಂಚಾಯತ್ ರಾಜ್ ಸಚಿವರಿಗೆ ಮನವಿಪತ್ರ ರವಾನಿಸಿತು. ಶರತಕುಮಾರ ಅಭಿಮಾನ್, ದೇವಪ್ಪ ಇತರರಿದ್ದರು.

ವಿಜಿ ರಾಮ್ ಜೀ ರದ್ದತಿಗೆ ಆಗ್ರಹ

ಸಂ.ಕ.ಸಮಾಚಾರ ಹುಮನಾಬಾದ್ : ವಿಜಿ ರಾಮ್ ಜೀ ಯೋಜನೆ ರದ್ದುಗೊಳಿಸುವಂತೆ ಆಗ್ರಹಿಸಿ, ನಗರದ ತಾಲೂಕು ಪಂಚಾಯಿತಿ ಕಚೇರಿ ಪಾಂಗಣದಲ್ಲಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಇಸಾಮುದ್ದಿನ್ ಮೀರಾಸಾಬ್ ಮಾತನಾಡಿ, ಕಾರ್ಮಿಕರಿಗೆ ಉದ್ಯೋಗ ಕೇಳಿದರೇ ಹಾರಿಕೆ ಉತ್ತರ ನೀಡುವ ಅಧಿಕಾರಿಗಳು ಉದ್ಯೋಗ ಖಾತ್ರಿ ನೆಪದಲ್ಲಿ ಮನಮಾನಿ ಮಾಡುತ್ತಿರುವ ಕುರಿತು ನಮ್ಮ ಸಂಘಟನೆಗಳಿಗೆ ಇಂಚಿಂಚೂ ಮಾಹಿತಿ ಇದೆ. ಸಮಸ್ಯೆ ಶೀಘ್ರ ಬಗೆಹರಿಸಿ, ಕಾರ್ಮಿಕರಿಗೆ ಉದ್ಯೋಗ ಕಲ್ಪಿಸದಿದ್ದರೇ ಉಗ್ರ ಹೋರಾಟ ನಡೆಸಲಾಗುವುದು ಆ ನಿಟ್ಟಿನಲ್ಲಿ ಇಂದಿನ ಪ್ರತಿಭಟನೆ ಕೇವಲ ಶಾಂಪಲ್ ಎಂದರು.

ಜಿಲ್ಲಾ ಮುಖ್ಯಸ್ಥೆ ಅಂಬುಬಾಯಿ ಮಾಳಗೆ ಮಾತನಾಡಿ, ಕಚೇರಿಗೆ ಬರುವ ಮೇಟ್‌ಗಳೊಂದಿಗೆ ಪಿಡಿಒಗಳು ಕೇವಲ ಮಾತನಾಡಿ ಅವಮಾನಿಸುತಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರೆದರೇ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಮಾಳಗೆ ಮಾತನಾಡಿ, ಕಾರ್ಮಿಕರ ಜೊತೆಗೆ ಅಸಭ್ಯವಾಗಿ ವರ್ತಿಸಿದರೇ ಅಧಿಕಾರಿಗಳಿಗೆ ಅವರ ಶಾಪ್ ತಟ್ಟುತ್ತದೆ ಈ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕೆಂದು ಸಲಹೆ ನೀಡಿದರು.

ತಾಲೂಕಾಧ್ಯಕ್ಷ ದೇವಾನಂದ ಗಾಯಕವಾಡ ಮಾತನಾಡಿ, ಕೆಲಸ ಕೇಳಲು ಬರುವ ಕಾರ್ಮಿಕರನ್ನು ಕಡೆಗಣಿಸಲಾಗುತ್ತಿದೆ ಇದನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು. ಕಾರ್ಮಿಕರನ್ನು ಮತ್ತು ಮೇಟ್‌ಗಳನ್ನು ಗೌರವದಿಂದ ಕಾಣದಿದ್ದರೇ ನಾವು ಅಗೌರವದಿಂದ ನಡೆದುಕೊಳ್ಳುವುದು ಅನಿವಾರ್ಯ ಆಗುತ್ತದೆ ಎಂದು ಎಚ್ಚರಿಸಿದರು.

ಉಪಾಧ್ಯಕ್ಷ ಸೂರ್ಯಕಾಂತ, ಪ್ರಧಾನ ಕಾರ್ಯದರ್ಶಿ ಸಿದ್ರಾಮ ಡಾಂಗೆ, ಶಶಿಕಾಂತ ಡಾಂಗೆ ಸೇರಿದಂತೆ ಇನ್ನೂ ಅನೇಕರು ತಮ್ಮ ಆಕ್ರೋಶಭರಿತ ನುಡಿಗಳನ್ನು ಹೊರಹಾಕಿದರು. ಬಳಿಕ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದೀಪಿಕಾ ನಾಯ್ಕರ್ ಅವರಿಗೆ ಮನವಿಪತ್ರ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ದೀಪಿಕಾ ನಾಯ್ಕರ್ ಹೊಸ ಯೋಜನೆ ಮಾರ್ಗಸೂಚಿ ಇನ್ನೂ ಬಂದಿಲ್ಲ. ಸದ್ಯ ಫಾರ್ಮ 6ಯಾರು ಕೊಡ್ತಾರೊ ಅವುಗಳನ್ನು ಪರಿಶೀಲಿಸಿ, ಹಿಂದಿನ ಉದ್ಯೋಗ ಖಾತ್ರಿ ಯೋಜನೆ ಅಡಿ ಉದ್ಯೋಗ ನೀಡಲಾಗುವುದು ಎಂದು ಭರವಸೆ ನೀಡಿದರು. ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ಜಗನ್ನಾಥ ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿ ಪಿಡಿಒಗಳು ಹಾಜರಿದ್ದರು.

ಹುಮನಾಬಾದ್ ವಿಜಿ ರಾಮ್‌ಜೀ ಯೋಜನೆ ರದ್ದುಗೊಳಿಸುವುದು ಮತ್ತು ಕಾರ್ಮಿಕರಿಗೆ ಸಮರ್ಪಕ ಉದ್ಯೋಗ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದಿಂದ ತಾ.ಪಂ ಕಚೇರಿ ಪ್ರಾಂಗಣದಲ್ಲಿ ಪ್ರತಿಭಟನೆ ನಡೆಸಲಾಯಿತು.